

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಫೆಬ್ರವರಿ 1 ಗುರುವಾರ 2024

ಸಂಪುಟ: 44 | ಸಂಚಿಕೆ: 284 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮಾರ್ಚ್–ಏಪ್ರಿಲ್‌ನಲ್ಲಿ ಭೀಕರ ಬರ, ಬೇಸಿಗೆ ಧಗೆ ಉಗ್ರರೂಪ

ಜನ, ಜಾನುವಾರು ರಕ್ಷಣೆ ಮಾಡಿ

● ಜಿಲ್ಲಾವಾರು ಪ್ರಧಾನ ಕಾರ್ಯದರ್ಶಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ● ಕುಡಿಯುವ ನೀರು, ಮೇವಿನ ಕೊರತೆ ಆಗದಂತೆ ಕ್ರಮ ಕೈಗೊಳ್ಳಿ ● ಮುಂದಿನ ಮೂರು ತಿಂಗಳು ನಮಗೆ ಸವಾಲಾಗಲಿದೆ



ಬೆಂಗಳೂರು, ಜ. 31(ಕೆಎಂಶಿ)– ಭೀಕರ ಬರಗಾಲದ ನಡುವೆಯೇ ಬರುವ ಮಾರ್ಚ್–ಏಪ್ರಿಲ್‌ನಲ್ಲಿ ಬಿಸಿಲಿನ ಬೇಗೆ ಹೆಚ್ಚಲಿದೆ. ಜನ ಹಾಗೂ ಜಾನುವಾರಗಳ ರಕ್ಷಣೆಗೆ ಒತ್ತು ಕೊಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾ ಉಸ್ತುವಾರಿ ಹೊಣೆ ಹೊತ್ತ ಪ್ರಧಾನ ಕಾರ್ಯದರ್ಶಿಗಳಿಗೆ ಸಲಹೆ ನೀಡಿದ್ದಾರೆ.

ವಿಧಾನಸೌಧದ ಮುಂಭಾಗದಲ್ಲಿ ಫೆಬ್ರವರಿ 8ರಂದು ಹಮ್ಮಿಕೊಂಡಿರುವ ಜನಸ್ಪಂದನಾ ಕಾರ್ಯಕ್ರಮದ ಪೂರ್ವಭಾವಿಯಾಗಿ ಇಂದು ಸಮ್ಮೇಳನ ಸಭಾಂಗಣದಲ್ಲಿ ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಬೇಸಿಗೆಯಲ್ಲಿ ಕುಡಿಯುವ ನೀರು, ಮೇವು ಕೊರತೆ ಆಗದಂತೆ, ಜನರು ಗುಳೆ ಹೋಗದಂತೆ ನೋಡಿಕೊಳ್ಳುವುದು ನಿಮ್ಮ ಕರ್ತವ್ಯ, ಇದರಲ್ಲಿ ವ್ಯತ್ಯಾಸ ಕಂಡುಬಂದರೆ ಕಠಿಣ ಕ್ರಮ ಜರುಗಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಈಗಾಗಲೇ ರಾಜ್ಯದ ಬಹುಭಾಗ ಮಳೆ ಇಲ್ಲದೆ ಬರಗಾಲಕ್ಕೆ ಸಿಲುಕಿದೆ, ಮುಂದಿನ ಮೂರ್‍ನಾಲ್ಕು ತಿಂಗಳು ನಮಗೆ ಸವಾಲಾಗಿದೆ, ಇದನ್ನು ನೀವು ನಿಭಾಯಿಸಬೇಕು ಎಂದರು. ಅರಣ್ಯ ಪ್ರದೇಶದಲ್ಲಿ ಕಾಡು ಪ್ರಾಣಿಗಳಿಗೆ ನೀರು, ಮೇವು ದೊರೆಯದೆ ನಾಡಿಗೆ ನುಗ್ಗುವ ಸಾಧ್ಯತೆ ಇದೆ, ಅರಣ್ಯ ಪ್ರದೇಶಗಳಲ್ಲಿ ಮೂಲ ಸೌಕರ್ಯ ಕಲ್ಪಿಸಲು ಒತ್ತು ಕೊಡಿ. ಈ ರೀತಿ ಕ್ರಮಕೈಗೊಳ್ಳುವುದರಿಂದ ಮಾನವ–ವನ್ಯಜೀವಿ ಸಂಘರ್ಷಕ್ಕೆ ಪರಿಹಾರ ದೊರೆಯುವ ಜೊತೆಗೆ ರೈತರ ಜಮೀನಿಗೆ ವನ್ಯ ಜೀವಿಗಳು ನುಗ್ಗುವುದನ್ನು ತಪ್ಪಿಸಬಹುದಾಗಿದೆ. ಮೇವು ಸಾಲದಾದರೆ, ಬೆಳೆಯಬೇಕು, ಇಲ್ಲವೇ ರೈತರಿಂದ ಖರೀದಿಸಿ, ಎಲ್ಲಿಯೂ ಮೇವಿಗೆ ಕೊರತೆಯಾಗದಂತೆ ನೋಡಿಕೊಳ್ಳಿ. ಖಾಸಗಿ ಮತ್ತು ಸರ್ಕಾರಿ ಜಾಗಗಳಲ್ಲಿ ಮೇವು ಬೆಳೆಯಲು ಒತ್ತು ಕೊಡಿ. ಎಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಲಿದೆ ಎಂಬ ಮಾಹಿತಿ ಈಗಾಗಲೇ ನಿಮಗೆ ಇರುತ್ತದೆ. ಅಂತಹ ಕಡೆಗಳಲ್ಲಿ ಮುಂಜಾಗ್ರತೆಯಾಗಿ ಕ್ರಮಕೈಗೊಳ್ಳಿ ಎಂದರು.



ಕಠಿಣ ಸಂದರ್ಭದಲ್ಲಿ ಜಿಲ್ಲಾಡಳಿತ ಚಾಕಚಕ್ಯತೆಯಿಂದ ಕೆಲಸ ಮಾಡಬೇಕು. ಕರ್ತವ್ಯ ಲೋಪ, ನಿರ್ಲಕ್ಷ್ಯ ಮಾಡುವ ಜಿಲ್ಲಾ ಮಟ್ಟದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಿ, ನೀವು ಕ್ರಮ ಕೈಗೊಳ್ಳದಿದ್ದರೆ, ಜಿಲ್ಲಾ ಮಟ್ಟದಲ್ಲಿ ಶಿಸ್ತು ಇರುವುದಿಲ್ಲ. ನಿಮಗೆ ಹೊಣೆಗಾರಿಕೆ ವಹಿಸಿರುವ ಜಿಲ್ಲೆಗಳಿಗೆ ಹೋಗಿ ಆಡಳಿತ ಪರಿಶೀಲಿಸಿದ್ದೀರಾ? ನೀವು ಎಷ್ಟು ಪೊಲೀಸ್ ಠಾಣೆ ಮತ್ತು ಶಾಲೆಗಳಿಗೆ ಭೇಟಿ ನೀಡಿದ್ದೀರಿ ಮಾಹಿತಿ ನೀಡಿ. ನೀವು ಇಲ್ಲಿಯೇ ಕುಳಿತು ಆಡಳಿತ ನಡೆಸಿದರೆ ಶಿಸ್ತು ಬರುವುದಿಲ್ಲ. ನಿಮಗೆ ಎಲ್ಲಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿರುವುದಿಲ್ಲವೋ ಅಂತಹವನ್ನು ಮುಖ್ಯಕಾರ್ಯದರ್ಶಿ ಗಮನಕ್ಕೆ ತಂದು ಕ್ರಮಕೈಗೊಳ್ಳಿ. ● 6ನೇ ಪುಟಕ್ಕೆ

ನಾಮಫಲಕಗಳಲ್ಲಿ ಶೇ.60 ಕನ್ನಡ ಬಳಕೆ ಕಡ್ಡಾಯ ಸುಗ್ರೀವಾಜ್ಞೆ; ರಾಜಭವನ–ಸರ್ಕಾರ ಸರ್ಕಸ್!

ಬೆಂಗಳೂರು, ಜ. 31(ಕೆಎಂಶಿ)–ಅಂಗಡಿ–ಮುಂಗಟ್ಟುಗಳ ನಾಮಫಲಕಗಳಲ್ಲಿ ಶೇ. 60ರಷ್ಟು ಕನ್ನಡ ಬಳಕೆ ಕಡ್ಡಾಯವಾಗಿ ಜಾರಿಗೊಳಿಸುವ ಸುಗ್ರೀವಾಜ್ಞೆ ವಿಷಯದಲ್ಲಿ ರಾಜಭವನ ಮತ್ತು ಸರ್ಕಾರದ ನಡುವೆ ಮುಸುಕಿನ ಗುದ್ದಾಟ ನಡೆದಿದೆ.

ನಾಮಫಲಕ ಕಡ್ಡಾಯ ಸುಗ್ರೀವಾಜ್ಞೆಗೆ ರಾಜ್ಯಪಾಲರು ಸಹಿ ಮಾಡದೆ ಹಿಂತಿರುಗಿಸಿದ್ದು, ಇದನ್ನು ಪುನರ್ ಪರಿಶೀಲಿಸುವಂತೆ ಡಿಸಿಎಂ ● 6ನೇ ಪುಟಕ್ಕೆ

‘ಗರೀಬಿ ಹಠಾವೋ’ ಕೇಳಿದ್ದೆವು; ದೇಶದಲ್ಲಿ ಈಗ ಕಾರ್ಯಗತವಾಗಿದೆ

● ಸಂಸತ್ ಉಭಯ ಸದನ ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಷಣ ● ಕಳೆದ 10 ವರ್ಷದಲ್ಲಿ 25 ಕೋಟಿ ಜನ ಬಡತನದಿಂದ ಹೊರ ಬಂದಿದ್ದಾರೆ



ನವದೆಹಲಿ, ಜ.31–ಸಂಸತ್ತಿನ ಬಜೆಟ್ ಅಧಿವೇಶನ ಬುಧವಾರ ಆರಂಭವಾಯಿತು. ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರು ಸಂಸತ್ತಿನ ಉಭಯ ಸದನಗಳನ್ನುದ್ದೇಶಿಸಿ ಭಾಷಣ ಮಾಡಿದರು. ನಾವು ಬಾಲ್ಯದಿಂದಲೂ 'ಗರೀಬಿ ಹಠಾವೊ' ಘೋಷಣೆಯನ್ನು ಕೇಳಿದ್ದೇವೆ. ಆದರೆ ಇಂದು ನಮ್ಮ ಜೀವನದಲ್ಲಿ ದೊಡ್ಡ ಪ್ರಮಾಣದಲ್ಲಿ ಬಡತನ ನಿವಾರಣೆಯಾಗಿರುವುದನ್ನು ನೋಡುತ್ತಿದ್ದೇವೆ ಎಂದು ಕೇಂದ್ರ ಸರ್ಕಾರದ ಸಾಧನೆಗಳನ್ನು ಶ್ಲಾಘಿಸಿದರು.

ನೀತಿ ಆಯೋಗದ ಪ್ರಕಾರ ಸರ್ಕಾರದ 10 ವರ್ಷಗಳ ಆಡಳಿತದಲ್ಲಿ ಸುಮಾರು 25 ಕೋಟಿ ಜನರು ಬಡತನದಿಂದ ಹೊರ ಬಂದಿದ್ದಾರೆ. ನಮ್ಮ ಸರ್ಕಾರ ಇಲ್ಲಿಯವರೆಗೆ ಅಭಿವೃದ್ಧಿಯಿಂದ ದೂರ ಇದ್ದವರ ಬಗ್ಗೆ ಕಾಳಜಿ ವಹಿಸಿದೆ. ಕಳೆದ 10 ವರ್ಷದಲ್ಲಿ ಸಾವಿರಾರು ಬುಡಕಟ್ಟು ಹಳ್ಳಿಗಳಿಗೆ ವಿದ್ಯುತ್ ಮತ್ತು ರಸ್ತೆ ಸಂಪರ್ಕ ನೀಡಿದೆ. ಲಕ್ಷಾಂತರ ಬುಡಕಟ್ಟು ಕುಟುಂಬಗಳಿಗೆ ಪೈಪ್‌ಲೈನ್ ಮೂಲಕ ಶುದ್ಧ ಕುಡಿಯುವ ನೀರು ನೀಡಲಾಗುತ್ತಿದೆ. ಕೇಂದ್ರ ಸರ್ಕಾರವು ಸಾವಿರಾರು ಬುಡಕಟ್ಟು ಪ್ರಾಬಲ್ಯದ ಹಳ್ಳಿಗಳಿಗೆ 4ಜಿ ಇಂಟರ್ನೆಟ್ ಸಂಪರ್ಕ ಒದಗಿಸಿದೆ. ಬುಡಕಟ್ಟು ಕುಟುಂಬಗಳಲ್ಲಿ ಹಲವಾರು ತಲೆಮಾರುಗಳು ಸಿಕಲ್ ಸೆಲ್ ಅನೀಮಿಯಾದಿಂದ ಬಳಲುತ್ತಿದ್ದಾರೆ. ಅದರ ನಿವಾರಣೆಗೆ ಕೇಂದ್ರ ಸರ್ಕಾರ ಪ್ರಥಮ ಬಾರಿಗೆ ರಾಷ್ಟ್ರೀಯ ಮಿಷನ್ ಆರಂಭಿಸಿದ್ದು, ಇದುವರೆಗೆ ಸುಮಾರು 1.40 ಕೋಟಿ ಜನರು ಈ ಯೋಜನೆಯಡಿ ತಪಾಸಣೆಗೊಳಪಟ್ಟಿದ್ದಾರೆ ಎಂದು ಅವರು ಹೇಳಿದರು.

ಕಳೆದ ವರ್ಷಗಳಲ್ಲಿ ಜಗತ್ತು ಎರಡು ಯುದ್ಧಗಳಿಗೆ ಸಾಕ್ಷಿಯಾಗಿದೆ ಹಾಗೂ ಕೊರೊನಾದಂತಹ ಸಾಂಕ್ರಾಮಿಕವನ್ನು ಎದುರಿಸಿದೆ. ಅಂತಹ ಜಾಗತಿಕ ಬಿಕ್ಕಟ್ಟುಗಳ ಹೊರತಾಗಿಯೂ ಭಾರತ ಸರ್ಕಾರ ದೇಶದಲ್ಲಿ ಹಣದುಬ್ಬರವನ್ನು ನಿಯಂತ್ರಣದಲ್ಲಿರಿಸಿದೆ ಮತ್ತು ಸಾಮಾನ್ಯ ಭಾರತೀಯರಿಗೆ ಹೊರೆಯಾಗಲು ಬಿಡಲಿಲ್ಲ. ಅಭಿವೃದ್ಧಿ ಹೊಂದಿದ ಭಾರತದ ಭವ್ಯ ಸೌಧವು ಯುವಶಕ್ತಿ, ಮಹಿಳಾ ಶಕ್ತಿ, ● 6ನೇ ಪುಟಕ್ಕೆ

ಇಂದು ಕೇಂದ್ರ ಬಜೆಟ್




ನವದೆಹಲಿ: ಕೇಂದ್ರ ಸರ್ಕಾರ ಗುರುವಾರ ಮಧ್ಯಂತರ ಬಜೆಟ್ ಮಂಡಿಸಲಿದೆ. ಚುನಾವಣಾ ವರ್ಷವಾದ ಕಾರಣ ಪೂರ್ಣ ಪ್ರಮಾಣದ ಬಜೆಟ್ ಮಂಡನೆಗೆ ಅವಕಾಶ ಇಲ್ಲ. ಕೇವಲ ಲೇಖಾನುದಾನ ಮಾತ್ರ ಮಂಡಿಸಲಾಗುತ್ತದೆ. ಚುನಾವಣೆ ಮುಗಿದು ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಪೂರ್ಣ ಪ್ರಮಾಣದ ಬಜೆಟ್ ಮಂಡಿಸಲಾಗುತ್ತದೆ.

ಬೆಳಗ್ಗೆ 11 ಗಂಟೆಗೆ ಹೊಸದಾಗಿ ಲೋಕಾರ್ಪಣೆಯಾದ ಲೋಕಸಭೆಯಲ್ಲಿ ಮಧ್ಯಂತರ ಬಜೆಟ್ ಮಂಡನೆ ಆಗಲಿದೆ. ಹಣಕಾಸು ಸಚಿವೆ ನಿರ್ಮಲಾ ಸೀತಾ ರಾಮನ್ ಸತತ ಆರನೇ ಬಜೆಟ್ ಮಂಡಿಸಿದ ಕೀರ್ತಿಗೆ ಪಾತ್ರರಾಗಲಿ ದ್ದಾರೆ. ಲೋಕ ಸಭೆ ಚುನಾವಣೆಯಲ್ಲಿ ಹ್ಯಾಟ್ರಿಕ್ ಗೆಲುವಿನ ವಿಶ್ವಾಸದಲ್ಲಿರುವ ಮೋದಿ ಸರ್ಕಾರ ನಾಳೆಯ ಬಜೆಟ್‌ನಲ್ಲಿ ಜನಾಕರ್ಷಕ ನಿರ್ಣಯಗಳನ್ನೇ ನಾದ್ರೂ ಪ್ರಕಟಿಸುತ್ತಾ ಇಲ್ಲವೇ, ಮೂಲಧನ ವ್ಯಯವನ್ನು ಹೆಚ್ಚಿಸುವ ಮೂಲಕ ಆರ್ಥಿಕ ವ್ಯವಸ್ಥೆಗೆ ಬೂಸ್ಟ್ ನೀಡುತ್ತದೆಯೇ, ಜನ ಕಲ್ಯಾಣ ಮತ್ತು ಅಭಿವೃದ್ಧಿ ವಿಚಾರದಲ್ಲಿ ಸಮತೋಲನ ಸಾಧಿಸುತ್ತದೆಯೇ, ಜನಪ್ರಿಯತೆಯ ಹಳಿ ಮೇಲೆ ಸಾಗುತ್ತದೆಯೇ ಇಂತಹ ಹಲವು ಚರ್ಚೆಗಳು ನಡೆಯುತ್ತಿವೆ.ಇದು ವೋಟ್ ಆನ್ ಅಕೌಂಟ್ ಆದರೂ ಚುನಾವಣೆ ಸನಿಹದಲ್ಲಿರುವ ಕಾರಣ ವಿವಿಧ ವರ್ಗಗಳ ಮೇಲೆ ಮೋದಿ ಸರ್ಕಾರ ಕೃಪೆ ತೋರಬಹುದು ಎಂಬ ಮಾತುಗಳು ಕೇಳಿಬರುತ್ತಿವೆ.

ಇಡಿಯಿಂದ ಜಾರ್ಖಂಡ್ ಸಿಎಂ ಹೇಮಂತ್ ಸೊರೇನ್ ಬಂಧನ

● ಭೂ ಹಗರಣ, ಅಕ್ರಮ ಹಣ ವರ್ಗಾವಣೆ ಆರೋಪ
● ಚಂಪೈ ಸೊರೇನ್ ಜಾರ್ಖಂಡ್ ನೂತನ ಸಿಎಂ



ಹೇಮಂತ್ ಸೊರೇನ್



ಚಂಪೈ ಸೊರೇನ್

ರಾಂಚಿ, ಜ.31–ಭೂ ಹಗರಣ ಹಾಗೂ ಅಕ್ರಮ ಹಣ ವರ್ಗಾವಣೆ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ (ಇಡಿ) ಅಧಿಕಾರಿಗಳು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರನ್ನು ಬುಧವಾರ ಸಂಜೆ ಬಂಧಿಸಿದರು.

ತಮ್ಮ ಬಂಧನವಾಗುತ್ತಿದ್ದಂತೆಯೇ ಸೊರೇನ್, ಇಡಿ ಅಧಿಕಾರಿಗಳೊಟ್ಟಿಗೆ ರಾಜಭವನಕ್ಕೆ ತೆರಳಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರು ಸೊರೇನ್ ಅವರ ರಾಜೀನಾಮೆಯನ್ನು ಅಂಗೀಕರಿಸಿದ್ದಾರೆ. ● 6ನೇ ಪುಟಕ್ಕೆ



ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆ ನಿರ್ದೇಶಕರಾಗಿ ಸುದೀರ್ಘ ಸೇವೆ ಸಲ್ಲಿಸಿ ಬುಧವಾರ ನಿವೃತ್ತರಾದ ಪದ್ಮಶ್ರೀ ಪುರಸ್ಕೃತ ಡಾ.ಸಿ.ಎನ್.ಮಂಜುನಾಥ್ ಅವರನ್ನು ಮೈಸೂರಿನ ಎಪಿಎನ್ ಪ್ರಾಪರ್ಟೀಸ್ ಮ್ಯಾನೇಜಿಂಗ್ ಪಾರ್ಟ್ನರ್ ಎ.ಪಿ.ನಾಗೇಶ್, ಬಿಎಲ್ ಅಂಡ್ ಬಿಎಲ್ ಡೆವಲಪರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಬಿ.ಸತೀಶ್ ಹಾಗೂ ನಿವೃತ್ತ ಬ್ಯಾಂಕ್ ಅಧಿಕಾರಿ ಸಿ.ಕೆ.ರಮೇಶ್ ಆತ್ಮೀಯವಾಗಿ ಅಭಿನಂದಿಸಿದರು.

ಹನುಮ ಧ್ವಜ ವಿವಾದಕ್ಕೆ ತೋರಿದ ಕಾಳಜಿಯನ್ನು ಕೇಂದ್ರದಿಂದ ಬೆಳೆ ನಷ್ಟ ಪರಿಹಾರ ತರಲು ಹೆಚ್‌ಡಿಕೆ ತೋರಲಿ

ಮೈಸೂರು ಜಿಲ್ಲಾ ಕಾಂಗ್ರೆಸ್ ವಕ್ತಾರ ರಾಜೇಶ್




ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಎಸ್.ರಾಜೇಶ್ ಮಾತನಾಡಿದರು.

ಮೈಸೂರು,ಜ.31(ಜಿಎ)–ಮಂಡ್ಯ ಜಿಲ್ಲೆ ಕೆರಗೋಡು ಗ್ರಾಮದ ಹನುಮ ಧ್ವಜ ವಿವಾದ ಕುರಿತಂತೆ ಈಗ ಹೆಚ್ಚಿನ ಕಾಳಜಿ ತೋರಿರುವ ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಅವರು ಅದರ ಬದಲು ಜಿಲ್ಲೆಯ ಬೆಳೆನಷ್ಟದ ಕುರಿತಂತೆ ಕೇಂದ್ರದಿಂದ ಅನುದಾನ ತರಲು ಶ್ರಮಿಸಲಿ ಎಂದು ನಗರ ಜಿಲ್ಲಾ ಕಾಂಗ್ರೆಸ್ ವಕ್ತಾರ ಎಸ್. ರಾಜೇಶ್ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದಿಂದ ರಾಜ್ಯಕ್ಕೆ ನೀಡಬೇಕಿರುವ ಜಿಎಸ್‌ಟಿ ಹಣ ಹೆಚ್ಚಿನ ಪ್ರಮಾಣದಲ್ಲಿ ಬಂದಿಲ್ಲ. ಈ ನಿಟ್ಟಿನಲ್ಲಿ ಎಚ್.ಡಿ. ಕುಮಾರಸ್ವಾಮಿ ಹೋರಾಟ ನಡೆಸಲಿ. ಚಿಕ್ಕಮಗಳೂರು, ಬಾಬಾ ಬುಡನ್‌ಗಿರಿಯಂತೆ ಮಂಡ್ಯವನ್ನೂ ಪರಿವರ್ತಿಸಲು ಎಚ್.ಡಿ.ಕುಮಾರಸ್ವಾಮಿ ಅವರು ಸಿ.ಟಿ. ರವಿ ಅವರೊಡನೆ ಕೈಜೋಡಿಸುತ್ತಿರುವುದು ಸರಿಯಲ್ಲ ಎಂದು ಕಿಡಿಕಾರಿದರು.

ನಂಜನಗೂಡು ತಾಲೂಕಿನ ಹಲ್ಲರೆ ಗ್ರಾಮದಲ್ಲಿ ಜಾತಿ ಸಂಘರ್ಷ ಉಂಟು ಮಾಡಲು ಬಿಜೆಪಿ ಪಿತೂರಿ ನಡೆಸುತ್ತಿದೆ ಎಂದು ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ಮುಖಂಡರಾದ ರವಿ, ಎಸ್.ಎ.ರಹೀಂ, ಸಿದ್ದರಾಜು ಇದ್ದರು.

ಭೂಮಿಗಿರಿ ಪ್ರಕಾಶನದಿಂದ ದ.ರಾ.ಬೇಂದ್ರೆ ಜನ್ಮದಿನಾಚರಣೆ



ಭೂಮಿಗಿರಿ ಪ್ರಕಾಶನದ ವತಿಯಿಂದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ದ.ರಾ.ಬೇಂದ್ರೆ ಅವರ 128 ಜನ್ಮದಿನ ಆಚರಿಸಲಾಯಿತು.

ಮೈಸೂರು,ಜ.31–ಭೂಮಿಗಿರಿ ಪ್ರಕಾಶನದ ವತಿಯಿಂದ ನಾಡಿನ ಹೆಸರಾಂತ ಸಾಹಿತಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ, ಮಹಾನ್ ಪದ ಮಾಂತ್ರಿಕ, ಕವಿ ಶ್ರೇಷ್ಠ, ಅಂಬಿಕಾತನಯದತ್ತ, ಕರ್ನಾಟಕದ ವರಕವಿ ದ.ರಾ. ಬೇಂದ್ರೆ ಅವರ 128ನೇ ಜನ್ಮದಿನ ಆಚರಿಸಲಾಯಿತು.

ಭೂಮಿಗಿರಿ ಪ್ರಕಾಶನದ ಬೆಟ್ಟೇಗೌಡ ಮಾತನಾಡಿ, ದ.ರಾ.ಬೇಂದ್ರೆಯವರು ಶಾಸ್ತ್ರದಲ್ಲಿ ದೋಷವಿದ್ದರೆ ಹೃದಯದಲ್ಲಿ ತಿದ್ದಬಹುದು, ಹೃದಯದಲ್ಲಿ ದೋಷವಿದ್ದರೆ ಶಾಸ್ತ್ರ ಏನು ಮಾಡುವುದು ಎಂದು ಹೇಳಿದ್ದಾರೆ. ಸಾವಿಗೆ ನಾ ಹೆದರುವುದಿಲ್ಲ. ಯಾಕೆಂದರೆ ನಾ ಇರೋತನಕ ಅದು ಬರೋದಿಲ್ಲ ಅದು ಬಂದಾಗ ನಾ ಇರೋದಿಲ್ಲ ಎಂದು ಹೇಳಿದ್ದಾರೆ. ನಕ್ಕ ಸಾಯ್ರೋ ನಕ್ಕ ಸಾಯ್ರಿ ನಕ್ಷತ್ರ ಅಕ್ಕಿರಿ, ಚಿಂತಿ ಬಿಡ್ರೋ, ಚಿಂತಿ ಬಿಡ್ರಿ, ಚಿಂತಿ ಬಿಟ್ರ ಚಿರಂಜೀವಿ ಅಕಿರಿ ಎಂದು ಹೇಳಿದ್ದಾರೆ.

ಇವರ ನಾಕುತಂತಿ ಕವನ ಸಂಕಲನಕ್ಕೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ. 1968ರಲ್ಲಿ ಪದ್ಮಶ್ರೀ ಪ್ರಶಸ್ತಿ ಲಭಿಸಿದೆ. ಬೇಂದ್ರೆ ಅವರು 1943ರಲ್ಲಿ ಶಿವಮೊಗ್ಗದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. 1958ರಲ್ಲಿ ಅರಳು ಮರಳು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಕೂಡ ಲಭಿಸಿದೆ. ಕಾಶಿ ವಿದ್ಯಾಪೀಠ ವಾರಣಾಸಿ, ಮೈಸೂರು ಹಾಗೂ ಕರ್ನಾಟಕ ವಿಶ್ವ ವಿದ್ಯಾನಿಲಯಗಳ ಗೌರವ ಡಾಕ್ಟರೇಟ್ ಪಡೆದಿದ್ದಾರೆ ಎಂದರು. ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಅನಂತ ನಾರಾಯಣ, ಫಾಲ್ಕನ್ ಮಾದೇಗೌಡ, ಶಿವಕುಮಾರ್‌ಗೌಡ, ನಜರ್‌ಬಾದ್ ನಟರಾಜ್ ವರುಣ ಮಹದೇವ್, ಅಜಯ್ ಶಾಸ್ತ್ರಿ, ವಿಕ್ರಮ್ ಅಯ್ಯಂಗಾರ್, ಕುಂಬಾರಕೊಪ್ಪಲಿನ ದೀಪಕ್‌ಗೌಡ, ಸುಬ್ಬರಾವ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮುಡಾ ಮಾಜಿ ಅಧ್ಯಕ್ಷ ಪಿ.ಗೋವಿಂದರಾಜು ನಿಧನ



ಮೈಸೂರು,ಜ.31– ಸುದೀರ್ಘ ಅನಾರೋಗ್ಯದಿಂದ ಬಳಲುತ್ತಿದ್ದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಮಾಜಿ ಅಧ್ಯಕ್ಷ ಹಾಗೂ ಹಿರಿಯ ಕಾಂಗ್ರೆಸ್ ಮುಖಂಡ ಪಿ.ಗೋವಿಂದರಾಜು (74) ಅವರು ಮೈಸೂರಿನ ಸಿದ್ಧಾರ್ಥನಗರದ ತಮ್ಮ ನಿವಾಸದಲ್ಲಿ ಬುಧವಾರ ಮಧ್ಯಾಹ್ನ ನಿಧನರಾದರು.

ಉದ್ಯಮಿಯೂ ಆದ ಪಿ.ಗೋವಿಂದರಾಜು, ಮಾಜಿ ಮುಖ್ಯಮಂತ್ರಿ ಬಂಗಾರಪ್ಪ ಅವರ ಆಪ್ತರಾಗಿದ್ದರು. ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ 1991–92ರಲ್ಲಿ ಗೋವಿಂದರಾಜು ಅವರು ಮುಡಾ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯೂ ಆಗಿದ್ದ ಗೋವಿಂದರಾಜು, ಎಸ್.ಎಂ.ಕೃಷ್ಣ ಸರ್ಕಾರದಲ್ಲಿ ಜವಳಿ ನಿಗಮದ ಅಧ್ಯಕ್ಷರೂ ಆಗಿದ್ದರು. 1996ರ ಲೋಕಸಭಾ ಚುನಾವಣೆಯಲ್ಲಿ ಮೈಸೂರು ಕ್ಷೇತ್ರದಲ್ಲಿ ಬಂಗಾರಪ್ಪನವರು ಕಟ್ಟಿದ ಕರ್ನಾಟಕ ಕಾಂಗ್ರೆಸ್ ಪಕ್ಷ (ಕೆಸಿಪಿ)ದಿಂದ ಗೋವಿಂದರಾಜು ಅವರು ಸ್ಪರ್ಧಿಸಿ, ಪರಾಜಿತರಾಗಿದ್ದರು.

ಮೃತರು ಪತ್ನಿ ರತ್ನಮ್ಮ, ಪುತ್ರ ಉದ್ಯಮಿ ಎಂ.ಜಿ.ಗುರುರಾಜ್, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಬನ್ನೂರು ರಸ್ತೆಯ ರಂಗಚಾರಿಹುಂಡಿಯಲ್ಲಿರುವ ಮೃತರ ತೋಟದಲ್ಲಿ ನಾಳೆ (ಫೆ.1) ಮಧ್ಯಾಹ್ನ 1.30ರೊಳಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಗೋವಿಂದರಾಜು ಅವರ ನಿಧನಕ್ಕೆ ಮಾಜಿ ಶಾಸಕ ಡಾ.ಭಾರತಿ ಶಂಕರ್, ಕಾಂಗ್ರೆಸ್ ಮುಖಂಡ ವಿಕ್ರಾಂತ್ ಪಿ.ದೇವೇಗೌಡ, ಮೈಲಾಕ್ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್, ಕಾಂಗ್ರೆಸ್ ಮುಖಂಡ ಮಾಂಬಳ್ಳಿ ನಂಜುಂಡಸ್ವಾಮಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಸಂತಾಪ ಸೂಚಿಸಿದ್ದಾರೆ.



ಎಸ್.ಎನ್.ಗಣೇಶ್‌ರಾವ್

ಬೆಮೆಲ್ ಉದ್ಯೋಗಿ ಹಾಗೂ ಮೈಸೂರಿನ ಕಾಶಿಪತಿ ಅಗ್ರಹಾರದ ನಿವಾಸಿ ಎಸ್.ಎನ್.ಗಣೇಶ್‌ರಾವ್ (56) ಬುಧವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಚಾಮುಂಡಿ ಬೆಟ್ಟ ಪಾದದ ಬಳಿಯಿರುವ ಹರಿಶ್ಚಂದ್ರಘಾಟ್‌ನಲ್ಲಿ ನಾಳೆ (ಗುರುವಾರ) ಮಧ್ಯಾಹ್ನ 2 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತಾಯಿ ಮಡಿಲು ಸೇರಿದ ಚಿರತೆ ಮರಿಗಳು

ಮೈಸೂರು, ಜ.31(ಎಂಟಿವೈ)– ಮೈಸೂರು ಜಿಲ್ಲೆ ಸೇರಿದಂತೆ ವಿವಿಧೆಡೆ ಕಬ್ಬು ಕಟಾವು ಆರಂಭವಾಗಿದ್ದು, ಕಬ್ಬಿನ ಗದ್ದೆಯಲ್ಲಿ ಚಿರತೆ ಮರಿಗಳು ಸಿಗುತ್ತಿರುವ ಪ್ರಕರಣ ಹೆಚ್ಚಾಗುತ್ತಿದೆ. ಮೈಸೂರು ತಾಲೂಕಿನ ಮಾರಶೆಟ್ಟಹಳ್ಳಿಯ ಗದ್ದೆಯೊಂದರಲ್ಲಿ ಮೂರು ದಿನದ ಹಿಂದೆ ಸಿಕ್ಕಿದ್ದ ಮೂರು ಚಿರತೆ ಮರಿಗಳನ್ನು ತಾಯಿ ಮಡಿಲಿಗೆ ಸೇರಿಸುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ.

ಮಾರಶೆಟ್ಟಹಳ್ಳಿ ಗ್ರಾಮದ ಬಸವಣ್ಣ ಎಂಬುವವರ ಕಬ್ಬಿನ ಗದ್ದೆಯಲ್ಲಿ 3 ದಿನದ ಹಿಂದೆ ಕಟಾವು ಮಾಡುವ ವೇಳೆ ಒಂದು ತಿಂಗಳಿನ ಮೂರು ಚಿರತೆ ಮರಿಗಳು ಸಿಕ್ಕಿದ್ದವು. ವಿಷಯ ತಿಳಿದು ಸ್ಥಳಕ್ಕೆ ತೆರಳಿ ಪರಿಶೀಲಿಸಿದ ಅರಣ್ಯಾಧಿಕಾರಿಗಳ ತಂಡ ಹಾಲು ಕುಡಿಯುವ ಹಂತದಲ್ಲಿದ್ದ ಚಿರತೆ ಮರಿಗಳನ್ನು ಸ್ಥಳೀಯರ ಸಹಕಾರ ಪಡೆದು ತಾಯಿ ಮಡಿಲಿಗೆ ಸೇರಿಸುವ ಪ್ರಯತ್ನ ಮಾಡಿದ್ದರು. ಮರಿ ಸಿಕ್ಕಿದ ಸ್ಥಳದಲ್ಲಿ ಬೋನೊಂದನ್ನು ಇಟ್ಟು, ಅದರ ಒಂದು ಭಾಗದಲ್ಲಿ ಮರಿಗಳನ್ನು ಇಡಲಾಗಿತ್ತು. ಸೋಮವಾರ, ಮಂಗಳವಾರ ಬೋನಿನ ಬಳಿ ಬರದೆ ಅಂತರ ಕಾಯ್ದುಕೊಂಡಿದ್ದ ತಾಯಿ ಚಿರತೆ, ಇಂದು ಮುಂಜಾನೆ ಕರುಳ ಕುಡಿಗಾಗಿ ಬೋನಿಗೆ ಬಂದು ಸೆರೆ ಸಿಕ್ಕಿದೆ.

ಒಂದು ತಿಂಗಳಿನ ಎರಡು ಗಂಡು, ಒಂದು ಹೆಣ್ಣು ಮರಿ ಹಾಗೂ 3 ವರ್ಷದ ತಾಯಿ ಚಿರತೆಯನ್ನು ಅರಣ್ಯ ಇಲಾಖೆ ರಕ್ಷಿಸಿ, ಸುರಕ್ಷಿತ ಸ್ಥಳದಲ್ಲಿರಿಸಲಾಗಿದೆ. ಮೂರು ದಿನ ತಾಯಿಯಿಂದ ದೂರವುಳಿದಿದ್ದ ಹಿನ್ನೆಲೆಯಲ್ಲಿ ಮರಿಗಳನ್ನು ತನ್ನ ಬಳಿ ಸೇರಿಸಿಕೊಳ್ಳಲು ಹಿಂದೇಟು ಹಾಕಬಹುದೆಂಬ ಮುಂಜಾಗ್ರತೆಯಿಂದ ಸುರಕ್ಷಿತ ಸ್ಥಳದಲ್ಲಿ ತಾಯಿ ಮತ್ತು ಮರಿಗಳನ್ನು ಇಟ್ಟು, ಅದರ ವರ್ತನೆಯನ್ನು ಗಮನಿಸಲಾಗುತ್ತಿದೆ. ತಾಯಿ ಚಿರತೆಯಲ್ಲಿ ಸಹಜ ವರ್ತನೆ ಕಂಡು ಬಂದರೆ ಅರಣ್ಯ ಪ್ರದೇಶದಲ್ಲಿ ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ. ಆಯರಹಳ್ಳಿಯಲ್ಲಿ ಕಳೆದ ತಿಂಗಳು ಒಂದು ಕಪ್ಪು ಮರಿ ಸೇರಿದಂತೆ 3 ಚಿರತೆ ಮರಿಗಳು ಸಿಕ್ಕಿದ್ದವು. ಅವುಗಳನ್ನು 9 ದಿನದ ಸತತ ಪ್ರಯತ್ನದಿಂದ ತಾಯಿ ಮಡಿಲಿಗೆ ಸೇರಿಸಲಾಗಿತ್ತು. ಸ್ಥಳಕ್ಕೆ ಎಸಿಎಫ್ ಲಕ್ಷ್ಮೀಕಾಂತ, ಆರ್‌ಎಫ್‌ಓ ಕೆ.ಸುರೇಂದ್ರ ಹಾಗೂ ಇನ್ನಿತರರು ತೆರಳಿ ತಾಯಿ ಚಿರತೆ ಮತ್ತು ಮರಿಗಳನ್ನು ಸುರಕ್ಷಿತ ಸ್ಥಳಕ್ಕೆ ಕೊಂಡೊಯ್ದರು.



ಮಾರಶೆಟ್ಟಹಳ್ಳಿಯಲ್ಲಿ ಬೋನಿಗೆ ಬಿದ್ದ ಚಿರತೆ.



ಮಾರಶೆಟ್ಟಹಳ್ಳಿ ಕಬ್ಬಿನ ಗದ್ದೆಯಲ್ಲಿ ಸಿಕ್ಕಿದ್ದ ಚಿರತೆ ಮರಿಗಳು.



ಮೈಸೂರು ವಿನಾಯಕನಗರ(ಪಡುವಾರಹಳ್ಳಿ)ದಲ್ಲಿ ಶಿಥಿಲಾವಸ್ಥೆಯಲ್ಲಿದ್ದ ಅರಳಿಕಟ್ಟೆಯನ್ನು ಮಾಜಿ ಕಾರ್ಪೋರೇಟರ್ ಭಾಗ್ಯ ಮಾದೇಶ್ ಅವರು ಸ್ವಂತ ಖರ್ಚಿನಲ್ಲಿ ನವೀಕರಣಗೊಳಿಸಿದ್ದು, ಇತ್ತೀಚೆಗೆ ಲೋಕಾರ್ಪಣೆಗೊಳಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ, ಮಾಜಿ ಕಾರ್ಪೋರೇಟರ್‌ಗಳಾದ ಭಾಗ್ಯ ಮಾದೇಶ್, ಮಾದೇಶ್ ಮತ್ತಿತರರು ಉಪಸ್ಥಿತರಿದ್ದರು.

ನಂಜನಗೂಡು ಬಳಿ ಸೆರೆ ಸಿಕ್ಕ ಹುಲಿ ಮೃಗಾಲಯದ ಪುನರ್ ವಸತಿ ಕೇಂದ್ರದಲ್ಲಿ ಚೇತರಿಕೆ



ಮೈಸೂರು, ಜ.31(ಎಂಟಿವೈ)– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಗ್ರಾಮ ನಂಜನಗೂಡು ತಾಲೂಕಿನ ಬಳ್ಳೂರುಹುಂಡಿ ಗ್ರಾಮದಲ್ಲಿ ಮಂಗಳವಾರ ಸೆರೆ ಹಿಡಿದು ತರಲಾದ ಹುಲಿ ಕೂರ್ಗಳ್ಳಿಯಲ್ಲಿರುವ ಮೃಗಾಲಯದ ಪುನರ್ವಸತಿ ಕೇಂದ್ರದಲ್ಲಿ ಚೇತರಿಸಿಕೊಳ್ಳುತ್ತಿದೆ.

ವಯೋಸಹಜ ಸಮಸ್ಯೆ ಹಾಗೂ ಬೇರೊಂದು ಹುಲಿ ಅಥವಾ ಪ್ರಾಣಿ ಬೇಟೆ ವೇಳೆ ಗಾಯಮಾಡಿಕೊಂಡಿರುವ ಸ್ಥಿತಿಯಲ್ಲಿರುವ 12 ವರ್ಷದ ಹೆಣ್ಣು ಹುಲಿ ಮಂಗಳವಾರ ಸಂಜೆಯಷ್ಟೇ ಕಾಡಿನಿಂದ ಕಾಡಂಚಿನ ಗ್ರಾಮದ ಹೊಲದತ್ತ ಬಂದಿತ್ತು. ಈ ಹುಲಿ ಗ್ರಾಮದ ಸುರೇಶ್ ಎಂಬುವರ ಮೇಲೆ ದಾಳಿ ನಡೆಸಿ ಗಾಯಗೊಳಿಸಿತ್ತು. ನಂತರ ಹೊಲವೊಂದರ ಬಳಿ ಇದ್ದ ಹುಲಿಯನ್ನು ಅರಣ್ಯ ಸಿಬ್ಬಂದಿ ಕ್ಷಿಪ್ರ ಕಾರ್ಯಾಚರಣೆ ನಡೆಸಿ, ಬಂಡೀಪುರದ ಪಶುವೈದ್ಯ ಡಾ.ವಾಸೀಂ ಮಿರ್ಜಾ ಹುಲಿಗೆ ಅರವಳಿಕೆ ಚುಚ್ಚು ಮದ್ದು ನೀಡಿ ಸೆರೆ ಹಿಡಿದಿದ್ದರು.

ರಾತ್ರಿಯೇ ಸೆರೆ ಹಿಡಿದ ಹುಲಿಯನ್ನು ಮೈಸೂರಿನ ಕೂರ್ಗಳ್ಳಿಯಲ್ಲಿರುವ ಮೃಗಾಲಯದ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿತ್ತು. ರಾತ್ರಿ ಹುಲಿಗೆ ಅರವಳಿಕೆ ಮದ್ದು ನೀಡಿರುವುದರಿಂದ ಬುಧವಾರ ದಿನವಿಡೀ ಹುಲಿ ಆರೈಕೆ ಮಾಡಲಾಯಿತು. ಸೆರೆ ಸಿಕ್ಕಿರುವ ಹುಲಿಗೆ 12 ವರ್ಷ ವಯಸ್ಸಾಗಿದ್ದು, ಎರಡೂ ಕೋರೆಹಲ್ಲುಗಳು ಬಿದ್ದಿವೆ. ಅಲ್ಲದೆ, ಬಲಗಣ್ಣಿನ ಬಳಿ ಹಳೆಯ ಗಾಯದ ಗುರುತು ಕಂಡು ಬಂದಿದ್ದು, ಆ ಕಣ್ಣಿನ ದೃಷ್ಟಿ ಕಳೆದುಕೊಂಡಿರುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ. ಅಲ್ಲದೆ, ಹುಲಿ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದೆ.

ಕ್ಷಿಪ್ರ ಕಾರ್ಯಾಚರಣೆ ಅನಿವಾರ್ಯವಾಗಿತ್ತು

ನಂಜನಗೂಡು ತಾಲೂಕಿನ ಬಳ್ಳೂರುಹುಂಡಿ ಗ್ರಾಮದಲ್ಲಿ ಹುಲಿ ಕಾಣಿಸಿಕೊಂಡಿರುವ ಸುದ್ದಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಹೆಚ್ಚಿನ ಸಿಬ್ಬಂದಿಗಳ ತಂಡ ಕಳುಹಿಸಲಾಗಿತ್ತು. ಅಷ್ಟರಲ್ಲಾಗಲೇ ಹುಲಿ ಕುಳಿತಿದ್ದ ಸ್ಥಳದ ಸಮೀಪ ಬಂದ ವ್ಯಕ್ತಿ ಮೇಲೆ ದಾಳಿ ಮಾಡುವ ಪ್ರಯತ್ನ ಮಾಡಿತ್ತು. ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಹುಲಿ ಗಾಯಗೊಂಡಿರುವುದು ಖಚಿತವಾಗಿತ್ತು. ಅಲ್ಲದೆ, ಅದಕ್ಕೆ ವಯಸ್ಸಾಗಿದ್ದರಿಂದ ಬೇಟೆಯಾಡಲು ಸಾಧ್ಯವಾಗದೆ ಜಾನುವಾರುಗಳನ್ನು ಬೇಟೆಯಾಡಲು ಕಾಡಂಚಿನ ಗ್ರಾಮಕ್ಕೆ ಬಂದಿರುವ ಶಂಕೆ ಮೇರೆಗೆ, ಮುಂದಿನ ಅನಾಹುತ ತಪ್ಪಿಸಲು ಕ್ಷಿಪ್ರ ಕಾರ್ಯಾಚರಣೆ ಮಾಡಿ ಸುರಕ್ಷಿತವಾಗಿ ಸೆರೆ ಹಿಡಿಯಲಾಗಿದೆ. ಗ್ರಾಮಸ್ಥರು ನೀಡಿದ ಮಾಹಿತಿಗೆ ತುರ್ತು ಸ್ಪಂದನೆ ಹಾಗೂ ಸಂಘಟಿತ ಕ್ಷಿಪ್ರ ಕಾರ್ಯಾಚರಣೆಯಿಂದಾಗಿ ಹುಲಿ ಸೆರೆ ಹಿಡಿದು ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.

–ಡಾ.ಪಿ.ರಮೇಶ್‌ಕುಮಾರ್, ನಿರ್ದೇಶಕ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ

ಇಂದು ಪೂರ್ವಭಾವಿ ಸಭೆ

ಮೈಸೂರು,ಜ.31–ಬೋಗಾದಿ ಪಟ್ಟಣ ಪಂಚಾಯಿತಿ 2024–25ನೇ ಸಾಲಿನ ಆಯ–ವ್ಯಯ ಸಂಬಂಧ ಬೋಗಾದಿ ಪಟ್ಟಣ ಪಂಚಾಯಿತಿಯ ಆಡಳಿತಾಧಿಕಾರಿ ಕೆ.ಎಂ.ಮಹೇಶ್‌ಕುಮಾರ್ ಅಧ್ಯಕ್ಷತೆಯಲ್ಲಿ ಫೆ.1ರಂದು ಬೆಳಗ್ಗೆ 11 ಗಂಟೆಗೆ ಪಟ್ಟಣ ಪಂಚಾಯಿತಿ ಕಚೇರಿಯಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ. ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಮಾಜಿ ನಾಮನಿರ್ದೇಶಿತ ಸದಸ್ಯರು, ವಿವಿಧ ಸಂಘ–ಸಂಸ್ಥೆಯ ಅಧ್ಯಕ್ಷರು, ಉಪಾಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸ್ಥಳೀಯ ಸಂಸ್ಥೆಯ ಮುಖಂಡರು ಸಭೆಯಲ್ಲಿ ಪಾಲ್ಗೊಂಡು ತಮ್ಮ ಸಲಹೆ–ಸೂಚನೆಗಳನ್ನು ನೀಡಬಹುದು ಎಂದು ತಹಶೀಲ್ದಾರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೆ.6ರಿಂದ ಸುದರ್ಶನ ಕ್ರಿಯೆ ಶಿಬಿರ

ಮೈಸೂರು,ಜ.31–ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಫೆ.6ರಿಂದ 10ರವರೆಗೆ ಆರೋಗ್ಯಕರ ಜೀವನ ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆ ಶಿಬಿರ ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 6ರಿಂದ 8.30 ಹಾಗೂ ಸಂಜೆ 6ರಿಂದ 8.30 ರವರೆಗೆ ನಡೆಯಲಿದೆ. ಮಾಹಿತಿಗೆ ಮೊ.9480476825 ಸಂಪರ್ಕಿಸಬಹುದು.

ಅವಿರೋಧ ಆಯ್ಕೆ

ಮೈಸೂರು: ಶ್ರೀ ಶಾಲಿವಾಹನ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಕೆ.ಪಿ.ವೆಂಕಟೇಶ್, ಪಿ.ನಾಗರಾಜು, ವಿಶ್ವೇಶ್ವರ, ಎನ್.ಮಂಜುನಾಥ್, ಎಂ.ಜಿ.ಯಶವಂತ್‌ಕುಮಾರ್, ಮುತ್ತುಶೆಟ್ಟಿ, ಟಿ.ಯತಿರಾಜು, ಎನ್. ವಾಸುದೇವಮೂರ್ತಿ, ಸುಮಿತ್ರ ಎಂ.ನಾಗರತ್ನ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅರುಣ್ ಯೋಗಿರಾಜ್ ಜೊತೆ ಸಹ ಶಿಲ್ಪಿಗಳಿಗೂ ಪೌರ ಸನ್ಮಾನಕ್ಕೆ ಒತ್ತಾಯ

ಮೈಸೂರು,ಜ.31(ಜಿಎ)–ಬಾಲರಾಮನ ಮೂರ್ತಿ ಕೆತ್ತಿದ ಶಿಲ್ಪಿ ಅರುಣ್ ಯೋಗಿರಾಜ್ ಅವರೊಟ್ಟಿಗೆ ಅವರಿಗೆ ನೆರವಾದ ಇತರೆ ಸಹ ಶಿಲ್ಪಿಗಳನ್ನೂ ಗುರುತಿಸಿ ಇವರಿಗೆ ಜಿಲ್ಲಾಡಳಿತದ ವತಿಯಿಂದ ಪೌರ ಸನ್ಮಾನ ಮಾಡಬೇಕೆಂದು ಪಾಲಿಕೆ ಮಾಜಿ ಸದಸ್ಯ ಎಂ. ಶ್ರೀರಾಮ ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಯೋಧ್ಯೆ ರಾಮಮಂದಿರದಲ್ಲಿ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರ ಕೆತ್ತನೆಯ ಬಾಲರಾಮನ ಮೂರ್ತಿ ಪ್ರತಿಷ್ಠಾಪನೆ ಆಗಿರುವುದು ಸಂತಸದ ಸಂಗತಿಯಾಗಿದೆ. ಜೊತೆಗೆ ಅರುಣ್ ಯೋಗಿರಾಜ್ ಅವರಿಗೆ ಸೂಕ್ತ ಗೌರವವೂ ಸಂದಿದೆ. ಇದು ಸ್ವಾಗತಾರ್ಹ. ಆದರೆ ಅವರಿಗೆ ನೆರವಾದ ಇತರೆ ಸಹ ಶಿಲ್ಪಿಗಳನ್ನೂ ಗುರುತಿಸಿ ಇವರಿಗೆ ಜಿಲ್ಲಾಡಳಿತದ ವತಿಯಿಂದ ಪೌರ ಸನ್ಮಾನ ಮಾಡಬೇಕು. ಇದರಿಂದ ಅವರಿಗೂ ಮನ್ನಣೆ ದೊರೆಯುತ್ತದೆ ಎಂದರು.

ಕಳೆದ ಎರಡು ವರ್ಷಗಳ ಹಿಂದೆ ಮೈಸೂರು ಅರಮನೆ ಆವರಣದಲ್ಲಿರುವ ಶ್ವೇತ ವರಾಹಸ್ವಾಮಿ ದೇವಾಲಯದ ಒಳಗೋಡೆ ಮತ್ತು ಕಂಬಗಳಲ್ಲಿನ ತೈಲಚಿತ್ರ ಸಂರಕ್ಷಣೆಗಾಗಿ ಎನ್‌ಆರ್‌ಸಿಎಲ್ ಸಂಸ್ಥೆಗೆ ವಹಿಸಲಾಗಿತು. ಆದರೆ, ಆ ಕಾರ್ಯ ಅರ್ಧಕ್ಕೆ ನಿಂತಿದ್ದು, ಈ ಸಂರಕ್ಷಣಾ ಕಾರ್ಯದಲ್ಲಿ ಮೈಸೂರಿನ ಕಲಾವಿದೆ ಎಸ್.ವಿ.ಸಹನಾ ಸೇರಿದಂತೆ ಉತ್ತರ ಭಾರತದ ಇಬ್ಬರು ತೊಡಗಿದ್ದರು. ಆದರೆ, ಅವರಿಗೆ ಸ್ಟೈಪಂಡ್ ನೀಡದ ಕಾರಣ ಉತ್ತರ ಭಾರತದ ಇಬ್ಬರು ವಾಪಸ್ಸಾದರು. ಆದರೆ ಎಸ್.ವಿ.ಸಹನಾ ಮಾತ್ರ ಕಾರ್ಯ ಮುಂದುವರಿಸಿದರು. ಹೀಗಿದ್ದರೂ ಇವರಿಗೆ ತೀರಾ ವಿಳಂಬವಾಗಿ ಸ್ಟೈಫಂಡ್ ನೀಡಿದ್ದಲ್ಲದೆ, ಆ ಕಾರ್ಯ ಅರ್ಧಕ್ಕೇ ಸ್ಥಗಿತಗೊಳಿಸಿದುದು ಬೇಸರದ ಸಂಗತಿಯಾಗಿದೆ. ಅರ್ಧಕ್ಕೆ ನಿಂತಿರುವ ಆ ಕೆಲಸ ಮತ್ತೆ ಶೀಘ್ರದಲ್ಲೇ ಪುನರಾರಂಭಗೊಳ್ಳುವುದಾಗಿ ಮಾಹಿತಿ ಬಂದಿದೆ ಎಂದು ತಿಳಿಸಿದರು.


ಸುದ್ದಿಗೋಷ್ಠಿಯಲ್ಲಿ ಲಯನ್ ಕೆ.ಶಿವಪ್ಪ, ಉದ್ಯಮಿ ಬಿ.ಲೋಚನ್ ನಾಗರಾಜ್, ಗುತ್ತಿಗೆದಾರ ನಿಂಗೇಗೌಡ, ಕಾರ್ಮಿಕ ಮುಖಂಡ ಆರ್.ರಂಗಸ್ವಾಮಿ, ಕಲಾವಿದೆ ಎಸ್.ವಿ.ಸಹನಾ ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಶ್ರೀರಾಮ ಮಾತನಾಡಿದರು. ಲಯನ್ ಕೆ.ಶಿವಪ್ಪ, ಉದ್ಯಮಿ ಬಿ.ಲೋಚನ್ ನಾಗರಾಜ್ ಇತರರಿದ್ದಾರೆ.

> ಬಾಲರಾಮನ ಮೂರ್ತಿಗೆ ಶಿಲೆ ಸಿಕ್ಕ ಸ್ಥಳದಲ್ಲಿ ರಾಮಮಂದಿರ ನಿರ್ಮಾಣ ಮಾಡುತ್ತಿರುವುದು ಸ್ವಾಗತಾರ್ಹ. ಅಯೋಧ್ಯೆಯ ರಾಮಮಂದಿರವನ್ನು ಪ್ರಧಾನಮಂತ್ರಿ ಮೋದಿ ಅವರು ಉದ್ಘಾಟಿಸಿದಂತೆ ಮೈಸೂರಲ್ಲಿ ನಿರ್ಮಾಣವಾಗುತ್ತಿರುವ ರಾಮಮಂದಿರವನ್ನು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರಿಂದ ಉದ್ಘಾಟನೆ ಮಾಡಿಸಬೇಕು.
>
> –ಶ್ರೀರಾಮ, ಮಾಜಿ ಕಾರ್ಪೋರೇಟರ್

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.2.2024 ಗುರುವಾರ, ಮಳೆ ನಕ್ಷತ್ರ: ಶ್ರವಣ 24.1.2024 ರಿಂದ 05.02.2024

ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಚಿತ್ತ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** ವೆರಿಕೋಸ್ ವೇನ್ಸ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಬೆ.9ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ** : ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಪ್ರೀತಿ ಕ್ಯಾನ್ಸರ್ ಸೆಂಟರ್** : ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ಮೈಸೂರು ವಿವಿ ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ:** ಟೈಮ್ ಸೀರೀಸ್ ಅನಾಲಿಸಿಸ್ ಹ್ಯಾಂಡ್ಸ್ ಇನ್ ಎಕ್ಸ್‌ಪೀರಿಯೆನ್ಸ್ ಕುರಿತು ಕಾರ್ಯಾಗಾರ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಪ್ರಾಸ್ತಾವಿಕ ಭಾಷಣ: ನಿವೃತ್ತ ಅರ್ಥಶಾಸ್ತ್ರ ಪ್ರಾಧ್ಯಾಪಕ ಪ್ರೊ.ಸಿ.ಕೆ.ರೇಣುಕಾರ್ಯ, ಅಧ್ಯಕ್ಷತೆ: ವಿಭಾಗದ ಮುಖ್ಯಸ್ಥ ಪ್ರೊ.ಎಂ.ಮಹೇಶ, ಸ್ಥಳ: ಹೆಚ್‌ಆರ್‌ಡಿಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಡಿ. ಬನುಮಯ್ಯ ಸ್ವತಂತ್ರ ಪದವಿಪೂರ್ವ ಕಾಲೇಜು** : ಸಾಂಸ್ಕೃತಿಕ ವೇದಿಕೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ. ಮರಿಸ್ವಾಮಿ, ಅಧ್ಯಕ್ಷತೆ : ಡಿ. ಬನುಮಯ್ಯ ವಿದ್ಯಾಸಂಸ್ಥೆ ಅಧ್ಯಕ್ಷ ಡಾ. ವಿ.ಬಿ. ಜಯದೇವ, ಆಡಳಿತಾಧಿಕಾರಿ ಡಾ. ಎನ್. ತಿಮ್ಮಯ್ಯ, ಕಾರ್ಯದರ್ಶಿ ಶ್ರೀಮತಿ ವಿ.ಸಿ. ಕೋಮಲ, ಪ್ರಾಂಶುಪಾಲ ಎಂ. ಚಂದ್ರಶೇಖರ, ವೇದಿಕೆ ಸಂಚಾಲಕ ಡಾ. ಎಂ.ಟಿ. ಕೃಷ್ಣಮೂರ್ತಿ, ಸ್ಥಳ: ಡಿ. ಬನುಮಯ್ಯ ಕಲಾಭವನ, ಬೆಳಗ್ಗೆ 10ಕ್ಕೆ.

■ **ಶ್ರೀ ಕಲಾನಿಕೇತನ ಕಾಲೇಜ್ ಆಫ್ ವಿಜ್ಯುಯಲ್ ಆರ್ಟ್** : ಕಲಾವಿದರು ಮತ್ತು ಉಪನ್ಯಾಸಕರಾದ ಡಾ. ವಿಠ್ಠಲರಡ್ಡಿ, ಎಫ್. ಚುಳಕಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 11 ಗಂಟೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ– ಮೈಸೂರಿನ ಎನ್. ರವಿಶಂಕರ್, 6.40 ಪದ ಸಂಸ್ಕೃತಿ, ಪ್ರಸ್ತುತಿ– ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 7.15 ಹಸಿರು ಹೊನ್ನು–ಪ್ರಾಯೋಜಿತ ಕಾರ್ಯಕ್ರಮ, 10.00 ಡಾ. ಮೈಸೂರು ಎಂ. ಮಂಜುನಾಥ್ –ವಯೋಲಿನ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆ, 4.30 ಸಂಧ್ಯಾರಾಗ–ಪರಿಸರ ಸಂರಕ್ಷಣೆಯಲ್ಲಿ ತೊಡಗಿಕೊಂಡಿರುವ ಡಾ.ಹೆಚ್.ಸಿ.ಶರಶ್ಚಂದ್ರ ಅವರೊಂದಿಗೆ ಸಂದರ್ಶನ. ಸಂದರ್ಶಕರು– ಜಿ. ಶಾಂತಕುಮಾರ್, 6.50 ಕೃಷಿರಂಗ–ಕೃಷಿ ಇಲಾಖೆಯಿಂದ ದೊರೆಯುವ ಸೌಲಭ್ಯಗಳನ್ನು ಕುರಿತ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರು ವಿ.ಎಸ್. ಅಶೋಕ್ ಹಾಗೂ ಎಸ್.ಎಸ್. ಅಬಿದ್, 8.00 ಯುವವಾಣಿ, 10.00 ನಾಟಕ, 10.30 ಸವಿನೆನಪು

■ **ಮೈಸೂರು ಜಿಲ್ಲಾ ಮಡಿವಾಳ ಮಾಚಿದೇವರ ಸಂಘ** : ಶ್ರೀ ಮಡಿವಾಳ ಮಾಚಿದೇವರ ಜಯಂತಿ, ಸ್ಥಳ: ಕಲಾಮಂದಿರ, ಬೆಳಗ್ಗೆ 11.30ಕ್ಕೆ.

■ **ಶ್ರೀ ನಟರಾಜ ಮಹಿಳಾ ಪದವಿಪೂರ್ವ ಕಾಲೇಜು** : ಸಾಂಸ್ಕೃತಿಕ, ಕ್ರೀಡಾ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಸಮಾರೋಪ ಸಮಾರಂಭ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು : ಶಾಸಕ ಹೆಚ್.ಎಂ. ಗಣೇಶ್‌ಪ್ರಸಾದ್, ಸಮಾರೋಪ ಭಾಷಣ : ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ. ಮರಿಸ್ವಾಮಿ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಕಾಲೇಜು ಪ್ರಿನ್ಸಿಪಾಲ್ ಶ್ರೀಮತಿ ವಿ.ಡಿ. ಸುನೀತಾ ರಾಣಿ, ಸ್ಥಳ: ಕಾಲೇಜು ಆವರಣ, ಮ. 2ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ** : ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್** : ಪಂಡಿತ್ ಕೃಷ್ಣರಾವ್ ಪ್ರಕಾಶ್ ಅವರಿಂದ ಶ್ರೀಮದ್ ಭಾಗವತ–11ನೇ ಸ್ಕಂದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.

■ **ಪರಂಪರೆ** : ಗಿರಿಜಾ ಕಲ್ಯಾಣ ಸಪ್ತಾಹ, ಡಾ.ಜ್ಯೋತಿಶಂಕರ್ ಅವರಿಂದ ಗಿರಿಜಾ ಕಲ್ಯಾಣ–ತಾರಕಾಸುರ ಯುದ್ಧ ಕುರಿತು ಪ್ರವಚನ, ಸಾಯಿ ಸೌದಾಮಿನಿ ತಂಡದಿಂದ ಹಾಡುಗಳು, ಸ್ಥಳ: ಗಣಪತಿ ದೇವಸ್ಥಾನದ ರಜತ್ ಸಭಾಂಗಣ, ಐ ಬ್ಲಾಕ್, ರಾಮಕೃಷ್ಣನಗರ, ಸಂಜೆ 6 ಗಂಟೆಯಿಂದ.


ಇಬ್ಬರು ಪೆಡ್ಲರ್‌ಗಳ ಬಂಧನ; 40 ಲಕ್ಷ ಮೌಲ್ಯದ ಗಾಂಜಾ ವಶ



ಗಾಂಜಾ ಸಾಗಿಸುತ್ತಿದ್ದ ಬೊಲೆರೋ.



ಗಾಂಜಾ ಗಿಡ.



ಶೇಖರಿಸಿಟ್ಟಿರುವ ಗಾಂಜಾ ಮೂಟೆಗಳು

ಮೈಸೂರು,ಜ.31(ಎಸ್‌ಪಿಎನ್)– ಇಬ್ಬರು ಅಂತರ ರಾಜ್ಯ ಪೆಡ್ಲರ್‌ಗಳನ್ನು ಬಂಧಿಸಿರುವ ಮೈಸೂರಿನ ಸಿಸಿಬಿ ಪೊಲೀಸರು, 40 ಲಕ್ಷ ರೂ. ಮೌಲ್ಯದ 85 ಕೆಜಿ 730 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಮೈಸೂರು ನಗರದ ಸಿಸಿಬಿ ಘಟಕದ ಅಧಿಕಾರಿಗಳಿಗೆ ಜ.30ರಂದು ದೊರೆತ ಖಚಿತ ಮಾಹಿತಿ ಮೇರೆಗೆ ವಿಶೇಷ ತಂಡವನ್ನು ರಚಿಸಿ, ಸಾತಗಳ್ಳಿ 1ನೇ ಹಂತದಲ್ಲಿ ಬೊಲೆರೋ ವಾಹನವನ್ನು ತಡೆದು ಇಬ್ಬರು ಪೆಡ್ಲರ್‌ಗಳನ್ನು ವಶಕ್ಕೆ ಪಡೆದು ಅವರ ವಾಹನ ಪರಿಶೀಲಿಸಿದಾಗ ಸುಮಾರು 40 ಲಕ್ಷ ಮೌಲ್ಯದ ಒಟ್ಟು 85 ಕೆಜಿ 730 ಗ್ರಾಂ ತೂಕದ ಗಾಂಜಾ ಪತ್ತೆಯಾಗಿದೆ. ಈ ಕೃತ್ಯಕ್ಕೆ ಬಳಸಿದ್ದ ಬೊಲೆರೋ ಹಾಗೂ ಮೊಬೈಲ್ ಫೋನ್‌ಗಳನ್ನು ಪೆಡ್ಲರ್‌ಗಳಿಂದ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಇವರು ಗಾಂಜಾವನ್ನು ಒರಿಸ್ಸಾದಿಂದ ರೈಲಿನಲ್ಲಿ ತಂದು ಮೈಸೂರಿನಲ್ಲಿ ಚಿಲ್ಲರೆ ಮಾರಾಟ ಮಾಡಲು ಬಂದಿದ್ದಾಗಿ ವಿಚಾರಣೆ ವೇಳೆ ಪೊಲೀಸರಿಗೆ ತಿಳಿಸಿದ್ದಾರೆ.

ಅಲ್ಲದೆ, ಈ ಹಿಂದೆ ಜನವರಿ 16ರಂದು ನಡೆಸಿದ ಕಾರ್ಯಾಚರಣೆಯಲ್ಲಿ ಇಬ್ಬರು ಪೆಡ್ಲರ್‌ಗಳನ್ನು ಬಂಧಿಸಿ, 20 ಲಕ್ಷ ಮೌಲ್ಯದ 57.8 ಕೆಜಿ ತೂಕ ಗಾಂಜಾ ವಶಪಡಿಸಿಕೊಳ್ಳಲಾಗಿತ್ತು. ಆ ತಂಡವನ್ನು ಮತ್ತಷ್ಟು ವಿಚಾರಣೆ ನಡೆಸಿದಾಗ ಬೇರೆಬೇರೆ ತಂಡಗಳು ಗಾಂಜಾ ಮಾರಾಟದಲ್ಲಿ ಸಕ್ರಿಯವಾಗಿರುವ ಮಾಹಿತಿ ಮೇರೆಗೆ ಈ ತಂಡವನ್ನು ಬಂಧಿಸಲಾಗಿದೆ. ಅಲ್ಲದೆ, ಈ ಇಬ್ಬರು ಆರೋಪಿಗಳು ತಮ್ಮ ಹುಟ್ಟೂರಿನಲ್ಲಿರುವ ಹೊಲದಲ್ಲಿ ಗಾಂಜಾ ಬೆಳೆಯುತ್ತಿದ್ದರು. ಹೊಲದಲ್ಲಿ ಬೆಳೆದು ನಿಂತಿರುವ ಗಾಂಜಾ ಗಿಡಗಳ ಫೋಟೋ, ಶೇಖರಣೆ ಮಾಡಿದ ಮೂಟೆಗಳು ಅವರ ಮೊಬೈಲ್‌ನಲ್ಲಿ ಪತ್ತೆಯಾಗಿವೆ ಎಂದು ಸಿಸಿಬಿ ಎಸಿಪಿ ಸಂದೇಶ್‌ಕುಮಾರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಸಿಸಿಬಿ ಎಸಿಪಿ ಎಸ್.ಎನ್.ಸಂದೇಶ್‌ಕುಮಾರ್, ಪೊಲೀಸ್ ಇನ್ಸ್‌ಪೆಕ್ಟರ್ ಎಂ.ಮೋಹನ್ ಕುಮಾರ್, ಪಿಎಸ್‌ಐಗಳಾದ ಮಾರುತಿ ಅಂತರಗಟ್ಟಿ, ಕಿರಣ್ ಎ.ಹಂಪಿಹೊಳಿ, ಎಎಸ್‌ಐ ಅಸ್ಗರ್‌ಖಾನ್, ಸಿಬ್ಬಂದಿ ಗಳಾದ ಸಲೀಂಪಾಷ, ರಾಮಸ್ವಾಮಿ, ಪಿ.ಎನ್. ಲಕ್ಷ್ಮೀಕಾಂತ, ಎ.ಉಮಾ ಮಹೇಶ್, ಟಿ.ಪ್ರಕಾಶ್, ಎಂ.ಆರ್.ಗಣೇಶ್, ಆರ್. ಮಹೇಶ್, ಆರ್.ಸುರೇಶ್, ಚಂದ್ರಶೇಖರ್, ನರಸಿಂಹ, ಗೋವಿಂದ, ಮೋಹನಾರಾಧ್ಯ, ಕೆ.ಮಹೇಶ್, ಮಧುಸೂದನ್, ಶಿವಣ್ಣ, ರಮ್ಯ, ಮಮತ ಭಾಗವಹಿಸಿದ್ದರು.

ಜ್ಞಾನವಾಪಿ ಮಸೀದಿ ನೆಲಮಾಳಿಗೆಯಲ್ಲಿ ಹಿಂದೂಗಳಿಗೆ ಪೂಜೆಗೆ ಅವಕಾಶ

ವಾರಣಾಸಿ ಕೋರ್ಟ್‌ನಿಂದ ಐತಿಹಾಸಿಕ ತೀರ್ಪು



ಲಖನೌ: ಜ್ಞಾನವಾಪಿ ಮಸೀದಿ ಪ್ರಕರಣದಲ್ಲಿ ಹಿಂದೂಗಳ ಪಾಲಿಗೆ ದೊಡ್ಡ ಜಯ ಸಿಕ್ಕಿದ್ದು ಮಸೀದಿ ನೆಲಮಾಳಿಗೆಯಲ್ಲಿ ಪೂಜೆ ಮಾಡಲು ವಾರಣಾಸಿ ಕೋರ್ಟ್ ಅವಕಾಶ ನೀಡಿದೆ.

ಇದೇ ನ್ಯಾಯಾಲಯ ಮುಂದಿ ಏಳು ದಿನಗಳೊಳಗೆ ಪೂಜೆಗೆ ವ್ಯವಸ್ಥೆ ಮಾಡುವಂತೆ ಸೂಚಿಸಿದೆ. ಹಿಂದೂಗಳು ಪೂಜೆ ಮಾಡಲು ಸೂಕ್ತ ವ್ಯವಸ್ಥೆ ಮಾಡುವಂತೆ ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ನ್ಯಾಯಾಲಯ ಆದೇಶಿಸಿದೆ. ಕೋರ್ಟ್ ತೀರ್ಪು ಇದೀಗ ಹಿಂದೂಗಳ ಸಂತೋಷವನ್ನು ಮತ್ತಷ್ಟು ಹೆಚ್ಚಿಸಿದೆ.

ಕಳೆದ ವಾರ ನ್ಯಾಯಾಲಯದ ಆದೇಶದ ಮೇರೆಗೆ ಡಿಎಂ ಜ್ಞಾನವಾಪಿ ನೆಲಮಾಳಿಗೆಯ ಕೀಗಳನ್ನು ಸ್ವಾಧೀನಪಡಿಸಿಕೊಂಡಿದ್ದರು. 1993ಕ್ಕೂ ಮೊದಲು ಈ ನೆಲಮಾಳಿಗೆಯಲ್ಲಿ ಪೂಜಾ ಕಾರ್ಯಗಳು ನಡೆಯುತ್ತಿದ್ದವು. ಅಯೋಧ್ಯೆಯ ವಿವಾದಿತ ಕಟ್ಟಡದ ಕುಸಿತದ ನಂತರ, ಜಿಲ್ಲಾಡಳಿತ ಜ್ಞಾನವಾಪಿ ಸುತ್ತಲೂ ಕಬ್ಬಿಣದ ಸರಳುಗಳನ್ನು ಅಳವಡಿಸಿತ್ತು.

ಸೋಮನಾಥ ವ್ಯಾಸ್ ಅವರ ಕುಟುಂಬವು 1993 ರವರೆಗೆ ನೆಲಮಾಳಿಗೆಯಲ್ಲಿ ನಿಯಮಿತ ಪೂಜೆಯನ್ನು ಮಾಡುತ್ತಿತ್ತು. ವ್ಯಾಸ್ ಜಿ ಮೊಮ್ಮಗ ಶೈಲೇಂದ್ರ ವ್ಯಾಸ್ ಮರು ಪೂಜೆಗೆ ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. 1993ರಿಂದ ನೆಲಮಾಳಿಗೆಯಲ್ಲಿ ಪೂಜೆ ಸ್ಥಗಿತಗೊಂಡಿದೆ ಎಂದು ಅರ್ಜಿ ಸಲ್ಲಿಸಿದರು. ಪ್ರಸ್ತುತ ಈ ನೆಲಮಾಳಿಗೆಯು ಅಂಜುಮನ್ ಇಂತೇಝಾಮಿಯಾ ಮಸೀದಿ ಸಮಿತಿ ವಶದಲ್ಲಿತ್ತು.

ಮಂಗಳವಾರವೂ ಈ ಕುರಿತು ವಿಚಾರಣೆ ನಡೆದಿದ್ದು, ನಿತ್ಯ ಪೂಜೆಯ ಬೇಡಿಕೆಗೆ ವಿರೋಧ ವ್ಯಕ್ತಪಡಿಸಿದ ಮುಸ್ಲಿಂ ಪರ ಅಂಜುಮನ್ ಅರೇಂಜ್‌ಮೆಂಟ್‌ನ ಪರ ವಕೀಲರು ಆಕ್ಷೇಪ ವ್ಯಕ್ತಪಡಿಸಿ, ರಿಸೀವರ್ ನೇಮಕದ ಬಗ್ಗೆ ಮಾತ್ರ ನ್ಯಾಯಾಲಯ ಉಲ್ಲೇಖಿಸಿದೆ ಎಂದು ವಾದಿಸಿದರು. ಅದರಲ್ಲಿ ಪೂಜಾ ಹಕ್ಕುಗಳ ಉಲ್ಲೇಖವಿಲ್ಲ. ಹಾಗಾಗಿ ಪ್ರಕರಣ ಇತ್ಯರ್ಥವಾಗಿದೆ ಎಂದು ಪರಿಗಣಿಸಿ ಅರ್ಜಿ ವಜಾಗೊಳಿಸಬೇಕು ಎಂದು ಹೇಳಿದರು.

ಇಂದಿನಿಂದ ಯೋಗ ತರಗತಿ

ಮೈಸೂರು: ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಫೆ.1ರಿಂದ ಪ್ರತಿದಿನ ಬೆಳಗ್ಗೆ 6.30ರಿಂದ 7.30ರವರೆಗೆ ಯೋಗ ತರಗತಿ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 9916483919, 9632000697 ಸಂಪರ್ಕಿಸಬಹುದು.

ಹೈಪೋಥೈರಾಯ್ಡಿಸಮ್ ಚಿಕಿತ್ಸಾ ಶಿಬಿರ: ಫೆ.1ರಿಂದ 10ರವರೆಗೆ ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ ಹೈಪೋಥೈರಾಯ್ಡಿಸಮ್ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 8073028433, ದೂ.0821–2548231, 2548433.

ಮೈಸೂರು ಸಕ್ಕರೆ ಕಂಪನಿ ನಿಯಮಿತ,
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಕ್ಕರೆ ನಗರ, ಮಂಡ್ಯ–571 402.

ಎಂಎಸ್‌ಕೋ/ಜಿಎಂ/ಎಸ್ಟೇಟ್/114/2023–24 ದಿ:31–01–2024

ತೆಂಗಿನ ಎಳನೀರು ಫಸಲಿನ ಮರುಬಹಿರಂಗ ಟೆಂಡರ್ ಹರಾಜು ಪ್ರಕಟಣೆ

ಕಂಪನಿಯ ಆವರಣದಲ್ಲಿರುವ 549 ತೆಂಗಿನ ಮರಗಳ ಹಾಗೂ ಸಾತನೂರು ಫಾರಂನ 446 ತೆಂಗಿನ ಮರಗಳ ಫಸಲನ್ನು ಒಂದು ವರ್ಷದ ಅವಧಿಗೆ ಗುತ್ತಿಗೆ ಪಡೆದುಕೊಳ್ಳಲು ಮರುಬಹಿರಂಗ ಹರಾಜು ಮಾಡಲಾಗುವುದು **(Open Action)**ಹರಾಜು ವೇಳಾಪಟ್ಟಿ ಈ ಕೆಳಕಂಡಂತಿರುತ್ತದೆ.
(1) ಕಂಪನಿಯ ಆವರಣದ ಬಹಿರಂಗ ಹರಾಜನ್ನು ದಿನಾಂಕ:**08.02.2024 ರಂದು ಬೆಳಗ್ಗೆ:11–00 ಘಂಟೆಗೆ** ಪ್ರಧಾನ ವ್ಯವಸ್ಥಾಪಕರವರ ಕಛೇರಿಯಲ್ಲಿ ನಡೆಸಲಾಗುವುದು. (2) **ದಿನಾಂಕ:08.02.2024 ರಂದು ಮಧ್ಯಾಹ್ನ 03–00 ಘಂಟೆಗೆ** ಸಾತನೂರು ಫಾರಂ ಕಛೇರಿ ಆವರಣದಲ್ಲಿ ಬಹಿರಂಗ ಹರಾಜು ಮಾಡಲಾಗುವುದು. (3) ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಿಡ್ಡುದಾರರು ಸ್ಥಳದಲ್ಲಿ **ರೂ.5000/– (ಐದು ಸಾವಿರ)** ಗಳನ್ನು ಠೇವಣಿ ಆಗಿ ಪಾವತಿಸಿ ನಂತರ ಬಿಡ್ಡಿನಲ್ಲಿ ಭಾಗವಹಿಸುವುದು. (4) ಹರಾಜು ಪ್ರಕ್ರಿಯೆ ಮುಗಿದ ನಂತರ ಯಶಸ್ವಿ ಬಿಡ್ಡುದಾರರನ್ನು ಹೊರತುಪಡಿಸಿ ಉಳಿದ ಬಿಡ್ಡುದಾರರಿಗೆ ಸ್ಥಳದಲ್ಲಿಯೇ ಅವರು ಪಾವತಿಸಿರುವ ಠೇವಣಿ ಹಣವನ್ನು ವಾಪಸ್ಸು ಮಾಡಲಾಗುವುದು. ಈ ಹರಾಜು ಪ್ರಕ್ರಿಯೆ ಸಂಬಂಧ ಹೆಚ್ಚಿನ ಮಾಹಿತಿಗಾಗಿ ಕಂಪನಿಯ ಆಡಳಿತ ಮುಖ್ಯಸ್ಥರು/ಎಸ್ಟೇಟ್ ಸೂಪರ್‌ವೈಸರ್‌ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. **ಮೊ:9448740861/9986880681**

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/488/2023–24 ಸಹಿ/–ಪ್ರಧಾನ ವ್ಯವಸ್ಥಾಪಕರು

ಸಾರ್ವಜನಿಕರ ಗಮನಕ್ಕಾಗಿ

ನನ್ನ ಕಕ್ಷಿದಾರರ ಇರ್ರ್ಯಾದೆಯ ಮೇರೆಗೆ, ಏನೆಂದರೆ, ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ನಗರ್ತಹಳ್ಳಿ ದಾಖಲೆ, ಮೂಗನಹುಂಡಿ ಗ್ರಾಮದಲ್ಲಿರುವ ಲೇಟ್ ವೆಂಕಟೇಗೌಡ ಉರುಫ್ ಮಲ್ಲೇಗೌಡ ಪತ್ನಿಯಾದ ಲೇಟ್ ಸಾಕಮ್ಮ ರವರ ಮಗನಾದ ಶ್ರೀ ಶಾಂತೇಗೌಡ ಉರುಫ್ ಸೊತ್ತೇಗೌಡ ಮತ್ತು ಅವರ ಕುಟುಂಬದವರಿಗೂ, ಹಾಗೂ ನನ್ನ ಕಕ್ಷಿದಾರರಿಗೂ ಕೆಳಕಂಡ ಜಮೀನಿನ ಸಂಬಂಧ ಮಾರಾಟ ಮಾಡುವ ಸಂಬಂಧ ಒಡಂಬಡಿಕೆಯಾಗಿದ್ದು ಸದರಿ ಜಮೀನನ್ನು ನನ್ನ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು ಈಗಾಗಲೇ ಆ ಸಂಬಂಧ ನನ್ನ ಕಕ್ಷಿದಾರರಿಗೆ ಕೆಲವು ದಾಖಲಾತಿಗಳನ್ನು ಹಾಜರು ಮಾಡಿದ್ದು ನನ್ನ ಕಕ್ಷಿದಾರರು ಸದರಿ ಜಮೀನನ್ನು ನೊಂದಾಯಿತ ಕ್ರಯಪತ್ರದ ಮೂಲಕ ಖರೀದಿಸಲು ತೀರ್ಮಾನಿಸಿದ್ದು ಸದರಿ ಜಮೀನಿನ ಸಂಬಂಧ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ, ಆಟಾಚ್ ಮೆಂಟ್, ಡಿಕ್ರಿ, ಜೀವನಾಂಶ, ಇತರೆ ಯಾವುದೇ ಹಕ್ಕು ಹಿತಾಸಕ್ತಿ ಇದ್ದಲ್ಲಿ ಸಂಬಂಧಪಟ್ಟವರು ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 7 ದಿವಸದೊಳಗಾಗಿ ನನ್ನ ಕಕ್ಷಿದಾರರಿಗಾಗಲೀ, ನನಗಾಗಲೀ ಲಿಖಿತವಾಗಿ ಸಂಬಂಧ ಪಟ್ಟ ದಾಖಲಾತಿಗಳೊಡನೆ ನನ್ನ ಕೆಳಕಂಡ ವಿಳಾಸದ ಕಛೇರಿಯ ಸಮಯದಲ್ಲಿ ಹಾಜರಾಗಿ ಸಂಬಂಧ ಪಟ್ಟ ದಾಖಲಾತಿಗಳನ್ನು ಸಲ್ಲಿಸತಕ್ಕದ್ದು. ಮೇಲ್ಕಂಡ ಸಮಯದೊಳಗೆ ಯಾವುದೇ ತಕರಾರು ಬರದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಕೆಳಕಂಡ ಜಮೀನಿನ ಸಂಬಂಧ ಕ್ರಯ ಪತ್ರವನ್ನು ಪಡೆದು ಕೊಳ್ಳುತ್ತಾರೆ. ಮುಂದೆ ಬರುವ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯತಕ್ಕದ್ದು. **ಷೆಡ್ಯೂಲ್ ಸ್ವತ್ತಿನ ವಿವರ:** ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ನಗರ್ತಹಳ್ಳಿ ದಾಖಲೆ ಮೂಗನಹುಂಡಿ ಗ್ರಾಮದಲ್ಲಿರುವ ಸರ್ವೆ ನಂ 72/3 ರಲ್ಲಿ (ಹೊಸ ಸರ್ವೆ72/1) ವಿಸ್ತೀರ್ಣ 1 ಎಕರೆ 28 ಗುಂಟೆ ಪೈಕಿ ಪೂರ್ವದಿಕ್ಕಿಗೆ 20 ಗುಂಟೆ ಜಮೀನಿಗೆ ಚೆಕ್ ಬಂದಿ : ಪೂರ್ವಕ್ಕೆ : ಸರ್ವೆ. ನಂ.71/1 ರ ಕುಳ್ಳೇಗೌಡರ ಜಮೀನು, ಪಶ್ಚಿಮಕ್ಕೆ : ಸರ್ವೆ.ನಂ.72/1 ಬ್ಲಾಕ್ ನಂ.I ರ ಉಳಕೆ ಜಮೀನು, ಉತ್ತರಕ್ಕೆ : ಸರ್ವೆ.ನಂ.72/2ರ ಲಕ್ಷ್ಮೀಶಿವಕುಮಾರ್ ರವರ ಜಮೀನು, ದಕ್ಷಿಣಕ್ಕೆ : ಸರ್ವೆ.ನಂ.73 ರ ಶಿವಣ್ಣ ಹಾಗೂ ಚಿಕ್ಕಮ್ಮರವರ ಜಮೀನು.

ಕಕ್ಷಿದಾರರ ಪರ ವಕೀಲರು
ಸಹಿ/– ಶ್ರೀ ಪಾಲಾಕ್ಷ, ವಕೀಲರು, ನಂ. 645, ಮೊದಲನೇ ಮಹಡಿ, ನಾರಾಯಣ ಶಾಸ್ತ್ರಿ ರಸ್ತೆ, ಶಾಂತಲ ಚಿತ್ರ ಮಂದಿರ ಹತ್ತಿರ, ಮೈಸೂರು. ಮೊ: 94480 75718



ಬುಧವಾರ ತಮ್ಮ 37ನೇ ಹುಟ್ಟುಹಬ್ಬ ಆಚರಿಸಿಕೊಂಡ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಮೈಸೂರು ಪಾಲಿಕೆ 44ನೇ ವಾರ್ಡಿನ ಮುಖಂಡರು ಬಾದಾಮಿ ಹಾರ ಹಾಕಿ ಶುಭಾಶಯ ಕೋರಿದರು. ಜೆಡಿಎಸ್ ಮುಖಂಡರಾದ ಚಂದ್ರಶೇಖರ್, ಸುರೇಶ್, ಸಿದ್ದರಾಜು, ಆನಂದ್, ರವಿ, ರಾಜು, ಶಂಭೇಗೌಡ, ಕಾಳಪ್ಪ ಮಾದೇವು, ಶಿವು, ಮಂಜು ಚಿತ್ರದಲ್ಲಿದ್ದಾರೆ.

ಬಸವ ಭವನ ಕಂಡರೆ ಊರಿನ ಜನರಿಗೆ ಭಯ!





ಮೈಸೂರು, ಜ.31(ಎಂಕೆ)– ಬೆಳೆಯುವ ಮಕ್ಕಳ ಭವಿಷ್ಯಕ್ಕೆ ಕೊಳ್ಳಿ ಇಡುವ ಕೆಲಸವೆಂದರೆ ಇದೇ ಇರಬಹುದು...! ಅರ್ಧಬಂರ್ಧ ಕಾಮಗಾರಿಯಿಂದ ಪುಂಡರು–ಕುಡುಕರಿಗೆ ಸಂತಸ, ಪುಟಾಣಿ ಮಕ್ಕಳು ಹಾಗೂ ಗ್ರಾಮಸ್ಥರಿಗೆ ಸಂಕಷ್ಟ...!



ಮೈಸೂರು ತಾಲೂಕಿನ ಅನಗಹಳ್ಳಿ ಗ್ರಾಮದಲ್ಲಿ ನಿರ್ಮಾಣ ಹಂತದಲ್ಲಿರುವ ಅಂಗನವಾಡಿ ಕೇಂದ್ರ, ಬಸವ ಭವನ ಪುಂಡರ–ಕುಡುಕರ ತಾಣವಾಗಿ ಬದಲಾಗಿದ್ದು, ಮಕ್ಕಳು ಹಾಗೂ ಗ್ರಾಮಸ್ಥರನ್ನು ಹೈರಾಣಾಗಿಸಿದೆ. ಕಳೆದ ಆರು ವರ್ಷಗಳಿಂದ ಕಾಮಗಾರಿ ಅರ್ಧಕ್ಕೆ ಸ್ಥಗಿತಗೊಂಡಿದ್ದು, ಅರ್ಧಬಂರ್ಧ ನಿರ್ಮಾಣಗೊಂಡು ಖಾಲಿ ಬಿದ್ದಿರುವ ಕಟ್ಟಡಗಳೆರಡು ಕುಡುಕರ ತಾಣವಾಗಿವೆ. ಮದ್ಯದ ಬಾಟಲಿಗಳು ರಾಶಿ ರಾಶಿ ಬಿದ್ದಿವೆ ಎಂದು ಗ್ರಾಮಸ್ಥರು ದೂರಿದ್ದಾರೆ.

ಸಂಜೆಯಾಗುತ್ತಿದ್ದಂತೆ ಪುಂಡರ– ಕುಡುಕರ ಹಾವಳಿ ಮಿತಿ ಮೀರಲಿದ್ದು, ಪಾಳು ಬಿದ್ದ ಎರಡು ಕಟ್ಟಡಗಳು ಮೋಜಿನ ತಾಣವಾಗುತ್ತವೆ. ಮಧ್ಯರಾತ್ರಿಯವರೆಗೂ ಕುಡುಕರ ಹಾರಾಟ, ಚೀರಾಟದಿಂದ ಗ್ರಾಮಸ್ಥರು ರಸ್ತೆಯಲ್ಲಿ ತಿರುಗಾಡುವುದಕ್ಕೂ ಭಯಪಡುವಂತಾಗಿದೆ. ಹಾಗೆಯೇ ಅಂಗನವಾಡಿ ಕಟ್ಟಡವಿಲ್ಲದೆ ದನದ ಕೊಟ್ಟಿಗೆಯಲ್ಲಿ ದಿನದೂಡುತ್ತಿರುವ ಪುಟಾಣಿ ಮಕ್ಕಳು ಸೊಳ್ಳೆ ಮತ್ತು ನೊಣಗಳೊಂದಿಗೆ ಕಾಲಕಳೆಯುವಂತಾಗಿದೆ ಎಂದು ಗ್ರಾಮಸ್ಥರು ವಿಷಾದಿಸಿದ್ದಾರೆ.

ಕುರಿ, ದನ–ಕರುಗಳನ್ನು ಕಟ್ಟಿಹಾಕುತ್ತಿದ್ದ ಕೊಟ್ಟಿಗೆಯಲ್ಲಿ ಅಂಗನವಾಡಿ ಕೇಂದ್ರ ನಡೆಸಲಾಗುತ್ತಿದೆ. ಇದರಿಂದ ಮಕ್ಕಳ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಪಾಳು ಬಿದ್ದಿರುವ ಕಟ್ಟಡಗಳ ಕುರಿತು ಸ್ಥಳೀಯ ಶಾಸಕರ ಗಮನಕ್ಕೆ ತಂದರೂ ಯಾವುದೇ ಕೆಲಸವಾಗಿಲ್ಲ. ಕುಡುಕರ ಹಾವಳಿಯಂತೂ ವಿಪರೀತವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರಲ್ಲದೆ ಕೂಡಲೇ ಎರಡೂ ಕಟ್ಟಡಗಳ ಕಾಮಗಾರಿ ಪೂರ್ಣಗೊಳಿಸುವಂತೆ ಗ್ರಾಮಸ್ಥರೂ ಆದ ಕರವೇ ಸ್ವಾಭಿಮಾನಿ ಬಣದ ಜಿಲ್ಲಾಧ್ಯಕ್ಷ ಎಂ.ಲಿಂಗರಾಜು 'ಮೈಸೂರು ಮಿತ್ರ'ನಲ್ಲಿ ಒತ್ತಾಯಿಸಿದ್ದಾರೆ.

ಅನುದಾನವಿಲ್ಲ

ಅರ್ಧಕ್ಕೆ ಸ್ಥಗಿತಗೊಂಡಿರುವ ಅಂಗನವಾಡಿ ಕೇಂದ್ರ ಹಾಗೂ ಬಸವ ಭವನ ಕುರಿತು ಗ್ರಾಮ ಪಂಚಾಯಿತಿಯಲ್ಲಿ ಕೇಳಿದರೆ ಅನುದಾನ ಇಲ್ಲದೆ ಪೂರ್ಣಗೊಳಿಸಿಲ್ಲ ಎಂದು ಹೇಳುತ್ತಿದ್ದಾರೆಯೇ ಹೊರತು ಸಮಸ್ಯೆ ಪರಿಹರಿಸುವ ಸಣ್ಣ ಪ್ರಯತ್ನವನ್ನು ಅಧಿಕಾರಿಗಳು ಮಾಡುತ್ತಿಲ್ಲ.

–ಎಂ.ಲಿಂಗರಾಜು, ಕರವೇ ಸ್ವಾಭಿಮಾನಿ ಬಣದ ಜಿಲ್ಲಾಧ್ಯಕ್ಷ

ಜಿಲ್ಲಾ ಶಸ್ತ್ರಚಿಕಿತ್ಸಕರು ಹಾಗೂ ವೈದ್ಯಕೀಯ ಅಧೀಕ್ಷಕರ ಕಾರ್ಯಾಲಯ
ಸಿಮ್ಸ್ ಬೋಧನಾ ಆಸ್ಪತ್ರೆ, ಚಾಮರಾಜನಗರ
Email-dschamarajanagar@gmail.com. Tel. No: 08226-222067, 200382
Web: www.cimscrnagara.org

ಸಂ:ಚಾವೈವಿಸಂ/ಜಿಆಚಾ/ಎ.ಆರ್.ಟಿ/17/2023–24 ದಿನಾಂಕ: 29–01–2024

ನೇರ ಸಂದರ್ಶನಕ್ಕೆ ಆಹ್ವಾನ

ವಿಷಯ: ಚಾಮರಾಜನಗರ ವೈದ್ಯಕೀಯ ವಿಜ್ಞಾನ ಬೋಧನಾ ಅಸ್ಪತ್ರೆಯ ಎ.ಆರ್.ಟಿ ಕೇಂದ್ರಕ್ಕೆ ಮೆಡಿಕಲ್ ಆಫೀಸರ್ (ವೈದ್ಯಾಧಿಕಾರಿಗಳ) ಹುದ್ದೆ ನೇಮಕಾತಿಗಾಗಿ ನೇರ ಸಂದರ್ಶನ ಏರ್ಪಡಿಸುವ ಬಗ್ಗೆ, ಉಲ್ಲೇಖ: ಸಂ:ಕರಾಏಪ್ರಿಸೊ/ ಸ.ಎಸ್.ಟಿ/03/2020–21, ದಿನಾಂಕ: 09–01–2024


ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಬೋಧನಾ ಆಸ್ಪತ್ರೆ ಇಲ್ಲಿನ ಎ.ಆರ್.ಟಿ ವಿಭಾಗಕ್ಕೆ ಮೆಡಿಕಲ್ ಆಫೀಸರ್ (ವೈದ್ಯಾಧಿಕಾರಿಗಳು) ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ದಿನಾಂಕ: 06–02–2024 ರಂದು ಬೆಳಿಗ್ಗೆ 11–00 ಗಂಟೆಯೊಳಗೆ ಜಿಲ್ಲಾ ಶಸ್ತ್ರಚಿಕಿತ್ಸಕರು/ ವೈದ್ಯಕೀಯ ಅಧೀಕ್ಷಕರ ಕೊಠಡಿ, ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಬೋಧನಾ ಆಸ್ಪತ್ರೆ, ಯಡಪುರ, ಚಾಮರಾಜನಗರ ಇಲ್ಲಿ ನೇರ ಸಂದರ್ಶನವನ್ನು ನಿಗಧಿಪಡಿಸಲಾಗಿದೆ. ಹುದ್ದೆಯ ವಿವರ ಕೆಳಕಂಡಂತಿದೆ.

ಕ್ರ ಸಂ.	ಹುದ್ದೆಯ ಹೆಸರು	ಹುದ್ದೆಯ ಸಂಖ್ಯೆ	ವಿದ್ಯಾರ್ಹತೆ	ಮಾಸಿಕ ಸಂಚಿತ ವೇತನ	ವಯೋಮಿತಿ
1	ವೈದ್ಯಾಧಿಕಾರಿಗಳು	1	ಎಂ.ಬಿ.ಬಿ.ಎಸ್. ಪದವಿ ಪಡೆದಿರಬೇಕು ಹಾಗೂ ಕಂಪ್ಯೂಟರ್ ಜ್ಞಾನ ಹೊಂದಿರಬೇಕು (MS Office & Internet, Electronic Mail)	ರೂ. 72,000/–	ಗರಿಷ್ಠ 70 ವರ್ಷ ಮೀರಿರಬಾರದು

ಅಭ್ಯರ್ಥಿಗಳು ತಮ್ಮ ಸ್ವ ವಿವರದೊಂದಿಗೆ (ಬಯೋ ಡಾಟಾ) ಜೊತೆಗೆ ಇತ್ತೀಚಿನ ಭಾವಚಿತ್ರ ಹಾಗೂ ಶೈಕ್ಷಣಿಕ ವಿದ್ಯಾರ್ಹತೆ ಜೊತೆ ಹೆಚ್ಚಿನ ವಿದ್ಯಾರ್ಹತೆ & ಕೆಲಸದ ಅನುಭವ ಪ್ರಮಾಣಪತ್ರಗಳೊಂದಿಗೆ 2 ಜೊತೆ ಜೆರಾಕ್ಸ್ ಪ್ರತಿಯನ್ನು ನೇರ ಸಂದರ್ಶನಕ್ಕೆ ಹಾಜರುಪಡಿಸುವುದು. ಹುದ್ದೆಯನ್ನು ನ್ಯಾಕೊ ನಿಯಮದ ಪ್ರಕಾರ ಆಯ್ಕೆ ಮಾಡಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕೆಲಸದ ವೇಳೆಯಲ್ಲಿ ಜಿಲ್ಲಾ ಶಸ್ತ್ರಚಿಕಿತ್ಸಕರ ಕಛೇರಿ/ವೈದ್ಯಕೀಯ ಅಧೀಕ್ಷಕರ ಕಛೇರಿ ಅಥವಾ ಎ.ಆರ್.ಟಿ ಕೇಂದ್ರದಲ್ಲಿ ಸಂಪರ್ಕಿಸುವುದು (ಫೋನ್ ನಂ. 08226–222807) ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸಹಿ/– ಜಿಲ್ಲಾ ಶಸ್ತ್ರಚಿಕಿತ್ಸಕರು ಹಾಗೂ ವೈದ್ಯಕೀಯ ಅಧೀಕ್ಷಕರು
ಜಿಲ್ಲಾ ಆಸ್ಪತ್ರೆ / ಸಿಮ್ಸ್, ಚಾಮರಾಜನಗರ

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಎಂ. ದೇಶಿಗೌಡರು

ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಅಧ್ಯಕ್ಷರು, ಕನ್ನೇಗೌಡನಕೊಪ್ಪಲು, ಮೈಸೂರು

ಇವರು ದಿನಾಂಕ 22.01.2024ರ ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ 01.02.2024ರ ಗುರುವಾರ ಬೆಳಗ್ಗೆ 11 ಗಂಟೆಗೆ ಮರುಳೇಶ್ವರ ದೇವಸ್ಥಾನ ಸಮುದಾಯ ಭವನ, ಕಾವೇರಿ ಶಾಲೆ ಎದುರು, ಮೈಸೂರು ಇಲ್ಲಿ ಏರ್ಪಡಿಸಲಾಗಿದೆ.

ವಿ.ಸೂ: ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಪತ್ನಿ ಶ್ರೀಮತಿ ಪಿ.ಸರಸ್ವತಿ, ದೇಶೀಗೌಡರ ಕುಟುಂಬವರ್ಗ, ಗ್ರಾಮಸ್ಥರು ಹಾಗೂ ಬಂಧುಮಿತ್ರರು.

ಭೋಜನ: 12.30 ಗಂಟೆಗೆ

ನಕ್ಕರೆ ಅದೇ ಸ್ವರ್ಗ

ಗುಂಡ : "ಏನೋ ನೀನೇ ಪಾತ್ರೆ ತಿಕ್ತಾ ಇದ್ದೀಯಾ? ಮನೆಯಲ್ಲಿ ಕೆಲಸದವಳಿದ್ದಾಳೆ ಅಂತಿದ್ದೆ"

ತಿಮ್ಮ : "ಓ.. ಅದಾ.. ಕೆಲ ದಿನಗಳ ಹಿಂದೆ ಅವಳನ್ನೇ ಮದುವೆಯಾದೆ!"

ಮೈಸೂರು ಮಿತ್ರ

ಗುರುವಾರ, 1 ಫೆಬ್ರವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಸಾಧಿಸುವ ಮುನ್ನ ಅಸಹ್ಯವಾಗಿ ನೋಡುತ್ತಾರೆ. ಸಾಧಿಸಿದ ನಂತರ ವಿಶೇಷವಾಗಿ ನೋಡುತ್ತಾರೆ. – ಚಾಣಕ್ಯ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆಸೆಯಿಲ್ಲದವನು ದೇಶಕ್ಕೆ ಶ್ರೀಮಂತ

ನಿಮ್ಮ ಪತ್ರಗಳು

ಬಹಿರಂಗ ಬಹಿರ್ದೆಸೆಗೆ ಕೊನೆ ಎಂದು



ಮಾನ್ಯರೆ,

ನಾಯಿಗಳ ಮಲ ಮೂತ್ರಗಳಿಂದ ರಸ್ತೆಗಳನ್ನು ಕಾಪಾಡಿ. ಇದು ಪ್ರತಿ ನಿತ್ಯ ಸ್ವಚ್ಛ ನಗರಿ ಮೈಸೂರಿನಲ್ಲಿ ಕಂಡು ಬರುವ ದೃಶ್ಯ. ತಮ್ಮ ಕುಟುಂಬದಲ್ಲಿ ಒಬ್ಬನೆಂದು ಹೆಮ್ಮೆಯಿಂದ ಹೇಳಿಕೊಳ್ಳುವ ಶ್ವಾನಗಳ ಮಾಲೀಕರು ಅವುಗಳ ನಿತ್ಯ ಕರ್ಮಗಳಿಗೆ ಮಾತ್ರ ಸಾರ್ವಜನಿಕ ರಸ್ತೆಯನ್ನೇ ಅವಲಂಬಿಸುತ್ತಾರೆ. ಯಾವುದೇ ಅಂಜಿಕೆ, ಸ್ವಾಭಿಮಾನ ಬಿಟ್ಟು ರಸ್ತೆಗೆ ತಂದು ಅವುಗಳು ಮಲ ಮೂತ್ರ ಮಾಡುತ್ತಿದ್ದರೆ ತಮಗೆ ಅರಿವಿಲ್ಲದಂತೆ ಇರುತ್ತಾರೆ. ಸಾರ್ವಜನಿಕರು ಕೆಲಸ, ಕಚೇರಿ, ದೇವಸ್ಥಾನ, ಶಾಲೆಗೆ ಹೋಗೋ ಮಕ್ಕಳು ಗೊತ್ತಿಲ್ಲದೆ ಕಾಲಿಟ್ಟರೆ ಪ್ರಸಾದ ನಿಮ್ಮ ಮನೆಯ ತನಕ! ಇದಕ್ಕೆ ಕೊನೆ ಎಂದು. ಕೆಲವರ ಶೋಕಿಗೆ ಮತ್ತೊಬ್ಬರಿಗೆ ಯಾಕೆ ಶಿಕ್ಷೆ ಇದು ನಾಯಿ ಮಾಲೀಕರ ತಪ್ಪಿಗೆ ನಾಯಿಗಳ ಮೇಲೆ ಸಿಟ್ಟು ಮಾಡಿಕೊಂಡರೆ ಪ್ರಯೋಜನ ಇಲ್ಲ. ಮಹಾನಗರ ಪಾಲಿಕೆ ಇದನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕಿದೆ. ಇಲ್ಲವಾದರೆ ಮುಂದೊಂದು ದಿನ ರಸ್ತೆಗಳೇ ಶೌಚಾಲಯ ಆಗಬಹುದು. ಪರಿಸರವಾದಿಗಳು, ಸಂಘ ಸಂಸ್ಥೆ ಈ ಬಹು ದೊಡ್ಡ ಸಮಸ್ಯೆ ಬಗ್ಗೆ ಒಂದು ಅಭಿಯಾನವನ್ನೇ ಆರಂಭಿಸಬೇಕಿದೆ. ನನ್ನ ಕೆಲವು ಸಲಹೆಗಳೆಂದರೆ, ಕಸ ಸಂಗ್ರಹಣೆ ಮಾಡುವ ವಾಹನಗಳಲ್ಲಿ ಪ್ರಚಾರ ನೀಡುವುದು, ಫ್ಲೆಕ್ಸ್ ಹಾಕುವುದು, ಕರಪತ್ರಗಳ ಮೂಲಕ ಎಚ್ಚರಿಕೆ ನೀಡುವುದು, ದಂಡ ವಿಧಿಸುವುದು, ಅವಶ್ಯಕತೆ ಬಿದ್ದರೆ ಶ್ವಾನಗಳನ್ನು ವಶಕ್ಕೆ ಪಡೆಯುವುದು. ಇವೇ ಮುಂತಾದ ಕಠಿಣ ಕ್ರಮ ವಹಿಸಲೇಬೇಕಿದೆ. ದಯವಿಟ್ಟು ಶ್ವಾನಗಳ ಮಾಲೀಕರು ಸಹಕರಿಸಿ.

–ಎನ್. ಕುಮಾರಸ್ವಾಮಿ, ಚಾಮರಾಜ ಮೊಹಲ್ಲಾ, ಮೈಸೂರು.

ಕೇರಳ ರಾಜ್ಯಪಾಲರ ದುಡುಕಿನ ಕ್ರಮ

ಮಾನ್ಯರೆ,

ಕೇರಳದ ರಾಜ್ಯಪಾಲ ಅರಿಫ್ ಮೊಹಮ್ಮದ್ ಖಾನ್ ಇತ್ತೀಚೆಗೆ ಕೇರಳದ ರಸ್ತೆ ಬದಿಯಲ್ಲಿ ಕುಳಿತು ಸುಮಾರು 2 ಗಂಟೆಗಳ ಕಾಲ ಪ್ರತಿಭಟನೆ ನಡೆಸಿದ್ದು ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಎಸ್‌ಎಫ್‌ಐ ವಿದ್ಯಾರ್ಥಿಗಳು ತಮ್ಮ ವಿರುದ್ಧ ಕಪ್ಪು ಬಾವುಟ ಪ್ರದರ್ಶಿಸಿದ ಹಿನ್ನೆಲೆಯಲ್ಲಿ ರಾಜ್ಯಪಾಲರು ತಾವೇ ಪ್ರತಿಭಟನೆಗೆ ಮುಂದಾಗಿದ್ದು ಸರಿಯಲ್ಲ. ರಾಜ್ಯದ ಸಾಂವಿಧಾನಿಕ ಮುಖ್ಯಸ್ಥರಾಗಿ ಕರ್ತವ್ಯ ನಿರ್ವಹಿಸುವ ರಾಜ್ಯಪಾಲರು, ಸ್ವತಃ ತಾವೇ ಪ್ರತಿಭಟನೆಗೆ ಇಳಿಯುವುದು ಪ್ರಜಾಪ್ರಭುತ್ವ ವಿರೋಧಿ ಕ್ರಮ. ಹೆಚ್ಚೆಂದರೆ ರಾಜ್ಯಪಾಲರು ಈ ವಿಚಾರವವನ್ನು ಮುಖ್ಯಮಂತ್ರಿ ಅಥವಾ ಗೃಹ ಸಚಿವರ ಗಮನಕ್ಕೆ ತಂದು ವಿದ್ಯಾರ್ಥಿಗಳ ವಿರುದ್ಧ ಸೂಕ್ತ ಕ್ರಮಕ್ಕೆ ಸೂಚಿಸಬಹುದಿತ್ತು. ಬಹುಶಃ ಭಾರತೀಯ ರಾಜಕೀಯ ಇತಿಹಾಸದಲ್ಲಿ ರಾಜ್ಯಪಾಲರು ತಾವೇ ಪ್ರತಿಭಟನೆಗೆ ಇಳಿದಿರುವುದು ಇದೇ ಮೊದಲು ಎನ್ನಬಹುದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಧಾರ್ಮಿಕ ಸಂಘರ್ಷಕ್ಕೆ ಕಡಿವಾಣ ಬೀಳಬೇಕಿದೆ!

ಮಾನ್ಯರೆ,

ಮಂಡ್ಯ ಜಿಲ್ಲೆ ಕೆರಗೋಡು ಧ್ವಜಸ್ತಂಭ ಮತ್ತು ಹನುಮ ಧ್ವಜ ಪ್ರಕರಣ ದಿನೇ ದಿನೆ ರಾಜಕೀಯ ತಿಕ್ಕಾಟಕ್ಕೆ ಕಾರಣವಾಗುತ್ತಿದೆ. ಅದರಲ್ಲಿಯೂ, ಕೆರಗೋಡು ಎಂಬುದು ರಾಜಕೀಯ ನಾಯಕರ ಪ್ರತಿಭಟನಾ ಕೇಂದ್ರವಾಗಿ ಮಾರ್ಪಟ್ಟಿದೆ. ಕೋಮು ಸೌಹಾರ್ದಕ್ಕೆ ಹೆಸರಾಗಿದ್ದ ಮಂಡ್ಯ ಜಿಲ್ಲೆಯಲ್ಲಿ ಇಂತಹ ಘಟನೆಗಳು ನಡೆಯುತ್ತಿರುವುದು ದುರದೃಷ್ಟಕರ. ಧ್ವಜಸ್ತಂಭದ ವಿಷಯದಲ್ಲಿ ನಡೆದ ಈ ರೀತಿಯ ಗಲಭೆಯು ಖಂಡನೀಯವಾಗಿದೆ. ಕೆರಗೋಡು ಸೇರಿದಂತೆ ರಾಜ್ಯದ ಹಲವೆಡೆ ಈ ರೀತಿಯ ಧರ್ಮ ಹಾಗೂ ಧ್ವಜ ಸಂಘರ್ಷದ ಪ್ರಕರಣಗಳು ಮತ್ತೊಮ್ಮೆ ಮರುಕಳಿಸದಂತೆ ಸರ್ಕಾರ ಎಚ್ಚರವಹಿಸಿ ಕಡಿವಾಣ ಹಾಕಿ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕಿದೆ.

ಪ್ರತಿಯೊಂದು ಧರ್ಮವೂ ಮನುಷ್ಯನ ಉದ್ಧಾರಕ್ಕಾಗಿಯೇ ಹುಟ್ಟಿಕೊಂಡಿದೆ. ಹೀಗಿರುವಾಗ ಮನುಷ್ಯ ಮನುಷ್ಯರ ನಡುವೆ ಸಂಘರ್ಷ ಸೃಷ್ಟಿಸುವ ಧರ್ಮವು ಧರ್ಮವೇ ಅಲ್ಲ ಅನಿಸುತ್ತದೆ. ಶಾಂತಿ, ಅಹಿಂಸೆಯು ಎಲ್ಲಾ ಧರ್ಮಗಳ ಮೂಲ ಮಂತ್ರ. ಆದರೆ ಇದನ್ನು ಆಯಾ ಧರ್ಮದ ಕೆಲ ಅನುಯಾಯಿಗಳು ತಪ್ಪಾಗಿ ಅರ್ಥೈಸಿಕೊಳ್ಳುತ್ತಿರುವುದರಿಂದ ಗೊಂದಲ, ಗಲಭೆ ಹಾಗೂ ಈ ರೀತಿಯ ಧರ್ಮ–ಧ್ವಜ ಸಂಘರ್ಷಗಳು ಅಲ್ಲಲ್ಲಿ ಸೃಷ್ಟಿಯಾಗುತ್ತಿವೆ. ಇದು ತಪ್ಪಬೇಕು. ಏಕೆಂದರೆ ಮನುಷ್ಯ ಮನುಷ್ಯರ ನಡುವಿನ ಸಂಬಂಧ ಹದಗೆಡುತ್ತಿರುವ ಈ ಹೊತ್ತಿನಲ್ಲಿ ಯಾವುದೇ ಧರ್ಮಗಳು ಮಾನವೀಯತೆ ಬೆಳೆಸುವುದು, ಸಮಾಜದಲ್ಲಿ ಶಾಂತಿ ನೆಮ್ಮದಿಗೆ ಆದ್ಯತೆ ನೀಡಬೇಕೇ ವಿನಃ ಈ ರೀತಿಯ ಧರ್ಮ–ಧ್ವಜ ದಳ್ಳುರಿಗೆ ಅವಕಾಶ ನೀಡಬಾರದು. ಇದರಿಂದ ಸಾರ್ವಜನಿಕ ಆಸ್ತಿಪಾಸ್ತಿಗೂ ಧಕ್ಕೆ ಹಾಗೂ ಜನರ ಪ್ರಾಣಹಾನಿಗೂ ಕುತ್ತು ಎಂಬುದನ್ನು ಎಲ್ಲರೂ ಅರಿಯಬೇಕಿದೆ.

ಇಷ್ಟಲ್ಲದೇ ಈ ರೀತಿಯ ಧರ್ಮ ಧ್ವಜ ಸಂಘರ್ಷದ ಪ್ರಕರಣಗಳು ನಡೆದ ಕಡೆ ಜಾತ್ಯತೀತವಾಗಿ ಎಲ್ಲಾ ರಾಜಕೀಯ ಪಕ್ಷಗಳು ಒಗ್ಗಟ್ಟಾಗಿ ಧಾರ್ಮಿಕ ಮುಖಂಡರ ಸಭೆ ಕರೆದು ಸಮಸ್ಯೆಗಳು ಮರುಕಳಿಸದಂತೆ ಸಂಧಾನ ಸಭೆಗಳನ್ನು ನಡೆಸಬೇಕೇ ವಿನಹ, ಇದಕ್ಕೆ ತುಪ್ಪ ಸುರಿಯುವಂತೆ ಪರಸ್ಪರ ದೋಷಾರೋಪ ಮಾಡಿಕೊಂಡು ಹೊತ್ತಿ ಉರಿಯುತ್ತಿರುವ ಮನೆಯಲ್ಲಿ ಚಳಿ ಕಾಯಿಸಿಕೊಳ್ಳುವ ಪ್ರವೃತ್ತಿಯನ್ನು ಎಲ್ಲಾ ರಾಜಕೀಯ ಪಕ್ಷಗಳು ಬಿಡಬೇಕಿದೆ. ಎಲ್ಲಕ್ಕಿಂತ ಮುಖ್ಯವಾಗಿ ಎಲ್ಲಾ ಧರ್ಮಗಳು ಶಾಂತಿ ನೆಮ್ಮದಿಗೆ ಆದ್ಯತೆ ನೀಡಬೇಕು ಎಂಬುದನ್ನು ಪ್ರತಿಯೊಬ್ಬರೂ ಅರಿಯಬೇಕಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಚೆಸ್ಕಾಂ ಎಂಡಿ ಶ್ರೀಧರ್ ಅಮಾನತು ವಾಪಸ್ ಪಡೆಯಲಿ

ಮಾನ್ಯರೆ,

ಪಿರಿಯಾಪಟ್ಟಣದಲ್ಲಿ 150 ಕೆರೆಗಳಿಗೆ ನೀರು ತುಂಬಿಸುವ ಕಾರ್ಯಕ್ರಮದ ಉದ್ಘಾಟನೆಯನ್ನು ಸಿಎಂ ನೆರವೇರಿಸುವಾಗ ಆದ ಲೋಪದಿಂದ ಸೆಸ್ಕ್ ಎಂಡಿ ಶ್ರೀಧರ್ ಅವರನ್ನು ಅಮಾನತ್ತು ಮಾಡಲಾಗಿದೆ. ಸಿಎಂ ಬಟನ್ ಒತ್ತಿದರೂ ಯಂತ್ರ ಚಾಲಿತವಾಗಿಲ್ಲ. ಇದರಿಂದ ಅವರು ಮುಜುಗರಕ್ಕೆ ಒಳಗಾದರು ಎಂಬುದು ಕಾರಣ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇದು ತಾಂತ್ರಿಕ ಲೋಪ. ಕಾರ್ಯಕ್ರಮ ಆಯೋಜನೆಗೆ ಯಾರಿಗೆ ಜವಾಬ್ದಾರಿ ನೀಡಲಾಗಿತ್ತು. ತಾಂತ್ರಿಕ ಅಧಿಕಾರಿ ಪ್ರಾಯೋಗಿಕವಾಗಿ ಪರೀಕ್ಷಿಸಬೇಕಿತ್ತು. ಇವೆಲ್ಲವನ್ನು ಪರಿಗಣಿಸದೆ ಎಂಡಿಯವರನ್ನೇ ನೇರ ಹೊಣೆಗಾರರನ್ನಾಗಿ ಮಾಡಿರುವುದು ಸಂವಿಧಾನ ವಿರೋಧಿ ಕ್ರಮ. ಸಿಎಂ ಸಿದ್ದರಾಮಯ್ಯ ಕಾನೂನು ಪದವೀಧರರು. ಕಾನೂನು ಒಬ್ಬ ನಿರಪರಾಧಿಗೆ ಶಿಕ್ಷೆಯಾಗಬಾರದು ಎಂದು ಹೇಳುತ್ತದೆ. ಇಲ್ಲಿ ನಿರಪರಾಧಿಗೆ ಶಿಕ್ಷೆಯಾಗಿರುವುದು ದುರದೃಷ್ಟಕರ. ಇದನ್ನು ಮುಖ್ಯಮಂತ್ರಿಗಳು ಅರಿಯಬೇಕು ಮೇಲ್ನೋಟಕ್ಕೆ ಇದರ ಹಿಂದೆ ರಾಜಕೀಯ ದ್ವೇಷ ಇರಬೇಕು ಎಂದೆನಿಸುತ್ತದೆ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.

ಮಂಥನ



ನಿವೇದಿತಾ ಎಚ್
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು

ನೀವೇನೇ ಹೇಳಿ... ನಮ್ದೇ ನಮಗಿಷ್ಟ...

ಬನ್ನಿ.... ನನ್ನದೇ ಅನುಭವದ ಮೂಲಕ ಮುಂದೆ ಸಾಗೋಣ...

ಈಗ್ಗೆ ಸುಮಾರು 20 ವರ್ಷಗಳ ಹಿಂದೆ ಚಿಕ್ಕಮಗಳೂರಿನಲ್ಲಿ ವಾಸವಿದ್ದೆವು. ಬೆಂಗಳೂರಿನಲ್ಲಿದ್ದ ನಮ್ಮ ಕುಟುಂಬದ ಆತ್ಮೀಯರೊಬ್ಬರ ಮನೆಗೆ ಭೇಟಿ ನೀಡಿದಾಗ, ಹೊಸತೇನೋ ಒಂದನ್ನು ಪರಿಚಯ ಮಾಡಿಸುತ್ತೇನೆ ಎಂದು ಹೇಳಿ, ನಮ್ಮನ್ನು ಉತ್ತರ ಭಾರತೀಯ ತಿನಿಸುಗಳು ದೊರೆಯುವ ಹೋಟೆಲಿಗೆ ಕರೆದೊಯ್ದರು. ಅದೇ ಮೊದಲ ಬಾರಿಗೆ ರೋಟಿ ಕರ್ರಿಗಳನ್ನು ಸವಿದ ನಾವು ಅದರ ರುಚಿಗೆ ಮಾರು ಹೋದೆವು. ನಮಗೆ ಕರ್ರಿ ಇನ್ನೂ 'ಪಲ್ಯ'ವೇ ಆಗಿತ್ತು, ರೋಟಿ 'ರೊಟ್ಟಿ' ಯಾಗಿತ್ತು. ರೊಟ್ಟಿ ಮತ್ತು 'ಆ' ಪಲ್ಯವನ್ನು ತಿನ್ನಬೇಕೆಂದು ಚಿಕ್ಕಮಗಳೂರಿನಲ್ಲಿ ಉತ್ತರ ಭಾರತೀಯ ತಿನಿಸುಗಳು ದೊರೆಯುವ ಹೋಟೆಲಿನ ಹುಡುಕಾಟ ಆರಂಭಿಸಿದೆವು. ಎರಡು ಹೋಟೆಲುಗಳಲ್ಲಿ ದೊರೆಯುತ್ತಿದ್ದ ಬಗ್ಗೆ ಮಾಹಿತಿ ಕಲೆಹಾಕಿ ಮನೆಗೆ ಹತ್ತಿರವಿದ್ದುದಕ್ಕೆ ಹೋದೆವು. 'ಪಲ್ಯ'ದ ಹೆಸರು ತಿಳಿದಿರಲಿಲ್ಲವಾದ್ದರಿಂದ ತಿಂಡಿ–ತಿನಿಸು ವಿವರವುಳ್ಳ ಮೆನು ಪುಸ್ತಕ ತೆಗೆದುಕೊಂಡು, ಅದರಲ್ಲಿದ್ದ ಹೆಸರುಗಳನ್ನು ಓದುತ್ತಾ ಅಂದು ಕೇಳಿದ್ದನ್ನು ನೆನಪಿಸಿಕೊಳ್ಳಲೆತ್ನಿಸುವಾಗ ಅಂತೂ ಇಂತೂ 'ಪನ್ನೀರು ಪಾಲಾಕ್' ಅನ್ನು ಕಂಡು ಹಿಡಿದೇ ಬಿಟ್ಟೆವು! ಪಾಲಾಕ್ ಪನ್ನೀರ್! ನಂತರ, ಅದನ್ನು ಎಷ್ಟು ತೆಗೆದುಕೊಳ್ಳುವುದು ಎನ್ನುವ ಬಗ್ಗೆ ಜಿಜ್ಞಾಸೆ! ಒಂದಕ್ಕೆ 90 ರೂ. ಇದ್ದುದರಿಂದ, ನಮ್ಮ ಅಪ್ಪ ಅಮ್ಮ, ಮಸಾಲೆ ದೋಸೆ ಬೈಟೂ ಮಾಡಿದ ಹಾಗೆಯೇ ಎಂದುಕೊಳ್ಳುತ್ತಾ, "ನಮಗೆ ಬೇಡ, ಮಕ್ಕಳು ತಿನ್ನಲಿ ಸಾಕು. ಎರಡು ತೆಗೆದುಕೊಳ್ಳೋಣ" ಎಂದು ನಿರ್ಧರಿಸಿ ವೇಟರ್ ಅನ್ನು ಕರೆದು, "ಎರಡು ಪನ್ನೀರು ಪಾಲಾಕ್ ಮತ್ತು ಎರಡು ರೊಟ್ಟಿ" ಎಂದು ಆರ್ಡರ್ ಮಾಡಿದರು. ವೇಟರ್ ನಗುತ್ತಾ, "ಅಯ್ಯೋ ಒಂದು ಪಾಲಾಕ್ ಪನ್ನೀರ್ ನಾಲ್ಕು ರೋಟಿ ತೆಗೆದುಕೊಳ್ಳಿ. ಆಮೇಲೆ ಬೇಕಾದರೆ ಮತ್ತೆ ರೋಟಿಗೆ ಆರ್ಡರ್ ಮಾಡುವಿರಂತೆ." ಎಂದು ನಕ್ಕು ನುಡಿದು ನಮ್ಮ ಮುಂದೆ ತಂದಿಟ್ಟಾಗ, 'ಪಲ್ಯ'ದ ಕ್ವಾಂಟಿಟಿ ನೋಡಿ ನಾವು ದಂಗಾದೆವು. ನಾವು ಎಲ್ಲರಿಗೂ ಒಂದೊಂದು ಎಂದು ತೆಗೆದುಕೊಂಡಿದ್ದರೆ ಏನು ಗತಿ ಎಂದು!

ಈ ಘಟನೆಯನ್ನು ಇಲ್ಲಿ ಏಕೆ ಹೇಳಿದೆನೆಂದರೆ, ಕೆಲ ವರ್ಷಗಳ ಹಿಂದೆ ನಮಗೆ ನಮ್ಮ ಅಡುಗೆ ಊಟ ತಿಂಡಿಗಳನ್ನು ಬಿಟ್ಟು ಬೇರೆ ಬೇರೆ ಪ್ರಾಂತ್ಯದ ತಿಂಡಿ ತಿನಿಸುಗಳ ಬಗ್ಗೆ ಕೇಳಿರುವುದೂ ದುಸ್ತರವಾಗಿತ್ತು. ಹಿಂದೆ ಗೋಬಿ ಮಂಚೂರಿಗೆ ಮೇಲೆ ಚೂಪಾದ ಕಡ್ಡಿಯನ್ನು ಸಿಕ್ಕಿಸಿಯೇ ಕೊಡುತ್ತಿದ್ದರು. ಆಕರ್ಷಕವಾಗಿ ಕಾಣುತ್ತಿದ್ದ ಅದನ್ನು ನೋಡಿ ಅದೇನು? ಅದೇಕೆ ಹಾಗೆ? ಅದರ ಹೆಸರೇನು ಎಂದು ಎಷ್ಟು ತಲೆಕೆಡಿಸಿಕೊಂಡಿದ್ದೆವೋ! ದೊಡ್ಡ ದೊಡ್ಡ ಹೋಟೆಲ್‌ಗಳಲ್ಲಿ ಮಾತ್ರ ದೊರೆಯುತ್ತಿದ್ದ ಗೋಬಿ ಮೊದಲಬಾರಿಗೆ ದರ್ಶಿನಿಗಳಲ್ಲಿ ಮೂವತ್ತು ರೂಪಾಯಿಗೆ ಸಿಗುತ್ತದೆ ಎಂದು ತಿಳಿದಾಗ ಅದೆಷ್ಟು ಸಂತೋಷವಾಗಿತ್ತು! ಪಿಜ್ಜಾಗಳ ಕತೆಯೂ ಹೀಗೇ!

ಆಗಿನ ಪರಿಸ್ಥಿತಿಗೂ ಈಗಿನ ಸಂದರ್ಭಕ್ಕೂ ತಾಳೆಹಾಕಿ ನೋಡಿದರೆ ಅಂತಹುದೊಂದು ಮುಗ್ಧತೆ ನಮಗಿತ್ತೇ ಎಂದು ಆಶ್ಚರ್ಯವೆನಿಸುತ್ತದೆ. ಈಗಂತೂ ಪುಟ್ಟ ಪುಟ್ಟ ಮಕ್ಕಳಿಗೂ ದಕ್ಷಿಣ ಭಾರತೀಯ, ಉತ್ತರ ಭಾರತೀಯ, ಕಾಂಟಿನೆಂಟಲ್ ತಿನಿಸುಗಳ ಎಲ್ಲ ಮಾಹಿತಿಯೂ ಇರುತ್ತದೆ. ನಮ್ಮ ಬದಲಾಗಿರುವ ಆಹಾರ ಸಂಸ್ಕೃತಿಯ ಬಗ್ಗೆ ಒಂದಷ್ಟು ವಿಚಾರಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳೋಣವೆನಿಸಿತು.

ಮನುಷ್ಯ ಸಾವಿರಾರು ವರ್ಷಗಳಿಂದ ಈ ಭೂಮಿಯ ಮೇಲೆ ವಾಸಿಸುತ್ತಿದ್ದಾನೆ. ಹೊಟ್ಟೆ ತುಂಬಿಸಿಕೊಳ್ಳುವ ಅನಿವಾರ್ಯತೆ ಅಂದಿನಿಂದಲೂ ಇದ್ದದ್ದೇ. ಗೆಡ್ಡೆ ಗೆಣಸುಗಳಿಂದ, ಹಸಿ ಮಾಂಸ, ನಂತರ ಸುಟ್ಟ ಮಾಂಸವನ್ನು ತಿಂದು ಬದುಕುತ್ತಿದ್ದವ ಕಾಲಾಂತರದಲ್ಲಿ ಪಾಕಕಲೆಯನ್ನು ರೂಢಿಸಿಕೊಂಡು, ಪ್ರಕೃತಿಯಲ್ಲಿ ದೊರೆಯುವ ಸೊಪ್ಪು–



ಸೆದೆ, ಗೆಡ್ಡೆ–ಗೆಣಸು, ಮಾಂಸಗಳನ್ನು ರುಚಿಯಾಗಿ ಬೇಯಿಸಿಕೊಂಡು ತಿನ್ನಲು ಕಲಿತ. ಲೋಕ ಸುತ್ತುವುದನ್ನು ಕಲಿತ ಮೇಲೆ, ಹೋದ ಕಡೆ ತನ್ನ ಅಡುಗೆ ವಿಧಾನವನ್ನು ತೆಗೆದುಕೊಂಡು ಹೋದ, ವಾಪಸು ಬರುವಾಗ ಬೇರೆ ಬೇರೆ ಪ್ರದೇಶಗಳ ರುಚಿಗಳನ್ನು ಕಲಿತು ತಾನು ಅಳವಡಿಸಿಕೊಂಡ. ಈ ಕೊಡು ಕೊಳ್ಳುವಿಕೆ ಇಂದು ಶುರುವಾದುದಲ್ಲ. ಆಯುಧಗಳನ್ನು ತಯಾರಿಸಿಕೊಂಡು ತನ್ನ ಪ್ರಾಂತ್ಯ ವಿಸ್ತರಿಸಿಕೊಳ್ಳಲು ಯುದ್ಧ ಪ್ರಾರಂಭಿಸಿದ ಮೇಲೆ ಈ ಕೊಡುಕೊಳ್ಳುವಿಕೆ ಅತ್ಯಂತ ವೇಗವನ್ನೇ ಪಡೆದುಕೊಂಡಿತು ಎನ್ನಬಹುದು.

ಅತೀ ಹೆಚ್ಚು ಬಾರಿ ವಿದೇಶಿಯರಿಂದ ಆಕ್ರಮಣಕ್ಕೊಳಗಾದ ಭಾರತ, ತನ್ನ ಆಕ್ರಮಣಕಾರರ ಸಂಸ್ಕೃತಿಯನ್ನು ಕೆಲವೊಮ್ಮೆ ಅನಿವಾರ್ಯವಾಗಿ, ಕೆಲವೊಮ್ಮೆ ಸಂತೋಷದಿಂದ ತನ್ನದಾಗಿಸಿಕೊಂಡಿತು. ಗ್ರೀಕರು, ಮಂಗೋಲರು, ಹೂಣರು, ನಾನಾ ದಾಳಿಕೋರರು, ಆಫ್ಗನ್‌ನ ಮುಘಲರು ನಂತರ ಯೂರೋಪಿಯನ್ನರ ಆಕ್ರಮಣಕ್ಕೆ ಒಳಗಾದ ಭಾರತ ಅವರೆಲ್ಲರ, ಊಟ, ಉಡುಗೆ ತೊಡುಗೆ ಭಾಷೆಗಳನ್ನು ತನ್ನದಾಗಿಸಿಕೊಂಡಿತು.

ಈರುಳ್ಳಿ, ಟೊಮ್ಯಾಟೋ, ಮೆಣಸಿನಕಾಯಿ, ಕಡ್ಲೆಬೀಜ, ಗೆಣಸು, ಗೋಡಂಬಿ, ಬೀನ್ಸ್, ಆಲೂಗೆಡ್ಡೆ, ತೊಗರಿಬೇಳೆ ಸೀಬೆ, ಪಪಾಯ, ಸೀತಾಫಲ ಇವಾವೂ ನಮ್ಮ ದೇಶದ್ದಲ್ಲವೇ ಅಲ್ಲ! ಎಲ್ಲವೂ ನಮ್ಮ ಆಕ್ರಮಣಕಾರರು ನಮಗೆ ಕೊಟ್ಟ ಬಳುವಳಿ! ಇಂದು ಇವೆಲ್ಲವೂ ಇಲ್ಲದೇ ನಮ್ಮ ಊಟ ತಿಂಡಿ ಸಾಗುವುದೇ ಇಲ್ಲ! ಬಿಜಿಎಲ್ ಸ್ವಾಮಿಯವರ "ನಮ್ಮ ಹೊಟ್ಟೆಯೊಳಗೆ ದಕ್ಷಿಣ ಅಮೆರಿಕಾ" ಪುಸ್ತಕವನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಕಾಫಿ, ಟೀ ಇಲ್ಲದೆ ನಮ್ಮ ಬೆಳಗು ಬೆಳಗುವುದೇ ಇಲ್ಲ. ಅವೆರಡೂ ನಮ್ಮ ನೆಲದ್ದಲ್ಲ!

ಇಷ್ಟೆಲ್ಲ ಸಾಮಗ್ರಿಗಳನ್ನು ವಿದೇಶಿಯರಿಂದ ಬಳುವಳಿಯಾಗಿ ಪಡೆದ ನಮಗೆ ಆಹಾರ ಸಂಸ್ಕೃತಿಯಲ್ಲಿನ ಬದಲಾವಣೆಯ ಬಗ್ಗೆ ಮಾತನಾಡುವ ಹಕ್ಕಿದೆಯೇ ಎನ್ನುವ ಪ್ರಶ್ನೆ ನಿಮ್ಮ ಮನಸ್ಸಿನಲ್ಲಿ ಸುಳಿಯಬಹುದು. ಆದರೆ, ತನ್ನ ಅಲೆಮಾರಿತನ, ಆಕ್ರಮಣಶೀಲತೆಯನ್ನು ನಿಧಾನಕ್ಕೆ ಕಡಿಮೆ ಮಾಡಿಕೊಂಡ ಮನುಷ್ಯ, ಒಂದೆಡೆಯಲ್ಲಿ ನೆಲೆ ನಿಂತು ಜೀವನ ಆರಂಭಿಸಿದ ಮೇಲೆ ತನ್ನ ನೆಲದಲ್ಲಿ ಹೇಗೋ ಬೇರೂರಿದ ಈ ವಿದೇಶೀ ಮತ್ತು ದೇಶೀ ಸಾಮಗ್ರಿಗಳನ್ನೇ ತನಗೆ ಒಗ್ಗಿಸಿಕೊಂಡು ಒಂದು ಪಾಕವಿಧಾನವನ್ನು ತಯಾರಿಸಿಕೊಂಡು ಅಡುಗೆಯನ್ನು ರೂಢಿಸಿಕೊಂಡ. ಎಲ್ಲೋ ಒಮ್ಮೊಮ್ಮೆ ಬಾಯಿರುಚಿಗಾಗಿ ಖಾರ ಉಪ್ಪು ಹುಳಿಗಳನ್ನು ಹೆಚ್ಚು ಕಡಿಮೆ ಮಾಡಿಕೊಂಡು ತಿಂದು ಸಂತೋಷಿಸುತ್ತಿದ್ದ.

ಯಾವಾಗ ಜಾಗತೀಕರಣದ ಪರ್ವ ಪ್ರಾರಂಭವಾಯಿತೋ, ಮತ್ತೆ ಮನುಷ್ಯ 'ಆಧುನಿಕ ಅಲೆಮಾರಿ'ಯಾದ. ಮತ್ತೆ ಈ ಆಹಾರ ಸಂಸ್ಕೃತಿಯ ಕೊಡುಕೊಳ್ಳುವಿಕೆ ಪ್ರಾರಂಭವಾಯಿತು. ಆದರೆ ಈ ಬಾರಿ ವಿದೇಶೀ ಸಾಮಗ್ರಿಗಳನ್ನು ಬಳಸಿಕೊಂಡು ತನ್ನ ಪಾಕ ವಿಧಾನಕ್ಕೆ ಹೊಂದಿಸಿಕೊಳ್ಳುವುದರ ಬದಲಿಗೆ, ವಿದೇಶೀ ಆಹಾರ ಪದ್ಧತಿಯನ್ನೇ ತನ್ನದಾಗಿಸಿಕೊಂಡುಬಿಟ್ಟ, ದೇಶದ ಒಳಗೂ ಓಡಾಡಿ ನಾಲ್ಕೂ ದಿಕ್ಕುಗಳ ಆಹಾರಗಳ ಪರಿಚಯ ಮಾಡಿಕೊಂಡು ಬಿಟ್ಟ.

ಭಾರತದೊಳಗಿನ ತಿಂಡಿಗಳನ್ನು ತೆಗೆದುಕೊಂಡರೆ, ಚಪಾತಿ, ಪೂರಿ, ಆಲೂ ಪರೋಟಗಳು ಎಲ್ಲರ ಪ್ರೀತಿಯ ತಿನಿಸುಗಳಾಗಿವೆ. ಪಾನಿಪುರಿ ದೇಶದೆಲ್ಲೆಡೆ ಎಲ್ಲರ ಹಾಟ್ ಫೇವರಿಟ್. ದೋಸೆ, ಇಡ್ಲಿಗಳನ್ನು

> ನಮ್ಮ ಈಗಿನ ಪೀಳಿಗೆ ಈ ಸಾಂಪ್ರದಾಯಿಕ ಅಡುಗೆಗಳ ಬಗ್ಗೆ ಏಕೋ ಅಸಡ್ಡೆ ತೋರುತ್ತದೆ. ಎಣ್ಣೆ–ತುಪ್ಪ ಹೆಚ್ಚಾಗಿ ಬೇಡುವ ಅನಾರೋಗ್ಯಕರ ತಿಂಡಿಗಳು ಎಂಬ ಹಣೆಪಟ್ಟಿ ಹಚ್ಚಿರುವುದು ಇನ್ನೂ ವಿಷಾದಕರ. ಅತಿಯಾದರೆ ಅಮೃತವೂ ವಿಷವೇ. ಮನುಷ್ಯನ ನಾಲಿಗೆ ರುಚಿಯನ್ನು ಬಯಸುತ್ತದೆ. ವೈವಿಧ್ಯತೆಯನ್ನು ಕೇಳುತ್ತದೆ. ಆಗಾಗ ಅದಕ್ಕೂ ರುಚಿ ಬದಲಾವಣೆ ಅಗತ್ಯ. ಆದರೆ ಉಪ್ಪಿನ ಕಾಯಿಯೇ ಊಟವಾಗಬಾರದಲ್ಲವೇ?

ಅತ್ಯಂತ ಸಮತೋಲಿತ ಆಹಾರ ಎಂದು ಪ್ರಪಂಚದೆಲ್ಲೆಡೆ ಜನ ಒಪ್ಪಿದ್ದಾರೆ. ರಾಜಸ್ಥಾನದ ದಾಲ್ ಭಾಟಿ ಚೂರ್ಮವನ್ನು ಸವಿಯುವವರಿದ್ದಾರೆ. ದಿಲ್ಲಿಯ ಚಾಟ್‌ಗಳು ವಿಶ್ವಪ್ರಸಿದ್ಧ. ಲಖ್ನೋದ ಮಾಂಸಾಹಾರಿ ತಿನಿಸುಗಳಿಗೆ ಮಾರು ಹೋಗದವರೇ ಇಲ್ಲ. ಪಂಜಾಬಿ ಆಹಾರದ ಬಗೆಗಂತೂ ಹೇಳುವುದೇ ಬೇಡ. ಗುಜರಾತಿನ ಢೋಕ್ಲಾ ಇಂದು ಎಲ್ಲರ ಮನೆಯಲ್ಲಿ ಇಡ್ಲಿಯಂತೆಯೇ ತಯಾರಾಗುತ್ತದೆ. ಮುಂಬೈನ ವಡಾಪಾವ್ ಪಾವ್ ಭಾಜಿ, ಬಿಹಾರದ ಗೋಲ್ಗಪ್ಪಾ ಇಲ್ಲದ ಬೀದಿಗಳೇ ಇಲ್ಲ. ಮುಘಲರ ಕಾಲದಲ್ಲಿ ಆವಿಷ್ಕಾರಗೊಂಡ ಬಿರಿಯಾನಿ ಹೈದರಾಬಾದಿನ ಮುತ್ತಿನಷ್ಟೇ ಸುಪ್ರಸಿದ್ಧ. ಕೇರಳದ ಮಲಬಾರ್ ಪರೋಟ.

ಇವಲ್ಲದೇ, ವಿದೇಶೀ ತಿನಿಸುಗಳೂ ಇಂದು ಭಾರತೀಯರ ಅಚ್ಚುಮೆಚ್ಚಾಗಿವೆ. ಇಟಲಿಯ ಸ್ಪಗೆಟ್ಟಿ, ಪಿಜ್ಜಾ, ಅಮೆರಿಕದ ಸೈನಿಕರಿಂದ ಆವಿಷ್ಕಾರಗೊಂಡ ಫ್ರೆಂಚ್ ಫ್ರೈಸ್ ಚಿಪ್ಸ್, ಬ್ರಿಟನ್ನಿನ ಸ್ಯಾಂಡ್ವಿಚ್, ಜರ್ಮನಿಯ ಬರ್ಗರ್, ಆಸ್ಟ್ರಿಯಾದ ಕ್ರೊಸ್ಸಾಂಟ್, ಫ್ರಾನ್ಸ್‌ನ ಪಫ್ಸ್, ಪರ್ಷಿಯಾದ ಸಮೋಸಾ, ಟಿಬೆಟ್‌ನ ಮೋಮೋಸ್, ಚೈನಾದ ನೂಡಲ್ಸ್, ಪಾಸ್ತಾ, ರೋಲ್ಸ್, ಮಂಚೂರಿಯನ್‌ಗಳು ಫ್ರೈಡ್ ರೈಸ್, ಜಪಾನ್‌ನ ರಾಮೆನ್, ಸುಶಿ, ಟರ್ಕಿಯ ಕಬಾಬ್ ಶವರ್ಮಾ, ಈಜಿಪ್ಟ್‌ನ ವೇಫರ್ಸ್, ಬ್ರೆಡ್ ಮತ್ತು ಕೇಕುಗಳು ಗ್ರೀಸ್‌ನ ಡೋನಟ್, ಮೆಕ್ಸಿಕೋನ ಟ್ಯಾಕೋ, ಸ್ಪೇನ್‌ನ ಟೋರ್ಟಿಲ್ಲಾ... ಕೊರಿಯನ್ ಧಾರಾವಾಹಿ ಚಲನಚಿತ್ರಗಳು ಮತ್ತು ಸಂಗೀತ ಯುವಜನರನ್ನು ಸೆಳೆದಿರುವುದು ತಿಳಿದಿರುವ ವಿಷಯವೇ. ಈಗ ಆ ಒಲವು ಕೊರಿಯನ್ ಆಹಾರದ ಮೇಲೂ ನಿಧಾನವಾಗಿ ತಿರುಗುತ್ತಿದೆ. ಬೀದಿಗೊಂದರಂತೆ ಹುಟ್ಟಿಕೊಂಡಿರುವ 'ಕೆಫೆ'ಗಳು ಎಲ್ಲರಿಗೂ ಈ ಹೊಸ ಆಹಾರ ವಿಹಾರವನ್ನು ಸುಲಭವಾಗಿ ಕೈಗೆಟಕುವಂತೆ ಮಾಡಿವೆ.

ಜಾಗತೀಕರಣದ ಈ ಸಮಯದಲ್ಲಿ ಈ ರೀತಿಯ ಕೊಡುಕೊಳ್ಳುವಿಕೆ ಅಗತ್ಯ ಮತ್ತು ಅನಿವಾರ್ಯ. ಆದರೆ ಆ ಭರದಲ್ಲಿ ನಮ್ಮ ಸಾಂಪ್ರದಾಯಿಕ ತಿನಿಸುಗಳನ್ನು ಮರೆತು ಹೋಗುವಷ್ಟು ನಾವು ಮೈಮರೆಯಬಾರದು. ಇಂದು ಚಾಕೊಲೇಟ್ ಒಂದು ನಮ್ಮ ಎಲ್ಲ ಸಿಹಿ ತಿನಿಸುಗಳನ್ನು ಮೆಟ್ಟಿ ಎಲ್ಲರ ಕಣ್ಮಣಿಯಾಗಿಬಿಟ್ಟಿದೆ ಎನ್ನುವುದು ವಿಷಾದಕರ. ಅದೆಷ್ಟು ರೀತಿಯ ಸಿಹಿ ತಿನಿಸುಗಳು ನಮ್ಮಲ್ಲಿವೆ. ನಮ್ಮ ಕರ್ನಾಟಕವನ್ನೇ ಮುಖ್ಯವಾಗಿ ತೆಗೆದುಕೊಳ್ಳೋಣ. ಪೂರ್ಣ ಭಾರತದ ಅಡುಗೆಗೆ ಧಾರಾವಾಹಿಯೇ ಬೇಕಾಗಬಹುದು! ವೈವಿಧ್ಯಮಯ ಪಾಯಸಗಳು, ಹೋಳಿಗೆಗಳು, ಹಲ್ವಾಗಳು ಲಾಡುಗಳು, ಗಾರಿಗೆ, ಹಾಲುಬಾಯಿ, ತೊಡೆದೇವು, ಕಜ್ಜಾಯ, ಖರ್ಜಿಕಾಯಿ, ನಮ್ಮ ಮೈಸೂರು ಪಾಕು, ಹುರಿಟ್ಟು, ಕೇಸರೀಬಾತ್, ಸಜ್ಜಪ್ಪ, ರಸಮಲಾಯಿ, ಖೋವಾ, ವಿವಿಧ ಮಿಠಾಯಿಗಳು, ಕೊಬ್ಬರಿ ಮಿಠಾಯಿ ಮರೆಯುವುದುಂಟೇ, ಪಾನಕಗಳು, ತರಹೇವಾರಿ ಉಂಡೆಗಳು, ಜಾಮೂನು ಇವೆಲ್ಲವೂ ಇಂದಿನ ಮಕ್ಕಳಿಗೆ ತಿಳಿದಿಲ್ಲ ಅಥವಾ ಇವು ಅವರ ರುಚಿ ಮೊಗ್ಗುಗಳನ್ನು ಅರಳಿಸುವುದಿಲ್ಲ. ಖಾರದ ಕುರುಕಲು ತಿಂಡಿಗಳಲ್ಲೂ ನಮ್ಮಲ್ಲಿ ಅಸಂಖ್ಯ ಬಗೆಗಳಿವೆ. ಚಕ್ಕುಲಿ ಕೋಡುಬಳೆ ನಿಪ್ಪಟ್ಟು ಬಾಳಕ ಉಪ್ಪೇರಿ(ಇದೊಂದು ರೀತಿಯ ಚಿಪ್ಸ್ ಎ), ತೆಂಗೊಳ್ಳು, ಮಠರಿ, ಖಾರದ ಕಡ್ಡಿ, ಹುರಿದ ಬಗೆಬಗೆಯ ಬೀಜಗಳು, ಚುರುಮುರಿ, ವಡೆಗಳು

ಇನ್ನು main course ಎಂದು ಕರೆಸಿಕೊಳ್ಳುವ ಅಡುಗೆಗಳಂತೂ ಸಾವಿರಾರು!

ಆದರೂ ನಮ್ಮ ಈಗಿನ ಪೀಳಿಗೆ ಈ ಸಾಂಪ್ರದಾಯಿಕ ಅಡುಗೆಗಳ ಬಗ್ಗೆ ಏಕೋ ಅಸಡ್ಡೆ ತೋರುತ್ತದೆ. ಎಣ್ಣೆ–ತುಪ್ಪ ಹೆಚ್ಚಾಗಿ ಬೇಡುವ ಅನಾರೋಗ್ಯಕರ ತಿಂಡಿಗಳು ಎಂಬ ಹಣೆಪಟ್ಟಿ ಹಚ್ಚಿರುವುದು ಇನ್ನೂ ವಿಷಾದಕರ. ಅತಿಯಾದರೆ ಅಮೃತವೂ ವಿಷವೇ. ಮನುಷ್ಯನ ನಾಲಿಗೆ ರುಚಿಯನ್ನು ಬಯಸುತ್ತದೆ. ವೈವಿಧ್ಯತೆಯನ್ನು ಕೇಳುತ್ತದೆ. ಆಗಾಗ ಅದಕ್ಕೂ ರುಚಿ ಬದಲಾವಣೆ ಅಗತ್ಯ. ಆದರೆ ಉಪ್ಪಿನ ಕಾಯಿಯೇ ಊಟವಾಗಬಾರದಲ್ಲವೇ?

ಇಂದಿನ ಯಾವುದೇ ಮಕ್ಕಳನ್ನು ವಿಚಾರಿಸಿ ನೋಡಿ. ಅದು ನಿಮ್ಮ ಮನೆಯದ್ದಾದರೂ ಆಗಿರಬಹುದು ನಮ್ಮ ಮನೆಯದ್ದಾದರೂ ಆಗಿರಬಹುದು, ಅದಕ್ಕೆ ಚಾಕೊಲೇಟ್ ಮತ್ತು ಚಿಪ್ಸ್‌ಗಳು ಇಷ್ಟೇ ಹೊರತು, ಮನೆಯಲ್ಲಿ ಮಾಡಿದ ಸಾಂಪ್ರದಾಯಿಕ ತಿಂಡಿಗಳಲ್ಲ. ಬೆಳಗಿನ ತಿಂಡಿಗೆ ನಾವು ಬ್ರೆಡ್ ಜಾಮ್, ಓಟ್ಸ್, ಕಾರ್ನ್‌ಫ್ಲೇಕ್‌ಗಳನ್ನು ತಿನ್ನುವ ಅಭ್ಯಾಸ ಮಾಡಿಕೊಂಡಿದ್ದೇವೆ. ಊಟಕ್ಕೆ ಪಿಜ್ಜಾ ಬರ್ಗರ್ ತಿನ್ನುವುದನ್ನು ರೂಢಿಸಿಕೊಂಡಿದ್ದೇವೆ. ನೀವು ಗಮನಿಸಿರಬಹುದು, ಈಗ ಬಹಳಷ್ಟು ಹೋಟೆಲುಗಳಲ್ಲಿ, ಬೆಳಗಿನ ಹೊತ್ತಿನಲ್ಲಿ ಮಾತ್ರ ದಕ್ಷಿಣ ಭಾರತೀಯ ತಿಂಡಿ ತಿನಿಸುಗಳು ದೊರೆಯುತ್ತವೆ. ಸಂಜೆಯಾಗುತ್ತಿದ್ದಂತೆಯೇ, ಚೈನೀಸ್ ಮತ್ತು ಉತ್ತರ ಭಾರತೀಯ ತಿನಿಸುಗಳು ಮಾತ್ರ ದೊರೆಯುತ್ತವೆ. ಆದರೆ ಈ ರೀತಿಯ 'ಶಿಫ್ಟ್' ದೇಹದ ಆರೋಗ್ಯಕ್ಕೆ ಒಳ್ಳೆಯದಲ್ಲ ಎಂದು ಆಹಾರ ತಜ್ಞರೇ ಹೇಳುತ್ತಾರೆ. ಈ ಮಣ್ಣಿನಲ್ಲಿ ಹುಟ್ಟಿದ ನಮಗೆ ಇಲ್ಲಿನ ಆಹಾರವೇ ಸೂಕ್ತ. ಆದರೆ ನಮ್ಮ ಅಡುಗೆಗಳ ಪರಿಚಯವೇ ಇಲ್ಲ, ನಮಗೆ ಒಗ್ಗುವುದೇ ಇಲ್ಲ ಎನ್ನುವುದು ಫ್ಯಾಷನ್ ಆಗಿಬಿಟ್ಟಿದೆ.

ಬದಲಾವಣೆಯ ಬಗ್ಗೆ ಇದೊಂದು ನೇತ್ಯಾತ್ಮಕ ಮುಖವಾದರೆ, ಮತ್ತೊಂದು ಸಕಾರಾತ್ಮಕ ಬೆಳವಣಿಗೆಯೂ ಈಗೀಗ ಕಾಣುತ್ತಿದೆ. ನಮ್ಮತನವನ್ನು ಉಳಿಸಿಕೊಳ್ಳುವ ಪ್ರಯತ್ನಕ್ಕೆ ಹಲವರು ಕೈಹಾಕಿ, ಬೇರೆಯವರನ್ನೂ ಉತ್ತೇಜಿಸುತ್ತಿದ್ದಾರೆ. ದೇಸಿ ಉತ್ಪನ್ನಗಳ ತಯಾರಿಕೆಯ ಹಲವಾರು ಬ್ರಾಂಡ್‌ಗಳು ಇಂದು ಸಾಂಪ್ರದಾಯಿಕ ತಿಂಡಿಗಳನ್ನು ಶುಚಿ ರುಚಿಯಾಗಿ ತಯಾರಿಸಿ ಗ್ರಾಹಕರಿಗೆ ತಲುಪಿಸುತ್ತಿವೆ. ಇಡ್ಲಿ ದೋಸೆಯ ಬ್ರಾಂಡಿಂಗ್ ಆಗಿದೆ ಎನ್ನುವುದು ಹೆಮ್ಮೆಯ ವಿಚಾರ. ವಿದೇಶಗಳಲ್ಲೂ ಭಾರತೀಯ ಊಟೋಪಚಾರದ ವಿಧಾನಗಳು ಮುನ್ನೆಲೆಗೆ ಬರುತ್ತಿವೆ. ಇತ್ತೀಚೆಗೆ ಕೆನಡಾದಲ್ಲಿ ಅಲ್ಲಿನವರು ಭಾರತೀಯ ಹಬ್ಬವೊಂದರಲ್ಲಿ ಭಾಗವಹಿಸಿ ಬಾಳೆಲೆಯಲ್ಲಿ ಊಟ ಸವಿದುದ್ದನ್ನು ವಿಡಿಯೋಗಳಲ್ಲಿ ನೋಡಿರುತ್ತೀರಿ. ಭಾರತದ ವಿವಿಧ ಪ್ರಾಂತ್ಯಗಳ ಆಹಾರ ತಯಾರಿಸಿ ಸವಿಯುವ ಅನೇಕ ವಿದೇಶೀ ಯೂಟ್ಯೂಬರ್‌ಗಳಿದ್ದಾರೆ. ಟಿವಿಯಲ್ಲಿ ಅನೇಕ ಅಡುಗೆಯ ಕಾರ್ಯಕ್ರಮಗಳು ಮರೆತು ಹೋದ ಪಾಕ ವಿಧಾನಗಳನ್ನು, ಹಳೆಯ ಕಾಲದ ತಿನಿಸುಗಳನ್ನು ಮರು ಪರಿಚಯಿಸಿ ಮುಂದಿನ ಪೀಳಿಗೆಗೆ ಉಳಿಸಿಕೊಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿವೆ.

ಔಷಧ ಆಹಾರವಾಗಬಾರದು ಆಹಾರವೇ ಔಷಧವಾಗಬೇಕೆಂದು ನಂಬಿದವರು ನಾವು. ಹಾಗಿರುವಾಗ, ನಮ್ಮದಲ್ಲದ ಆಹಾರ ಸಂಸ್ಕೃತಿಯನ್ನು ಬಲವಂತವಾಗಿ ದೇಹಕ್ಕೆ ಕಲಿಸಿ ರೋಗಕ್ಕೆ ತುತ್ತಾಗಿಸುವುದು ಅಕ್ಷಮ್ಯ. ಊಟ ನಮ್ಮಿಚ್ಛೆಯೇ ಆಗಿರಬಹುದು ಆದರೆ ದೇಹದ ಪ್ರಕೃತಿಗೆ ಹಾನಿ ಮಾಡುವಷ್ಟು ಸ್ವೇಚ್ಛೆ ಅಪಾಯಕರ. ಎಲ್ಲ ಬಗೆಯ ಆಹಾರಗಳನ್ನು ಸವಿಯೋಣ. ಅದು ನಮ್ಮ ಹಕ್ಕು, ನಮ್ಮ ಜೀವನ ಪ್ರೀತಿಯನ್ನು ತೋರಿಸುತ್ತದೆ. ಆದರೆ ಅಂತಿಮವಾಗಿ 'ನಮ್ಮದು' ನಮ್ಮ ಒಲವಾಗಿರಲಿ.

ಇನ್ನೆರಡು ದಿನದಲ್ಲಿ ಅವೈಜ್ಞಾನಿಕ ಹಂಪ್ ತೆರವುಗೊಳಿಸದಿದ್ದರೆ ಪಾಲಿಕೆ ಮುಂದೆ ಪ್ರತಿಭಟನೆ

ಮಾಜಿ ಶಾಸಕ ಎಲ್.ನಾಗೇಂದ್ರ ಎಚ್ಚರಿಕೆ



ಮೈಸೂರು–ಬೋಗಾದಿ ಮುಖ್ಯರಸ್ತೆಯಲ್ಲಿ ಅಳವಡಿಸಿರುವ ಅವೈಜ್ಞಾನಿಕ ರೋಡ್ ಹಂಪ್ಸ್‌ಗಳನ್ನು ಮಾಜಿ ಶಾಸಕ ಎಲ್.ನಾಗೇಂದ್ರ ಬುಧವಾರ ಪರಿಶೀಲಿಸಿದರು.


ಮೈಸೂರು, ಜ.31 (ಎಂಕೆ)– ಮೈಸೂರು ವಿವಿ ಮಾನಸಗಂಗೋತ್ರಿ ಮುಖ್ಯ ದ್ವಾರದ ಬಳಿಯಿಂದ ಸ್ಪೀಚ್ ಅಂಡ್ ಹಿಯರಿಂಗ್(ಆಯಿಷ್) ಜಂಕ್ಷನ್ ವರೆಗಿನ ಮೈಸೂರು–ಬೋಗಾದಿ ಮುಖ್ಯ ರಸ್ತೆಯಲ್ಲಿ ನಿರ್ಮಿಸಿರುವ ಅವೈಜ್ಞಾನಿಕ ರೋಡ್ ಹಂಪ್ಸ್‌ಗಳನ್ನು ಇನ್ನೆರಡು ದಿನಗಳಲ್ಲಿ ತೆರವುಗೊಳಿಸದಿದ್ದರೆ ಪಾಲಿಕೆ ಕಚೇರಿ ಎದುರು ಉಗ್ರ ಪ್ರತಿಭಟನೆ ಮಾಡುವುದಾಗಿ ಚಾಮರಾಜ ವಿಧಾನ ಸಭಾ ಕ್ಷೇತ್ರದ ಮಾಜಿ ಶಾಸಕರೂ ಆದ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಇಂದಿಲ್ಲಿ ಎಚ್ಚರಿಕೆ ನೀಡಿದರು.

ಬುಧವಾರ ಬೆಳಗ್ಗೆ ಸ್ಥಳ ಪರಿಶೀಲನೆ ನಡೆಸಿದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಒಂದೂವರೆ ವರ್ಷದ ಹಿಂದೆ ಈ ರಸ್ತೆಯನ್ನು ಅಭಿವೃದ್ಧಿ ಮಾಡಲಾಗಿತ್ತು. ಅಂದಿನಿಂದ ಒಂದೇ ಒಂದು ಅಪಘಾತವಾಗಿರಲಿಲ್ಲ. ಯಾರದೋ ಮಾತು ಕೇಳಿ ರಾತ್ರೋರಾತ್ರಿ ಅವೈಜ್ಞಾನಿಕವಾಗಿ ಹಂಪ್ಸ್ ಅಳವಡಿಸಿದ್ದರಿಂದ ಮೂವರು ಬಲಿಯಾಗಿದ್ದಾರೆ. ಅವರ ಜೀವವನ್ನು ಮತ್ತೆ ತರಲು ಸಾಧ್ಯವಾ? ಎಂದು ಮೈಸೂರು ನಗರಪಾಲಿಕೆ ಅಧಿಕಾರಿಗಳ ವಿರುದ್ಧ ಹರಿಹಾಯ್ದರು.

ಹಂಪ್ಸ್ ಹಾಕಿದಾಗಿನಿಂದ 20ಕ್ಕೂ ಹೆಚ್ಚು ದ್ವಿಚಕ್ರ ವಾಹನ ಸವಾರರು ಬಿದ್ದಿದ್ದಾರೆ. ಇದಕ್ಕೆಲ್ಲಾ ಯಾರು ಹೊಣೆ? ಜೀವಕ್ಕೆ ಬೆಲೆ ಕಟ್ಟಲು ಸಾಧ್ಯವಾ? ಚೆನ್ನಾಗಿರೋ ರಸ್ತೆಯನ್ನು ಹಾಳು ಮಾಡುವುದೆಂದರೆ ಇದೇನಾ? ಎಂದು ಪ್ರಶ್ನಿಸಿದ ಅವರು, ಪಾಲಿಕೆ ಅಧಿಕಾರಿಗಳು ನಿಯಮಾನುಸಾರ ರೋಡ್ ಹಂಪ್ಸ್‌ಗಳನ್ನು ಅಳವಡಿಸಬೇಕು. ಇದರ ಬಗ್ಗೆ ಪೊಲೀಸರು ಸಹ ಎಚ್ಚರಿಕೆ ವಹಿಸಬೇಕು. ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಎಲ್ಲೆಂದರಲ್ಲಿ ರೋಡ್ ಹಂಪ್ಸ್ ಹಾಕುವಂತಿಲ್ಲ. ಆದರೂ ಈ ರೀತಿಯ ಬೇಜವಾಬ್ದಾರಿ ಕೆಲಸ ಮಾಡಿರುವುದು ಖಂಡನೀಯ ಎಂದು ಹೇಳಿದರು.

ನಗರಪಾಲಿಕೆ ಮಾಜಿ ಸದಸ್ಯೆ ಸಿ.ವೇದಾವತಿ, ಕೇಬಲ್ ಮಹೇಶ್, ರಮೇಶ್, ಬಿಜೆಪಿ ಹಾಗೂ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

ಗ್ಯಾರಂಟಿ ನಿಲ್ಲಿಸುವ ಪ್ರಶ್ನೆಯೇ ಇಲ್ಲ



ಬೆಂಗಳೂರು, ಜ.31– ಯಾವುದೇ ಕಾರಣಕ್ಕೂ ಬಡವರ ಕಲ್ಯಾಣಕ್ಕೆ ಅನುಷ್ಠಾನಗೊಳಿಸಿರುವ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ ಎಂದು ಸಿಎಂ ಸಿದ್ದರಾಮಯ್ಯ ಪುನರುಚ್ಚರಿಸಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುತ್ತೇವೆಯೇ ಹೊರತು ನಿಲ್ಲಿಸುವ ಪ್ರಶ್ನೆಯಿಲ್ಲ. ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹೆಚ್ಚು ಮತ ನೀಡದಿದ್ದರೆ ಗ್ಯಾರಂಟಿ ಯೋಜನೆಗಳು ರದ್ದಾಗಬಹುದು. ನಿಮಗೆ ಅಕ್ಷತೆ ಬೇಕಾ ಅಥವಾ ಗ್ಯಾರಂಟಿಗಳು ಬೇಕಾ ಎಂಬ ಮಾಗಡಿ ಶಾಸಕ ಹೆಚ್.ಸಿ.ಬಾಲಕೃಷ್ಣ ಟೀಕೆಗೆ ಪ್ರತಿಕ್ರಿಯೆಯಾಗಿ ಮುಖ್ಯಮಂತ್ರಿ ಸ್ಪಷ್ಟನೆ ನೀಡಿದ್ದಾರೆ. ಗ್ಯಾರಂಟಿ ಯೋಜನೆಗಳು ಬಡವರ ಕಾರ್ಯಕ್ರಮಗಳಾಗಿದ್ದು, ಅವುಗಳನ್ನು ಖಂಡಿತಾ ಮುಂದುವರಿಸಲಾಗುವುದು ಎಂದರು.

ಕೇಂದ್ರ ಬಜೆಟ್ ನಂತರ ಪ್ರತಿಕ್ರಿಯೆ: ಕೇಂದ್ರ ಸರ್ಕಾರ ನಾಳೆ ಮಧ್ಯಂತರ ಬಜೆಟ್ ಮಂಡಿಸುತ್ತಿದ್ದು, ಈ ಬಗ್ಗೆ ನಾಳೆಯೇ ನಾನು ಪ್ರತಿಕ್ರಿಯೆ ನೀಡುತ್ತೇನೆ. ರಾಜ್ಯದ ಪ್ರತಿ ಜಿಲ್ಲೆಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ನೇಮಿಸಲಾಗಿದ್ದು, ಅವರ ಕಾರ್ಯ ಚಟುವಟಿಕೆಗಳನ್ನು ಪರಿಶೀಲನೆ ನಡೆಸಲಾಗಿದೆ. ಸರ್ಕಾರ ಅಧಿಕಾರಕ್ಕೆ ಬಂದು 8 ತಿಂಗಳು ಕಳೆದಿದ್ದು, ಈ ಅವಧಿಯಲ್ಲಿ ಜಿಲ್ಲೆಯಲ್ಲಿ ಅಧಿಕಾರಿಗಳ ಸಲಹೆ, ಸೂಚನೆ ಕಾರ್ಯವೈಖರಿಗಳ ಬಗ್ಗೆ ವಿವರ ಪಡೆಯಲಾಗಿದೆ ಎಂದರು.

ಐದು ವರ್ಷ ಗ್ಯಾರಂಟಿ–ಡಿಸಿಎಂ: ಗ್ಯಾರಂಟಿ ಯೋಜನೆಗಳನ್ನು ರದ್ದು ಮಾಡುವುದಿಲ್ಲ. 5 ವರ್ಷಗಳ ಕಾಲ ಗ್ಯಾರಂಟಿ ಯೋಜನೆಗಳನ್ನು ಜನರಿಗೆ ಕೊಡುತ್ತೇವೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಸಹ ಸ್ಪಷ್ಟನೆ ನೀಡಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋತರೆ ಗ್ಯಾರಂಟಿ ಯೋಜನೆ ರದ್ದಾಗುತ್ತದೆ ಎಂಬ ಶಾಸಕ ಬಾಲಕೃಷ್ಣ ಅವರ ವಿವಾದಿತ ಹೇಳಿಕೆಗೆ ತೇಪೆ ಹಚ್ಚಿದ್ದಾರೆ. ಲೋಕಸಭಾ ಚುನಾವಣೆ ಆದ ಮೇಲೆ ಗ್ಯಾರಂಟಿ ಯೋಜನೆ ಕೊಡಲ್ಲ ಎಂಬುದನ್ನು ಬಾಲಕೃಷ್ಣ ಹೇಳಿರೋದಲ್ಲ. ಬಿಜೆಪಿಯವರು ಹಾಗೆ ಹೇಳಿದ್ದಾರೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಲೋಕಸಭಾ ಚುನಾವಣೆ ಬಳಿಕ ಗ್ಯಾರಂಟಿ ರದ್ದು ಮಾಡ್ತಾರೆ ಎಂದು ಬಿಜೆಪಿಯವರು ಹೇಳಿದ್ದಾರೆ. ನೀವು ಎಚ್ಚರಿಕೆಯಿಂದ ಇರಿ ಎಂದು ಬಾಲಕೃಷ್ಣ ಹೇಳಿದ್ದಾರೆ ಅಷ್ಟೇ ಎಂದು ಸಮಜಾಯಿಷಿ ನೀಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಗುರುವಾರ 1 ಫೆಬ್ರವರಿ 2024

ಸಂಸದ ಪ್ರತಾಪ್ ಸಿಂಹ ವಿರುದ್ಧ ಕಾಂಗ್ರೆಸ್ ವಕ್ತಾರ ಲಕ್ಷ್ಮಣ್ ಹೇಳಿಕೆಗೆ ಕೋರ್ಟ್ ನಿರ್ಬಂಧ

ಮೈಸೂರು, ಜ.31– ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ವಿರುದ್ಧ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಯಾವುದೇ ರೀತಿಯ ಹೇಳಿಕೆಗಳನ್ನು ನೀಡಬಾರದು ಎಂದು ಬೆಂಗಳೂರು ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಮಧ್ಯಂತರ ತಡೆಯಾಜ್ಞೆ ನೀಡಿದ್ದು, ಫೆ.13ರಂದು ನ್ಯಾಯಾಲಯಕ್ಕೆ ಹಾಜರಾಗುವಂತೆ ಲಕ್ಷ್ಮಣ್ ಅವರಿಗೆ ಸಮನ್ಸ್ ಜಾರಿ ಮಾಡಿದೆ.

ತಮ್ಮ ವಿರುದ್ಧ ಲಕ್ಷ್ಮಣ್ ಮಾಡುತ್ತಿದ್ದ ಪತ್ರಿಕಾಗೋಷ್ಠಿಗಳು ಬಹುತೇಕ ಆಧಾರರಹಿತವಾಗಿದ್ದ ಕಾರಣ ಅದರ ಬಗ್ಗೆ ತಮ್ಮ ವಕೀಲರು ಮಂಡಿಸಿದ ವಾದವನ್ನು ಪುರಸ್ಕರಿಸಿದ ನ್ಯಾಯಾಲಯವು ಲಕ್ಷ್ಮಣ್ ಅವರು ಪತ್ರಿಕೆ, ಸುದ್ದಿ ಮಾಧ್ಯಮ, ಸ್ಥಳೀಯ ಕೇಬಲ್ ಚಾನಲ್, ರೇಡಿಯೋ, ಸಾಮಾಜಿಕ ಮಾಧ್ಯಮಗಳಲ್ಲಿ ತಮ್ಮ ವಿರುದ್ಧ ಯಾವುದೇ ಸ್ವರೂಪದ ಹೇಳಿಕೆ ನೀಡುವಂತಿಲ್ಲ ಹಾಗೂ ಪತ್ರಿಕಾಗೋಷ್ಠಿ ನಡೆಸುವಂತಿಲ್ಲ ಎಂದು ಮಧ್ಯಂತರ ತಡೆಯಾಜ್ಞೆ ನೀಡಿರುವುದಾಗಿ ಸಂಸದ ಪ್ರತಾಪ್ ಸಿಂಹ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಗತಿ ಮೊಬೈಲ್ ಅಪ್ಲಿಕೇಷನ್ ತಂತ್ರಾಂಶಕ್ಕೆ ಸಿಎಂ ಚಾಲನೆ



ಪ್ರಗತಿ ಮೊಬೈಲ್ ಅಪ್ಲಿಕೇಶನ್ ತಂತ್ರಾಂಶಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು. ಡಿಸಿಎಂ ಡಿ.ಕೆ.ಶಿವಕುಮಾರ್ ಇದ್ದರು.

ಬೆಂಗಳೂರು, ಜ.31(ಕೆಎಂಶಿ)–ಜಿಲ್ಲಾ ಮಟ್ಟದ ಎಲ್ಲಾ ಇಲಾಖೆಗಳಲ್ಲಿ ಅನುಷ್ಠಾನವಾಗುವ ಯೋಜನೆಗಳ ಕ್ಷೇತ್ರ ಮಟ್ಟದ ಪ್ರಗತಿ ವೀಕ್ಷಣೆಗೆ ಪೂರಕವಾಗಿ ಅಭಿವೃದ್ಧಿಪಡಿಸಿರುವ ಪ್ರಗತಿ ಮೊಬೈಲ್ ಅಪ್ಲಿಕೇಶನ್ ತಂತ್ರಾಂಶಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು.

ಸರ್ಕಾರದ ವಿವಿಧ ಯೋಜನೆಗಳ ಪ್ರಯೋಜನಗಳ ಪರಿಣಾಮಕಾರಿ ಮೇಲ್ವಿಚಾರಣೆಗೆ ಪ್ರಗತಿ ಮೊಬೈಲ್ ಅಪ್ಲಿಕೇಶನ್ ಸಹಾಯ ಮಾಡುತ್ತದೆ. ಅಧಿಕಾರಿಗಳು ಸಂಸ್ಥೆಗಳಿಗೆ ಭೇಟಿ ನೀಡುವುದರಿಂದ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವುಗಳನ್ನು ಪರಿಹರಿಸಲು ಪ್ರಗತಿ ಮೊಬೈಲ್ ಅಪ್ಲಿಕೇಶನ್ ಸಹಾಯ ಮಾಡುತ್ತದೆ. ಸೂಕ್ತ ಯೋಜನೆ ಬಗ್ಗೆ ನಿರ್ಧಾರ ಕೈಗೊಳ್ಳಲು ಮತ್ತು ನಿಧಿಯ ಪರಿಣಾಮಕಾರಿ ಬಳಕೆಗೆ ಈ ಅಪ್ಲಿಕೇಶನ್ ಸಹಾಯಕಾರಿಯಾಗಿದೆ.

ಅಕ್ರಮ ಹಣ ಸಂಗ್ರಹ: ಅಬಕಾರಿ ಇಲಾಖೆ ಪ್ರಥಮ ದರ್ಜೆ ಸಹಾಯಕನಿಗೆ ಶಿಕ್ಷೆ

ಮೈಸೂರು,ಜ.31(ಆರ್‌ಕೆ)–ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದಾಗ ಅಕ್ರಮವಾಗಿ ಸಂಗ್ರಹ ಮಾಡಿದ್ದ 40,000 ರೂ. ಹಣದೊಂದಿಗೆ ಸಿಕ್ಕಿ ಬಿದ್ದಿದ್ದ ಅಬಕಾರಿ ಇಲಾಖೆ ಪ್ರಥಮ ದರ್ಜೆ ಸಹಾಯಕ ಡಿ.ಕೆ.ರವಿಗೆ ಮೈಸೂರಿನ 3ನೇ ಹೆಚ್ಚುವರಿ ಜಿಲ್ಲಾ ಸತ್ರ ಮತ್ತು ವಿಶೇಷ ನ್ಯಾಯಾಲಯವು 1 ವರ್ಷ ಜೈಲು ಶಿಕ್ಷೆ ವಿಧಿಸಿದೆ.

ಅಬಕಾರಿ ಲೈಸನ್ಸ್ ನವೀಕರಣಕ್ಕೆ ಅಬಕಾರಿ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಅಕ್ರಮವಾಗಿ ಹಣ ವಸೂಲಿ ಮಾಡುತ್ತಿದ್ದಾರೆ ಎಂಬ ಮಾಹಿತಿ ಮೇರೆಗೆ ಲೋಕಾಯುಕ್ತ ಡಿವೈಎಸ್ಪಿ ಮ್ಯಾಥ್ಯು ಥಾಮಸ್ ಅವರು ಭ್ರಷ್ಟಾಚಾರ ನಿಗ್ರಹ ಕಾಯ್ದೆಯನ್ವಯ ಪ್ರಕರಣ ದಾಖಲಿಸಿಕೊಂಡು 2013ರ ಅಗಸ್ಟ್ 2ರಂದು ಮೈಸೂರಿನ ಕುವೆಂಪುನಗರದ ಅಬಕಾರಿ ಉಪ ಆಯುಕ್ತರ ಕಚೇರಿ ಮೇಲೆ ದಾಳಿ ನಡೆಸಿದಾಗ ಪ್ರಥಮ ದರ್ಜೆ ಸಹಾಯಕ ಡಿ.ಕೆ.ರವಿ ಅವರ ಬಳಿ ಫೈಲ್ ಮಧ್ಯದಲ್ಲಿ 40,000 ರೂ. ನಗದು ಪತ್ತೆಯಾಗಿತ್ತು.

ವಿಚಾರಣೆ ನಡೆಸಿದಾಗ ಹಣ ಎಲ್ಲಿಂದ ಬಂದಿತ್ತು ಎಂಬುದರ ಬಗ್ಗೆ ಸರಿಯಾದ ಸಮಜಾಯಿಷಿ ನೀಡಿರಲಿಲ್ಲ ಹಾಗೂ ಕಚೇರಿ ನಗದು ವಹಿಯಲ್ಲಿ ಹಣ ಸ್ವೀಕರಿಸಿದ ಬಗ್ಗೆ ನಮೂದಾಗಿರಲಿಲ್ಲವಾದ್ದರಿಂದ ಮ್ಯಾಥ್ಯು ಥಾಮಸ್ ಅವರು ಹಣ ವಶಪಡಿಸಿಕೊಂಡು ತನಿಖೆ ನಡೆಸಿ, 2015ರ ಅಕ್ಟೋಬರ್ 13ರಂದು ಆರೋಪಿ ವಿರುದ್ಧ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಸೆಕ್ಷನ್ 13(1)(ಎ) ಮತ್ತು 13(2) ರಂತೆ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ 3ನೇ ಹೆಚ್ಚುವರಿ ಜಿಲ್ಲಾ ಸತ್ರ ಮತ್ತು ವಿಶೇಷ ನ್ಯಾಯಾಲಯದ ನ್ಯಾಯಾಧೀಶೆ ಕೆ.ಭಾಗ್ಯ ಅವರು ವಾದ ಪ್ರತಿವಾದಗಳನ್ನು ಆಲಿಸಿದ ಬಳಿಕ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಡಿ.ಕೆ.ರವಿಗೆ 1ವರ್ಷ ಜೈಲುವಾಸ ಮತ್ತು 25,000 ರೂ ದಂಡ, ದಂಡ ಪಾವತಿಸದಿದ್ದಲ್ಲಿ 6 ತಿಂಗಳ ಸಾದಾ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಲೋಕಾಯುಕ್ತ ವಿಶೇಷ ಅಭಿಯೋಜಕಿ ಕಲಿಯಂಡ ಮುತ್ತಮ್ಮ ಪೂಣಚ್ಚ ಅವರು ವಾದ ಮಂಡಿಸಿದ್ದರು ಎಂದು ಮೈಸೂರು ಲೋಕಾಯುಕ್ತ ಎಸ್ಪಿ ಎಸ್.ಸುರೇಶ್‌ಬಾಬು ತಿಳಿಸಿದ್ದಾರೆ.

ಸಿಇಟಿಗೆ ಸಲ್ಲಿಸಿರುವ ಅರ್ಜಿಯಲ್ಲಿ ಓದಿದ ಶಾಲಾ ಶಿಕ್ಷಣ ಮಂಡಳಿ ತಪ್ಪಿದ್ದರೂ ಚಲ್ತಾ ಹೈ...

ಬೆಂಗಳೂರು, ಜ. 31(ಕೆಎಂಶಿ)–ಪ್ರಸಕ್ತ ವರ್ಷದ ಸಿಇಟಿ ಪರೀಕ್ಷೆಗೆ ಸಲ್ಲಿಸಿರುವ ಅಭ್ಯರ್ಥಿಗಳ ಅರ್ಜಿಗಳಲ್ಲಿ ತಾವು ಓದಿದ ಶಾಲಾ ಶಿಕ್ಷಣ ಮಂಡಳಿಗಳಿಗೆ ಸಂಬಂಧಿಸಿದಂತೆ ತಪ್ಪಾಗಿದ್ದರೂ ಅರ್ಜಿ ಸ್ವೀಕೃತವಾಗಲಿದೆ. ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ, ಅರ್ಜಿಗಳಲ್ಲಿನ ಮಾಹಿತಿ ತಪ್ಪಾಗಿದ್ದರೂ ಯಾರೂ ಆತಂಕಕ್ಕೆ ಒಳಗಾಗಬೇಕಾಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ವಿದ್ಯಾರ್ಥಿಗಳ 12ನೇ ತರಗತಿ ಅಥವಾ ದ್ವಿತೀಯ ಪಿಯುಸಿ ನೋಂದಣಿ ಸಂಖ್ಯೆಯ ಆಧಾರದ ಮೇಲೆ ಪ್ರಾಧಿಕಾರವು ಅಂಕಗಳ ವಿವರಗಳನ್ನು ಪಡೆದುಕೊಳ್ಳಲಿದೆ. ವಿದ್ಯಾರ್ಥಿಗಳು ಒಂದೇ ಶಾಲಾ ಶಿಕ್ಷಣ ಮಂಡಳಿಯಲ್ಲಿ ಓದಿರಲಿ ಅಥವಾ ಹಲವು ಶಾಲಾ ಶಿಕ್ಷಣ ಮಂಡಳಿಗಳಲ್ಲಿ ಓದಿರಲಿ, ಅದರಿಂದೇನೂ ತೊಂದರೆ ಇಲ್ಲ ಎಂದಿದ್ದಾರೆ. ಜೊತೆಗೆ ಅಭ್ಯರ್ಥಿಗಳ 'ಸ್ಯಾಟ್ಸ್' ಡೇಟಾದಲ್ಲಿ 'ಸಿಐಎಸ್ಸಿಇ' ಎಂದಿರಬೇಕಾದ ಕಡೆ 'ಸಿಬಿಎಸ್‌ಇ' ಎಂದು ತೋರಿಸುತ್ತಿದ್ದರೆ ಅಥವಾ ಇದಕ್ಕೆ ತದ್ವಿರುದ್ಧವಾಗಿ ತೋರಿಸುತ್ತಿದ್ದರೂ ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗಬೇಕಾಗಿಲ್ಲ. ಅವರ ವ್ಯಾಸಂಗದ ವಿವರಗಳೇನೂ ಅದಲು–ಬದಲಾಗುವುದಿಲ್ಲ. ಅಲ್ಲದೆ, ಶಾಲೆಗಳಲ್ಲಿ ಸ್ಯಾಟ್ಸ್ ಡೇಟಾ ಅಲಭ್ಯತೆ, ವ್ಯಾಸಂಗ ಮಾಡಿದ ವರ್ಷಗಳ ಅಪೂರ್ಣ ಮಾಹಿತಿ ಮತ್ತು ಹಲವು ಶಿಕ್ಷಣ ಮಂಡಳಿಗಳಲ್ಲಿ ಓದಿದ್ದರೂ ಒಂದೇ ಒಂದು ಮಂಡಳಿಯ ನಮೂದು ಇತ್ಯಾದಿಗಳಿಂದ ಚಿಂತಿತರಾಗಬೇಕಾಗಿಲ್ಲ.

ಮಿಗಿಲಾಗಿ, 2016–17ಕ್ಕಿಂತ ಮೊದಲು ಯಾವುದೇ ಶಿಕ್ಷಣ ಮಂಡಳಿಯಡಿ 10ನೇ ತರಗತಿ ತೇರ್ಗಡೆಯಾಗಿದ್ದು, ಸ್ಯಾಟ್ಸ್ ನಂಬರ್ ಹೊಂದಿಲ್ಲದೆ ಇರುವ ವಿದ್ಯಾರ್ಥಿಗಳು ನಿರಾತಂಕವಾಗಿ, ಸ್ಯಾಟ್ಸ್ ಸಂಖ್ಯೆಯೊಂದನ್ನು ಖಾಲಿ ಬಿಟ್ಟು, ಸಿಇಟಿ ಅರ್ಜಿಯನ್ನು ತುಂಬಬಹುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸ್ಪಷ್ಟಪಡಿಸಿದೆ.

ಇಂದು ಐಎಎಸ್, ಕೆಎಎಸ್ ಪರೀಕ್ಷಾ ತರಬೇತಿ ಶಿಬಿರದ ಸಮಾರೋಪ

ಮೈಸೂರು,ಜ.31–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಿಂದ ಆಯೋಜಿಸಲಾಗಿದ್ದ ಐಎಎಸ್, ಕೆಎಎಸ್ ಪರೀಕ್ಷಾ ತರಬೇತಿ ಶಿಬಿರದ ಸಮಾರೋಪ ಸಮಾರಂಭ ನಾಳೆ (ಫೆ.1) ಬೆಳಗ್ಗೆ 11 ಗಂಟೆಗೆ ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ನಡೆಯಲಿದೆ. ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪಾನಾಗ್, ಶಿಬಿರಾರ್ಥಿಗಳಿಗೆ ಶುಭ ಹಾರೈಕೆ ಮಾಡಲಿದ್ದಾರೆ. ಪರೀಕ್ಷಾ ಸಿದ್ಧತೆ ಕುರಿತು ಹುಣಸೂರಿನ ಅಸಿಸ್ಟೆಂಟ್ ಕಮಿಷ್ನರ್ ಮಹಮ್ಮದ್ ಹ್ಯಾರೀಸ್ ಸುಮೇರ್ ಕುರಿತು ಮಾತನಾಡಲಿದ್ದಾರೆ. ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಬಿ.ಮಹೇಶ್‌ಕುಮಾರ್ ಅಧ್ಯಯನ ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸಲಿದ್ದು, ಕುಲಸಚಿವ ಪ್ರೊ. ಕೆಎಲ್‌ಎನ್ ಮೂರ್ತಿ ಉಪಸ್ಥಿತರಿರುವರು ಎಂದು ಶಿಬಿರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ತಿಳಿಸಿದ್ದಾರೆ.

ಎರವಲು ಪಡೆದ ಪುಸ್ತಕ ಹಿಂದಿರುಗಿಸಲು ಸೂಚನೆ

ಮೈಸೂರು,ಜ.31–ನಗರ ಕೇಂದ್ರ ಗ್ರಂಥಾಲಯ ಕಚೇರಿಯ ಅಧೀನ ಶಾಖಾ ಅಥವಾ ಸೇವಾ ಕೇಂದ್ರ ಗ್ರಂಥಾಲಯಗಳಲ್ಲಿ ಫೆ.1ರಿಂದ ಮಾ.1ರವರೆಗೆ ಪುಸ್ತಕ ದಾಸ್ತಾನು ಪರಿಶೀಲನೆ ಕಾರ್ಯವನ್ನು ಕೈಗೊಳ್ಳಲಾಗುತ್ತದೆ. ಸದರಿ ದಿನಗಳಂದು ಸಾರ್ವಜನಿಕರಿಗೆ ಗ್ರಂಥಾಲಯದ ಎರವಲು ಸೇವೆ ಒದಗಿಸಲಾಗುವುದಿಲ್ಲ. ಎರವಲು ಪಡೆದ ಪುಸ್ತಕಗಳನ್ನು ಹಿಂದಿರುಗಿಸಲು ಅವಕಾಶವಿರುತ್ತದೆ. ಕಾರಣ ಸಾರ್ವಜನಿಕರು ಎರವಲು ಪಡೆದ ಪುಸ್ತಕಗಳನ್ನು ಹಿಂದಿರುಗಿಸುವಂತೆ ಕೋರಲಾಗಿದೆ. ದಿನಪತ್ರಿಕೆ ಅಥವಾ ನಿಯತಕಾಲಿಕೆ ವಿಭಾಗ ಹಾಗೂ ಪರಾಮರ್ಶನ ವಿಭಾಗಗಳು ಎಂದಿನಂತೆ ಕಾರ್ಯನಿರ್ವಹಿಸುತ್ತವೆ ಎಂದು ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕರು ತಿಳಿಸಿದ್ದಾರೆ.

ಮೈಸೂರು, ಚಾ.ನಗರ, ಮಂಡ್ಯದಲ್ಲಿ ಇಂಜಿನಿಯರ್‌ಗಳ ಮನೆ ಮೇಲೆ ಲೋಕಾಯುಕ್ತ ಪೊಲೀಸರಿಂದ ದಾಳಿ

ಅಪಾರ ಪ್ರಮಾಣದ ಆಸ್ತಿ-ಪಾಸ್ತಿ, ದಾಖಲೆ ಪತ್ತೆ



ಮೈಸೂರಿನ ಕೆ.ಸಿ.ಬಡಾವಣೆಯ ರವಿಕುಮಾರ್ ಮನೆ



ಜೆ.ಪಿ.ನಗರದ ಯಜ್ಞೇಂದ್ರ ಮಾವನ ಮನೆ

ಮೈಸೂರು,ಜ.31(ಆರ್‌ಕೆ)–ಮೈಸೂರು, ಚಾಮರಾಜನಗರ, ಮಂಡ್ಯ ಜಿಲ್ಲೆಯ ಮೂವರು ಇಂಜಿನಿಯರ್‌ಗಳ ಮನೆ, ಕಚೇರಿಗಳ ಮೇಲೆ ಲೋಕಾಯುಕ್ತ ಪೊಲೀಸರು ಬುಧವಾರ ದಾಳಿ ನಡೆಸಿ, ಆದಾಯ ಮೀರಿ ಗಳಿಸಿದ್ದ ಅಧಿಕ ಆಸ್ತಿ, ಚಿನ್ನಾಭರಣವನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನಗರ ಯೋಜನಾ ಶಾಖೆ ಸಹಾಯಕ ನಿರ್ದೇಶಕ ಯಜ್ಞೇಂದ್ರ, ಚಾಮರಾಜನಗರ ಜಿಲ್ಲೆಯಲ್ಲಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗದ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ರವಿಕುಮಾರ್, ಮಂಡ್ಯದಲ್ಲಿ ಲೋಕೋಪಯೋಗಿ ಇಲಾಖೆ ಎಗ್ಸಿಕ್ಯೂಟಿವ್ ಇಂಜಿನಿಯರ್ ಹರ್ಷ ಆದಾಯಕ್ಕಿಂತ ಅಧಿಕ ಆಸ್ತಿ ಗಳಿಸಿರುವ ಅಧಿಕಾರಿಗಳು.

ಮೈಸೂರಿನ ಲೋಕಾಯುಕ್ತ ಎಸ್ಪಿ ಎಸ್.ಸುರೇಶ್‌ಬಾಬು ಅವರ ಮಾರ್ಗದರ್ಶನದಂತೆ ಡಿವೈಎಸ್ಪಿಗಳಾದ ಕೃಷ್ಣಯ್ಯ, ಮಾಥ್ಯೂ ಥಾಮಸ್, ಪವನ್‌ಕುಮಾರ್, ಮಾಲತೇಶ್ ನೇತೃತ್ವದಲ್ಲಿ ರಚಿಸಿದ್ದ ಇನ್ಸ್‌ಪೆಕ್ಟರ್‌ಗಳಾದ ಲೋಹಿತ್, ಶಶಿಕುಮಾರ್, ಎ.ರವಿಕುಮಾರ್, ಉಮೇಶ್, ರೂಪಶ್ರೀ ಅವರನ್ನೊಳಗೊಂಡ ತಂಡ ಈ ಇಬ್ಬರು ಅಧಿಕಾರಿಗಳ ಮೈಸೂರು ಮನೆ, ಕಚೇರಿ, ಸಂಬಂಧಿಕರ ಮನೆಗಳ ಮೇಲೆ ಏಕಕಾಲದಲ್ಲಿ ದಾಳಿ ನಡೆಸಿದರು.

ಮುಡಾ ನಗರ ಯೋಜನಾ ಶಾಖೆ ಅಸಿಸ್ಟೆಂಟ್ ಡೈರೆಕ್ಟರ್ ಯಜ್ಞೇಂದ್ರ ಅವರ ಮೈಸೂರಿನ ಜೆ.ಪಿ.ನಗರದ ಮಾವನ ಮನೆ, ಕಚೇರಿ, ವಿಜಯನಗರದ ಐಶ್ವರ್ಯ ಪೆಟ್ರೋಲ್ ಬಂಕ್ ಬಳಿಯ ಫ್ಲಾಟ್, ಕೆ.ಆರ್.ನಗರ ತಾಲೂಕು ಮಿರ್ಲೆ ಗ್ರಾಮದ ಮನೆ ಮೇಲೆ ದಾಳಿ ನಡೆಸಿದ ಪೊಲೀಸರು ಶೋಧ ನಡೆಸಿದರು.

ಮುಂಜಾನೆ 5.30 ಗಂಟೆಗೆ ದಾಳಿ ನಡೆಸಿದ ವೇಳೆ ಮನೆಯಲ್ಲಿದ್ದ ಯಜ್ಞೇಂದ್ರ ಅವರಿಗೆ ಅಚ್ಚರಿ ಕಾದಿತ್ತು. ಮನೆಯಲ್ಲಿ ಅಲ್ಮೇರಾ, ಕೊಠಡಿಗಳನ್ನೆಲ್ಲಾ ಶೋಧಿಸಿದ ಪೊಲೀಸರಿಗೆ 1 ಫ್ಲಾಟ್, 4 ನಿವೇಶನಗಳು, 1 ಮನೆ, ಮಿರ್ಲೆ ಬಳಿ 2 ಎಕರೆ ಕೃಷಿ ಭೂಮಿ, 86 ಸಾವಿರ ರೂ. ನಗದು, 761 ಗ್ರಾಂ ಚಿನ್ನಾಭರಣ, 3.25 ಕೆ.ಜಿ. ಬೆಳ್ಳಿ ಪದಾರ್ಥ, 1 ಟೆಕ್ಸಾನ್ ಕಾರು, 41 ಲಕ್ಷ ರೂ. ಮೌಲ್ಯದ ಪೀಠೋಪಕರಣ ಸೇರಿದಂತೆ 1.20 ಕೋಟಿ ರೂ.ಗಳಿಗೂ ಹೆಚ್ಚು ಬೆಲೆಬಾಳುವ ಸ್ಥಿರ ಮತ್ತು ಚರಾಸ್ತಿಗಳಿರುವುದು ಪತ್ತೆಯಾಯಿತು.

ಚಾಮರಾಜನಗರದಲ್ಲಿ ಕೆಲಸ ಮಾಡುತ್ತಿರುವ ರವಿಕುಮಾರ್ ಅವರ ಮೈಸೂರಿನಲ್ಲಿರುವ ಜೆ.ಪಿ.ನಗರದ ಮನೆಯಲ್ಲಿ ಶೋಧ ಕಾರ್ಯಾಚರಣೆ ನಡೆಸಿದಾಗ ಕೊಳ್ಳೇಗಾಲದಲ್ಲಿ ತೋಟದ ಮನೆ, ಮೈಸೂರಲ್ಲಿ 1 ನಿವೇಶನ, 1 ಮನೆ, 1 ವಾಣಿಜ್ಯ ಕಟ್ಟಡ, 4 ಎಕರೆ ಕೃಷಿ ಜಮೀನು, 5.9 ಎಕರೆ ಅಡಮಾನ ಇರಿಸಿಕೊಂಡಿರುವ ಭೂಮಿ, 13,30,500 ರೂ. ಬೆಲೆಯ ಚಿನ್ನಾಭರಣ, 1 ಮಾರುತಿ ಸ್ವಿಫ್ಟ್ ಕಾರು, 11 ಲಕ್ಷ ರೂ. ಮೌಲ್ಯದ ಗೃಹೋಪಯೋಗಿ ವಸ್ತುಗಳು ಸೇರಿ ಒಟ್ಟು ಸುಮಾರು 1.67 ಕೋಟಿ ರೂ. ಮೌಲ್ಯದ ಆಸ್ತಿಗಳು ಪತ್ತೆಯಾಗಿವೆ.

ಮಂಡ್ಯ ವರದಿ: ಲೋಕೋಪಯೋಗಿ ಇಲಾಖೆ ಎಗ್ಸಿಕ್ಯೂಟಿವ್ ಇಂಜಿನಿಯರ್ ಹರ್ಷ ಅವರ ನಿವಾಸ ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ಅಪಾರ ಪ್ರಮಾಣದ ನಗ–ನಾಣ್ಯ, ಆಸ್ತಿ–ಪಾಸ್ತಿ, ದಾಖಲೆ ಪತ್ರಗಳನ್ನು ವಶಪಡಿಸಿಕೊಂಡಿದ್ದಾರೆ.

ಬುಧವಾರ ಬೆಳಗ್ಗೆ ಹರ್ಷ ಅವರಿಗೆ ಸಂಬಂಧಿಸಿದ ಮನೆ, ಕಚೇರಿ, ಫಾರ್ಮ್ ಹೌಸ್ ಸೇರಿದಂತೆ ಮಂಡ್ಯ, ಬೆಂಗಳೂರು ಹಾಗೂ ನಾಗಮಂಗಲದಲ್ಲಿ ಮಂಡ್ಯ ಲೋಕಾಯುಕ್ತ ಎಸ್ಪಿ ಸುಜೀತ್ ನೇತೃತ್ವದಲ್ಲಿ ದಾಳಿ ನಡೆದಿದ್ದು, ಒಂದು ಕಡೆ ಮಾತ್ರ ವಿದೇಶಿ ಕರೆನ್ಸಿ ಪತ್ತೆಯಾಗಿರುವ ಬಗ್ಗೆ ಮಾಹಿತಿ ಲಭ್ಯವಾಗಿದೆ.

ಮಂಡ್ಯದ ಪಿಡಬ್ಲ್ಯೂಡಿ ಕಚೇರಿ, ಕಲ್ಲಹಳ್ಳಿಯಲ್ಲಿರುವ ತಂದೆಯ ನಿವಾಸ, ಬೆಂಗಳೂರಿನ ವಿದ್ಯಾರಣ್ಯಪುರಂನಲ್ಲಿರುವ ಹರ್ಷ ನಿವಾಸ ಮತ್ತು ಕಚೇರಿ, ಇದಲ್ಲದೇ ನಾಗಮಂಗಲದಲ್ಲಿರುವ ಹರ್ಷ ಅವರ ಮಾವ, ಕಾಂಗ್ರೆಸ್ ಮುಖಂಡ ಹೆಚ್.ಟಿ.ಕೃಷ್ಣೇಗೌಡರ ಟಿ.ಬಿ.ಬಡಾವಣೆಯ ನಿವಾಸ ಮತ್ತು ತಾಲೂಕಿನ ಸಂಕನಹಳ್ಳಿ ಬಳಿ ಇರುವ ಫಾರ್ಮ್ ಹೌಸ್ ಮೇಲೆ ಬುಧವಾರ ಏಕಕಾಲದಲ್ಲಿ ದಾಳಿ ನಡೆಸಲಾಗಿದೆ.

ಬೆಳಗ್ಗೆ 4.30ರಿಂದ 5 ಗಂಟೆ ಸಮಯದಲ್ಲಿ ಹತ್ತಕ್ಕೂ ಹೆಚ್ಚು ಮಂದಿ ಇದ್ದ ಲೋಕಾಯುಕ್ತ ಅಧಿಕಾರಿಗಳ ತಂಡ ದಾಳಿ ನಡೆಸಿದ್ದು, ದಾಳಿ ವೇಳೆ ಅಪಾರ ಪ್ರಮಾಣದ ಹಣ, ಒಡವೆ ಜಪ್ತಿ ಮಾಡಲಾಗಿದೆ. ಹರ್ಷ ಅವರ ಮಾವ ಕೃಷ್ಣೇಗೌಡರ ಮನೆಯಲ್ಲೂ 350 ಗ್ರಾಂ ಚಿನ್ನ, 2.5 ಕೆಜಿ ಬೆಳ್ಳಿ, 1.5 ಲಕ್ಷ ನಗದು ವಶಕ್ಕೆ ಪಡೆಯಲಾಗಿದೆ. ಇದೇ ವೇಳೆ 20 ವಿದೇಶಿ ಕರೆನ್ಸಿ ಸಹ ಪತ್ತೆಯಾಗಿವೆ.

ರಾಜ್ಯದ ಬೆಂಗಳೂರು, ಮಂಡ್ಯ, ಹಾಸನ, ತುಮಕೂರು, ಚಿಕ್ಕಮಗಳೂರು, ಕೊಪ್ಪಳ, ಬಳ್ಳಾರಿ ಸೇರಿದಂತೆ ಹಲವೆಡೆಯೂ ಲೋಕಾಯುಕ್ತ ಡಿಜಿಪಿ ಪ್ರಶಾಂತ್‌ಕುಮಾರ್, ಎಡಿಜಿಪಿ ಎ.ಸುಬ್ರಹ್ಮಣ್ಯೇಶ್ವರರಾವ್ ನಿರ್ದೇಶನದಂತೆ ಅಧಿಕಾರಿಗಳ ಮನೆ ಮೇಲೆ ಪೊಲೀಸರು ದಾಳಿ ನಡೆಸಿ, ಶೋಧಿಸಿದ್ದಾರೆ.

ವೇದಶಾಸ್ತ್ರ ಪೋಷಿಣೀ ಸಭಾದಿಂದ ವಿದ್ವಾಂಸರಿಗೆ ಸನ್ಮಾನ



ವೇದಶಾಸ್ತ್ರ ಪೋಷಿಣೀ ಸಭಾ ವತಿಯಿಂದ ಐವರು ವೇದ–ಶಾಸ್ತ್ರ ವಿದ್ವಾಂಸರನ್ನು ಸನ್ಮಾನಿಸಲಾಯಿತು. ಈ ಸಂದರ್ಭ ನಿವೃತ್ತ ಐಎಎಸ್ ಅಧಿಕಾರಿ ಎ.ರಾಮಸ್ವಾಮಿ, ಸಭಾಧ್ಯಕ್ಷ ಪ್ರೊ.ಬಿ.ಎನ್.ನಾಗರಾಜಭಟ್ಟ, ಗೌರವ ಕಾರ್ಯದರ್ಶಿ ಎ.ಎಂ.ಚಂದ್ರಶೇಖರ್ ಮತ್ತಿತರರಿದ್ದರು.

ಮೈಸೂರು,ಜ.31(ಎಂಕೆ)–ವೇದಶಾಸ್ತ್ರ ಪೋಷಿಣೀ ಸಭಾ ವತಿಯಿಂದ ವೇದ–ಶಾಸ್ತ್ರ ವಿದ್ವಾಂಸರಾದ ಬೆಳಗಾವಿಯ ವಿದ್ವಾನ್ ಪಳ್ಳತ್ತಡ್ಕ ಶಂಕರನಾರಾಯಣ ಭಟ್ಟ, ಬೆಂಗಳೂರಿನ ವಿದ್ವಾನ್ ಕೆ.ರಾಜಗೋಪಾಲಾಚಾರ್ಯ, ತುರುವೇಕೆರೆಯ ವಿದ್ವಾನ್ ಟಿ.ಎನ್.ಪ್ರಭಾಕರ, ಶೃಂಗೇರಿಯ ವಿದ್ವಾನ್ ಜಿ.ಮಹಾಬಲೇಶ್ವರ ಭಟ್ಟ ಹಾಗೂ ಮೈಸೂರಿನ ವಿದುಷಿ ದಿನಮಣಿ ಶ್ರೀನಿವಾಸಮೂರ್ತಿ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ನಗರದ ನಾದಬ್ರಹ್ಮ ಸಂಗೀತ ಸಭಾದಲ್ಲಿ ಬುಧವಾರ ಆಯೋಜಿಸಿದ್ದ ವಿದ್ವಾಂಸರ ಸನ್ಮಾನ ಸಮಾರಂಭದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಎ.ರಾಮಸ್ವಾಮಿ, ವಿದ್ವಾಂಸರನ್ನು ಸನ್ಮಾನಿಸಿ ಅಭಿನಂದಿಸಿದರು. ಹಾಗೆಯೇ ಸಾಗರದ ವಿದ್ವಾನ್ ಎಸ್.ಕೃಷ್ಣಮೂರ್ತಿ ಭಟ್ಟ ಹಾಗೂ ಗೋಕರ್ಣದ ವಿದ್ವಾನ್ ಶ್ರೀಧರ ಶೇಷ ಅಡಿಯವರಿಗೆ ಮರಣೋತ್ತರವಾಗಿ ಅವರ ಕುಟುಂಬಸ್ಥರನ್ನು ಸನ್ಮಾನಿಸಲಾಯಿತು.

ಇದಕ್ಕೂ ಮುನ್ನ ಸನ್ಮಾನಿತರನ್ನು ಕುರಿತು ಮಾತನಾಡಿದ ಸಂಸ್ಕೃತ ವಿದ್ವಾಂಸ ಹೆಚ್.ವಿ.ನಾಗರಾಜರಾವ್, ವೇದ–ಶಾಸ್ತ್ರಗಳು ನಮ್ಮ ಸಂಸ್ಕೃತಿಯ ಆಧಾರ ಸ್ತಂಭವಾಗಿದೆ. ಮನೆ ಮನೆಗಳಲ್ಲಿ ವೇದ–ಶಾಸ್ತ್ರ ಅಧ್ಯಯನವಾಗುತ್ತಿದ್ದ ಕಾಲ ಮರೆಯಾಗಿದ್ದು, ಶ್ಲೋಕಗಳನ್ನು ಪಠಣ ಮಾಡಿದವರನ್ನೇ ವಿದ್ವಾಂಸರೆನ್ನುವ ಕಾಲಕ್ಕೆ ಬಂದಿದ್ದೇವೆ. 50–60 ವರ್ಷದ ಹಿಂದಿದ್ದ ವೇದ–ಶಾಸ್ತ್ರ ವಿದ್ವಾಂಸರಲ್ಲಿ ಇದ್ದಂತಹ ವಿದ್ವತ್ ಈಗಿನ ವಿದ್ವಾಂಸರಲಿಲ್ಲ. ಆದ್ದರಿಂದ ಸಂಸ್ಕೃತ ಶ್ಲೋಕಗಳನ್ನು ಹೇಳುವುದಷ್ಟೇ ಅಲ್ಲ ಅವುಗಳ ಅರ್ಥವನ್ನು ಅರಿತಿರಬೇಕು ಎಂದು ಹೇಳಿದರು.

ವಿದೇಶಿಯರೇ ವೇದ–ಶಾಸ್ತ್ರ ಅಧ್ಯಯನ ಮಾಡಲು ಭಾರತಕ್ಕೆ ಬರುತ್ತಿರುವಾಗ ಭಾರತೀಯರಾದ ನಾವು ಸಂಸ್ಕೃತ ಭಾಷೆಯನ್ನಾದರೂ ಕಲಿಯುವುದು ಬೇಡವೇ ಎಂದು ಪ್ರಶ್ನಿಸಿದ ಅವರು, ನಮ್ಮ ಮುಂದಿನ ಪೀಳಿಗೆ ವೇದ–ಶಾಸ್ತ್ರ, ಸಂಸ್ಕೃತವನ್ನು ಕಲಿಯಲಿ ಎಂಬ ಮಹದುದ್ದೇಶದಿಂದ ಹಾಗೂ ಯುವಕರನ್ನು ವಿದ್ವಾಂಸರನ್ನಾಗಿಸುವ ನಿಟ್ಟಿನಲ್ಲಿ ಪ್ರೋತ್ಸಾಹ ರೂಪಕವಾಗಿ ವೇದಶಾಸ್ತ್ರ ಪೋಷಿಣೀ ಸಭಾ ವತಿಯಿಂದ ವಿದ್ವಾಂಸರನ್ನು ಪ್ರತಿವರ್ಷ ಸನ್ಮಾನಿಸಲಾಗುತ್ತಿದೆ ಎಂದು ತಿಳಿಸಿದರಲ್ಲದೆ, ಸನ್ಮಾನಿತ ವಿದ್ವಾಂಸರ ಸಾಧನೆಯನ್ನು ಪರಿಚಯಿಸಿಕೊಟ್ಟರು.

ನಂತರ ನಿವೃತ್ತ ಐಎಎಸ್ ಅಧಿಕಾರಿ ಎ.ರಾಮಸ್ವಾಮಿ ಮತ್ತು ಅವರ ಪತ್ನಿ ಗಾಯತ್ರಿ ಅವರನ್ನು ಸನ್ಮಾನಿಸಲಾಯಿತು. ವೇದಶಾಸ್ತ್ರ ಪೋಷಿಣೀ ಸಭಾ ಅಧ್ಯಕ್ಷ ಪ್ರೊ.ಬಿ.ಎನ್.ನಾಗರಾಜಭಟ್ಟ, ಗೌರವ ಕಾರ್ಯದರ್ಶಿ ಎ.ಎಂ.ಚಂದ್ರಶೇಖರ್, ವಿದ್ವಾನ್ ಡಾ.ಎನ್.ಸುಬ್ರಹ್ಮಣ್ಯಭಟ್ಟ, ವಿದ್ವಾನ್ ಡಾ.ಟಿ.ವಿ.ಸತ್ಯನಾರಾಯಣ, ವಿದ್ವಾನ್ ಕುಮಾರ ಭಟ್ಟ, ನಾರಾಯಣ ಹೆಗಡೆ ಮತ್ತಿತರರು ಉಪಸ್ಥಿತರಿದ್ದರು.

ಜಯದೇವ ಆಸ್ಪತ್ರೆಯ ಪ್ರಭಾರ ನಿರ್ದೇಶಕರಾಗಿ ಡಾ.ರವೀಂದ್ರನಾಥ್ ನೇಮಕ




ಬೆಂಗಳೂರು: ರಾಜ್ಯ ಸರ್ಕಾರ, ರಾಜ್ಯದ ಪ್ರತಿಷ್ಠಿತ ಹೃದ್ರೋಗ ಆಸ್ಪತ್ರೆ ಜಯದೇವ ಆಸ್ಪತ್ರೆಯ ಪ್ರಭಾರ ನಿರ್ದೇಶಕರಾಗಿ ಡಾ. ಕೆ.ಎಸ್. ರವೀಂದ್ರನಾಥ್ ಅವರನ್ನು ನೇಮಕ ಮಾಡಿ ಬುಧವಾರ ಆದೇಶ ಹೊರಡಿಸಿದೆ.

ಜಯದೇವ ಆಸ್ಪತ್ರೆ ನಿರ್ದೇಶಕರಾಗಿದ್ದ ಡಾ.ಸಿ.ಎನ್.ಮಂಜುನಾಥ್ ಅವರು ಇಂದು ನಿವೃತ್ತಿಯಾದರು. ಶಾಶ್ವತ ನಿರ್ದೇಶಕರ ಆಯ್ಕೆ ಬಗ್ಗೆ ಸರ್ಕಾರ ಇನ್ನು ಯಾವ ನಿರ್ಧಾರಕ್ಕೂ ಬಂದಿಲ್ಲ. 69 ವರ್ಷದ ಡಾ.ರವೀಂದ್ರನಾಥ್ ಅವರು ಜಯದೇವ ಆಸ್ಪತ್ರೆಯಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಇವರು ಈ ಹಿಂದೆ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದಲ್ಲಿ ಕುಲಪತಿಯಾಗಿ ಕಾರ್ಯನಿರ್ವಹಿಸಿದ್ದರು.

ಫೆ.3ರಿಂದ 5ರವರೆಗೆ ಇ–ಫೈಲಿಂಗ್ ಪೋರ್ಟಲ್ ಸೇವೆ ಸ್ಥಗಿತ

ನವದೆಹಲಿ: ನಿಗದಿತ ನಿರ್ವಹಣೆಯ ಕಾರಣದಿಂದಾಗಿ ಇ–ಫೈಲಿಂಗ್ ಪೋರ್ಟಲ್‌ನ ಸೇವೆಯು ಫೆ.3ರಿಂದ ಫೆ.5ರವರೆಗೆ ಲಭ್ಯವಿರುವುದಿಲ್ಲ ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿದೆ. ಸಿಸ್ಟಂನ ತಾಂತ್ರಿಕ ಉನ್ನತೀಕರಣವನ್ನು ಒಳಗೊಂಡ ನಿಗದಿತ ನಿರ್ವಹಣಾ ಚಟುವಟಿಕೆಯಿಂದಾಗಿ ಇ–ಫೈಲಿಂಗ್ ಪೋರ್ಟಲ್‌ನಲ್ಲಿ ತೆರಿಗೆದಾರರ ಸೇವೆಗಳನ್ನು ಶನಿವಾರ (03.02.24) ಮಧ್ಯಾಹ್ನ 2ರಿಂದ ಸೋಮವಾರ (05.02.24) ಬೆಳಗ್ಗೆ 6ರವರೆಗೆ ನಿರ್ಬಂಧಿಸಲಾಗುತ್ತಿದೆ ಎಂದು ಆದಾಯ ತೆರಿಗೆ ಇಲಾಖೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ. ತೆರಿಗೆದಾರರು ತಮ್ಮ ಇ–ಫೈಲಿಂಗ್ ಕಾರ್ಯಗಳನ್ನು ಇದಕ್ಕೆ ಅನುಗುಣವಾಗಿ ರೂಪಿಸುವಂತೆ ಆದಾಯ ಇಲಾಖೆ ಮನವಿ ಮಾಡಿದೆ.

ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಹುಟ್ಟುಹಬ್ಬದ ಸಂಭ್ರಮ; ಮುಖಂಡರು, ಅಭಿಮಾನಿಗಳಿಂದ ವಿವಿಧೆಡೆ ಭಾರಿ ಸನ್ಮಾನ



ಬುಧವಾರ ಹುಟ್ಟುಹಬ್ಬ ಆಚರಿಸಿಕೊಂಡ ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ ಅವರನ್ನು ಗ್ರಾಪಂ ಮಾಜಿ ಸದಸ್ಯ ಕೆ.ಚಂದ್ರಶೇಖರ್, ಗ್ರಾಪಂ ಮಾಜಿ ಉಪಾಧ್ಯಕ್ಷ ಇ.ಪಿ.ರವಿ, ಮಾಜಿ ಕಾರ್ಪೋರೇಟರ್ ಸವಿತಾ ಸುರೇಶ್, ವಕೀಲ ಸಿದ್ದರಾಜು, ಗ್ರಾಪಂ ಮಾಜಿ ಸದಸ್ಯ ಸೊಸೈಟಿ ಆನಂದ್, ಮುಖಂಡರಾದ ಸುರೇಶ್, ಎಸ್.ಬಿ.ಶಿವು, ಕೇಬಲ್ ರವಿ, ಹೊನ್ನೇಗೌಡ, ಶಂಭೇಗೌಡ, ಅಂಗಡಿ ನಾಗರಾಜು, ಕಾಳಪ್ಪ, ಸಿದ್ದಪ್ಪ, ಬೆಳವಾಡಿ ಮಹದೇವ ಇನ್ನಿತರರು ಬಾದಾಮಿ ಹಾರ ಹಾಕಿ ಅಭಿನಂದಿಸಿದರು.



ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಹಂಚ್ಯಾ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮಂಜು ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು. ಜೆಡಿಎಸ್ ಮುಖಂಡರಾದ ಬಾಬು, ಹರೀಶ್‌ಗೌಡರ ಅಭಿಮಾನಿ ನಾಡನಹಳ್ಳಿ ಮಧುಸೂದನ್, ಆಲನಹಳ್ಳಿ ಗ್ರಾಪಂ ಮಾಜಿ ಸದಸ್ಯ ಗೋವಿಂದ, ಬನ್ನೂರು ಶಕ್ತಿದಾನಿಗಳ ಸಂಘದ ಅಧ್ಯಕ್ಷ ಜಿ.ಕೆ.ನಯನಗೌಡ ಇತರರಿದ್ದರು.



ಬುಧವಾರ ತಮ್ಮ 37ನೇ ವರ್ಷದ ಹುಟ್ಟುಹಬ್ಬ ಆಚರಿಸಿಕೊಂಡ ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ ಅವರನ್ನು ಸಿದ್ದಲಿಂಗಪುರ ಗ್ರಾಪಂ ಅಧ್ಯಕ್ಷ ಮಾದೇಶ್, ಮಾಜಿ ತಾಪಂ ಸದಸ್ಯ ರೇವಣ್ಣ, ಸಿದ್ದಲಿಂಗಪುರ ಗ್ರಾಪಂ ಸದಸ್ಯ ಮಂಜುನಾಥ್, ಟಿಎಪಿಸಿಎಂಎಸ್ ಸದಸ್ಯ ಪ್ರಕಾಶ್ ಕಾಮನಕೆರೆಹುಂಡಿ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿ, ಶುಭ ಕೋರಿದರು.



ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡರ ಹುಟ್ಟುಹಬ್ಬಕ್ಕೆ ಸಮಾಜ ಸೇವಕ ಹಾಗೂ ಉದ್ಯಮಿ ಎಸ್.ಶ್ರೀಕಾಂತ್ ಆತ್ಮೀಯವಾಗಿ ಶುಭ ಕೋರಿದರು. ಈ ವೇಳೆ ಮೈಮುಲ್ ಅಧ್ಯಕ್ಷ ಪ್ರಸನ್ನ, ಜಯಪುರ ಗ್ರಾಪಂ ಸದಸ್ಯರಾದ ಎಂ.ನಾಗರಾಜು, ಬಿ.ರೇಣುಕಾ, ಬೈರೇಶ್, ಮುಖಂಡರಾದ ರಂಗಸ್ವಾಮಿ, ಹೊಸಕೆರೆ ಮಂಜು, ನಾಗರಾಜು ಉಪಸ್ಥಿತರಿದ್ದರು.



ಚಾಮುಂಡಿಬೆಟ್ಟದ ಗ್ರಾಮಸ್ಥರು, ಅಯ್ಯಪ್ಪಸ್ವಾಮಿ ಸಮಿತಿ ಪದಾಧಿಕಾರಿಗಳು ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಹುಟ್ಟುಹಬ್ಬದ ಶುಭ ಕೋರಿದರು.

ಹನುಮ ಧ್ವಜ ತೆರವುಗೊಳಿಸಿದ ವಿವಾದ

ಬೂದಿ ಮುಚ್ಚಿದ ಕೆಂಡದಂತಿರುವ ಕೆರಗೋಡು

ಅಪ್ರಾಪ್ತ ಬಾಲಕನನ್ನು ವಿಚಾರಣೆಗೊಳಪಡಿಸಿದ ಪೊಲೀಸರು, ಮನೆ ಬಾಗಿಲು ತೆರೆಯದೆ ಬಿಜೆಪಿಗರಿಗೆ ಹೊರಗೆ ನಿಲ್ಲಿಸಿದ ಗ್ರಾಮದ ವಾಸಿ

- ಗ್ರಾಮದಲ್ಲಿ ಎಲ್ಲರೂ ಪಕ್ಷಾತೀತವಾಗಿ ಹನುಮಧ್ವಜ ಪರ
- ಪೊಲೀಸರು ಹೋರಾಟಗಾರರನ್ನು ಬೆದರಿಸುತ್ತಿದ್ದಾರೆ
- ಹೊರಗಡೆಯಿಂದ ಜನರನ್ನು ಕರೆಸಿಲ್ಲ, ಎಲ್ಲಾ ಜಿಲ್ಲೆಯವರೇ


ಮನೆ ಮನೆಗೆ ತೆರಳಿ ಮಾತುಕತೆ ನಡೆಸುತ್ತಿರುವ ಬಿಜೆಪಿ ಮುಖಂಡರು.

ಮಂಡ್ಯ, ಜ.31– ಹನುಮ ಧ್ವಜ ವಿವಾದದಿಂದ ರಾಷ್ಟ್ರ ಮಟ್ಟದಲ್ಲಿ ವಿವಾದದ ಕೇಂದ್ರ ಬಿಂದುವಾಗಿ, ಬೂದಿಮುಚ್ಚಿದ ಕೆಂಡದಂತಿದ್ದ ಮಂಡ್ಯ ತಾಲೂಕಿನ ಕೆರಗೋಡು ಗ್ರಾಮ ಸದ್ಯಕ್ಕೆ ಸಹಜ ಸ್ಥಿತಿಗೆ ಮರಳುವ ಸಾಧ್ಯತೆ ಕಾಣದು.

ಸೋಮವಾರ ಕೆರಗೋಡಿನಿಂದ ಮಂಡ್ಯದ ಡಿಸಿ ಕಚೇರಿವರೆಗೆ ನಡೆದ ಪಾದಯಾತ್ರೆಯಲ್ಲಿ ಫ್ಲೆಕ್ಸ್‌ಗಳಿಗೆ ಕಲ್ಲು ಹೊಡೆದ ಆರೋಪದಡಿ ಅದೇ ಗ್ರಾಮದ 9ನೇ ತರಗತಿಯ ಅಪ್ರಾಪ್ತ ಬಾಲಕನನ್ನು ಕೆರಗೋಡು ಪೊಲೀಸರು ವಿಚಾರಣೆಗೊಳಪಡಿಸಿರುವುದು ಆತಂಕ ಸೃಷ್ಟಿಸಿದೆ.

ಪಾದಯಾತ್ರೆ ವೇಳೆ ಕಾಂಗ್ರೆಸ್ ಶಾಸಕ ಗಣಿಗ ರವಿಕುಮಾರ್ ಮತ್ತು ಸಿಎಂ, ಡಿಸಿಎಂ ಇದ್ದ ಸರ್ಕಾರಿ ಕಾರ್ಯಕ್ರಮದ ಫ್ಲೆಕ್ಸ್ ಹರಿದಿದ್ದ ಆರೋಪದಡಿ ಕೆರಗೋಡು ಗ್ರಾಮದ ಅಪ್ರಾಪ್ತನನ್ನು ಕರೆದೊಯ್ದು ಪೊಲೀಸರು ವಿಚಾರಣೆಗೊಳಪಡಿಸಿದ್ದು, ಬಾಲಕನ ಜೊತೆ ತಂದೆ ಪಾಪಣ್ಣ ಅವರನ್ನು ಬೆಳ್ಳಂಬೆಳಗ್ಗೆ ಪೊಲೀಸರು ಕರೆದೊಯ್ದು ವಿಚಾರಣೆ ನಡೆಸಿ, ವಿಚಾರಣೆ ಮುಗಿದ ಬಳಿಕ ವಾಪಸ್ ಕಳುಹಿಸಿದ್ದಾರೆ.

ವಿಚಾರ ತಿಳಿದು ಬಾಲಕನ ಮನೆಗೆ ಆಗಮಿಸಿದ ಬಿಜೆಪಿ ನಿಯೋಗಕ್ಕೆ ಬಾಲಕನ ತಂದೆ ತರಾಟೆಗೆ ತೆಗೆದುಕೊಂಡಿದ್ದು, ಬಾಗಿಲು ಹಾಕಿ ಮನೆಗೆ ಬರೋದು ಬೇಡ, ನಮಗೆ ರಾಜಕೀಯ ಬೇಡ. ಯಾವ ಧ್ವಜವಾದರೂ ಹಾರಾಡಲಿ ಎಂದು ಅಸಮಾಧಾನ ಹೊರಹಾಕಿದರು. ಬಳಿಕ ಅವರನ್ನು ಸಮಾಧಾನ ಪಡಿಸಿ ಧೈರ್ಯ ಹೇಳಿದ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ತಂದೆ ಮಗನಿಗೆ ಧೈರ್ಯ ಹೇಳಿ ನಾವು ನಿಮ್ಮೊಂದಿಗೆ ಇದ್ದೇವೆ. ನಾವೇನು ಅತ್ಯಾಚಾರ, ದರೋಡೆ ಮಾಡಿಲ್ಲ, ನ್ಯಾಯಕ್ಕಾಗಿ ಹೋರಾಡಿದ್ದೇವೆ. ಧೈರ್ಯವಾಗಿರಿ ಎಂದು ಸಾಂತ್ವನ ಹೇಳಿದರು. ಇದಾದ ಬಳಿಕ ಗ್ರಾಮದಲ್ಲಿ ಬಿಜೆಪಿ, ಗ್ರಾಮದ ಮುಖಂಡರು, ಗ್ರಾಪಂ ಸದಸ್ಯರು ಸಭೆ ನಡೆಸಿದರು.

ಬಳಿಕ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಪೊಲೀಸರು 9ನೇ ತರಗತಿ ಹುಡುಗನನ್ನ ಠಾಣೆಗೆ ಕರೆದೊಯ್ದಿದ್ದಾರೆ. ಹನುಮಧ್ವಜ ಹೋರಾಟದಲ್ಲಿ ಭಾಗಿಯಾದವರನ್ನು, ಹೆದರಿಸಿ ಬೆದರಿಸಲಾಗುತ್ತಿದೆ. ಅಪ್ರಾಪ್ತನ ತಂದೆ– ತಾಯಿ ತುಂಬಾ ಹೆದರಿಕೊಂಡಿದ್ದಾರೆ. ನಾವು ಯಾರನ್ನೂ ಬೇರೆ ಜಿಲ್ಲೆಯಿಂದ ಕರೆಸಿಲ್ಲ. ಎಲ್ಲರೂ ಕೆರಗೋಡು, ಮಂಡ್ಯದವರೆ ಇದ್ದವರು. ಕಾಂಗ್ರೆಸ್ ನಾಯಕರು ಬೇರೆ ಜಿಲ್ಲೆಯವರನ್ನು ಒಬ್ಬರನ್ನು ತೋರಿಸಲಿ. ಕಾಂಗ್ರೆಸ್‌ನವರಿಗೆ ಈಗ ರಾಷ್ಟ್ರಧ್ವಜ ನೆನಪಾಗಿದೆ. ಈಗ ಕೊಳಕು ರಾಜಕೀಯ ಮಾಡಲು ರಾಷ್ಟ್ರ ಧ್ವಜ ತಂದಿದ್ದಾರೆ ಎಂದು ಕಿಡಿಕಾರಿದರು.

ಬಿಜೆಪಿ ಮುಖಂಡ ಅಶೋಕ್ ಜಯರಾಂ ಮಾತನಾಡಿ, ನಮ್ಮ ಬಿಜೆಪಿ ನಿಯೋಗ ಕೆರಗೋಡು ಗ್ರಾಮಕ್ಕೆ ಭೇಟಿ ನೀಡಿ, ಗ್ರಾಮದಲ್ಲಿ ಗ್ರಾಪಂ ಸದಸ್ಯರು, ಗ್ರಾಮದ ಮುಖಂಡರ ಜೊತೆ ಚರ್ಚೆ ಮಾಡಿದ್ದೇವೆ. ಗೌರಿಶಂಕರ ಸೇವಾ ಟ್ರಸ್ಟ್ ಪದಾಧಿಕಾರಿಗಳ ಜೊತೆಯೂ ಚರ್ಚೆ ಮಾಡಿದ್ದು, ಇಲ್ಲಿನ ಸತ್ಯಾಸತ್ಯತೆ ತಿಳಿದಿದ್ದೇವೆ. ಪೊಲೀಸರು ಅಮಾನವೀಯವಾಗಿ ವರ್ತಿಸಿದ್ದಾರೆ. ಲಾಠಿಚಾರ್ಜ್‌ನಿಂದ ಗಾಯಗೊಂಡವರ ಆರೋಗ್ಯ ವಿಚಾರಿಸಿದ್ದೇವೆ. ಭಯದಲ್ಲಿರುವವರಿಗೆ ಧೈರ್ಯ ತುಂಬಿದ್ದು, ಹಿಂದಿನಿಂದ ಶಾಂತಿಯುತ ವಾತಾವರಣ ಈ ಗ್ರಾಮದಲ್ಲಿ ಇತ್ತು. ಶಾಂತಿ ಸಭೆಗೆ ಅವಕಾಶ ಕೊಡದೆ ಈ ರೀತಿಯ ವರ್ತನೆಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೆರಗೋಡು ಕಾಂಗ್ರೆಸ್ ಬೆಂಬಲಿತ ಗ್ರಾಪಂ ಸದಸ್ಯ ಶಿವಾನಂದ ಮಾತನಾಡಿ, ಧ್ವಜ ಹಾರಿಸುವ ಬಗ್ಗೆ ಪಂಚಾಯಿತಿಗೆ ಮೊದಲು ಮನವಿ ಬಂದಿತು. ಸರ್ವಾನುಮತದಿಂದ ಅದಕ್ಕೆ ಒಪ್ಪಿಗೆ ಕೊಟ್ಟೆವು. ಮೂರು ಸಭೆಯಲ್ಲಿ ಯಾವುದೇ ವಿರೋಧ ಬರಲಿಲ್ಲ. ಧ್ವಜ ಹಾರಿಸಿದ ನಂತರ ಇಓ ಬಂದು ಒಪ್ಪಿಗೆ ಕೊಟ್ಟಿರುವ ಬಗ್ಗೆ ಪ್ರಶ್ನಿಸಿದರು. ಪಂಚಾಯಿತಿಗೆ ಅಧಿಕಾರ ಇದೆ. ನಾವು ಸಭೆಯಲ್ಲಿ ಒಪ್ಪಿಗೆ ಕೊಟ್ಟಿದ್ದೇವೆ ಅಂತ ಹೇಳಿದೆವು. ಆ ದಿನವೇ ಪಂಚಾಯಿತಿ ವಜಾ ಮಾಡಬಹುದಿತ್ತು. ಆಗ ಮಾಡಲಿಲ್ಲ. ಶಾಂತಿ ಸಭೆಗಾಗಿ ಒಂದು ವಾರ ಕಾಲಾವಕಾಶ ಕೇಳಿದೆವು. ಅದಕ್ಕೆ ಅವಕಾಶ ಕೊಡಲಿಲ್ಲ. ರಜಾ ದಿನದಲ್ಲಿ ಬಂದು ಬಾವುಟ ತೆಗೆಯುವ ಅನಿವಾರ್ಯ ಇತ್ತೆ ಎಂದು ಪ್ರಶ್ನಿಸಿದರು.

ಕೆರಗೋಡು ಗ್ರಾಮಸ್ಥ ಆನಂದ್ ಮಾತನಾಡಿ, ನಮ್ಮ ಗ್ರಾ.ಪಂನಲ್ಲಿ ಜೆಡಿಎಸ್, ಕಾಂಗ್ರೆಸ್, ಬಿಜೆಪಿ ಎಲ್ಲಾ ಬೆಂಬಲಿತ ಸದಸ್ಯರು ಇದ್ದಾರೆ. ಎಲ್ಲಾ ಪಕ್ಷದವರು ಹನುಮ ಧ್ವಜಕ್ಕೆ ಬೆಂಬಲ ನೀಡಿದ್ದಾರೆ. ಇಲ್ಲಿ ಎಲ್ಲಾ ಸದಸ್ಯರು ಇದ್ದಾರೆ. ಈಗಲೂ ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಎಲ್ಲರೂ ಧ್ವಜ ಬೇಕು ಅಂತಾ ಹೇಳುತ್ತಿದ್ದಾರೆ. ಇವರು ರಾಜಕೀಯ ಮಾಡಿ ನಮ್ಮನ್ನು ಹೊಡೆಯುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಜಿಲ್ಲಾಡಳಿತ ನಾಳೆಯೇ ಶಾಂತಿ ಸಭೆ ಮಾಡಲಿ. ನಮ್ಮೂರಿನಲ್ಲಿ ಶಾಂತಿ ನೆಲಸುವಂತೆ ಮಾಡಬೇಕು. ಮೊದಲು ಈಗ ಆಗಿರುವ ಸಮಸ್ಯೆಯನ್ನು ಬಗೆಹರಿಸಿ, ಈ ಪ್ರಕರಣವನ್ನು ಸಿಬಿಐಗೆ ವಹಿಸಿ. ನಮಗೆ ನ್ಯಾಯ ಹಾಗೂ ಶಾಂತಿ ಕೊಡಿಸಬೇಕೆಂದು ಮನವಿ ಮಾಡಿದರು. ಸಭೆಯ ಆರಂಭಕ್ಕೂ ಮುನ್ನ ಹನುಮ ಧ್ವಜ ಇಳಿಸಿದಕ್ಕೆ ಗ್ರಾಮದ ಮನೆ ಮನೆಗಳ ಮೇಲೆ ಕೇಸರಿ ಧ್ವಜ ಹಾರಾಟವಾಯಿತು. ಮನೆಗಳ ಮೇಲೆ ಕೇಸರಿ ಧ್ವಜ ಹಾರಿಸಿದ ಗ್ರಾಮಸ್ಥರು, ಸ್ವಯಂ ಪ್ರೇರಿತರಾಗಿ ಮನೆಗಳ ಮೇಲೆ ಕೇಸರಿ ಬಾವುಟ ಕಟ್ಟಿದರು. ಆ ಮೂಲಕ ಕೇಸರಿ ಧ್ವಜ ಅಭಿಯಾನಕ್ಕೆ ನಾಂದಿ ಹಾಡಿದರು.

ಫೆ.7, ಮಂಡ್ಯ ಸೌಹಾರ್ದ ಬಂದ್‌ಗೆ ಕರೆ

ಮಂಡ್ಯ, ಜ.31– ಜಿಲ್ಲೆಯ ಸೌಹಾರ್ದ ಮತ್ತು ಶಾಂತಿಯನ್ನು ಕೆಲ ಶಕ್ತಿಗಳು ಕದಡುತ್ತಿವೆ ಎಂದು ಆರೋಪಿಸಿ ಫೆ.7ರಂದು ಮಂಡ್ಯ ನಗರ ಸೌಹಾರ್ದ ಬಂದ್‌ಗೆ ಪ್ರಗತಿಪರ ಸಂಘಟನೆಗಳು ಕರೆ ನೀಡಿವೆ.

ಈ ಕುರಿತು ಬುಧವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಸಮಾನ ಮನಸ್ಕರ ವೇದಿಕೆಯ ಸಂಚಾಲಕ ಲಕ್ಷ್ಮಣ್ ಚೀರನಹಳ್ಳಿ, ಕ್ಷುಲ್ಲಕ ವಿಚಾರಗಳನ್ನು ಮುಂದಿಟ್ಟುಕೊಂಡು ಮಂಡ್ಯ ಜಿಲ್ಲೆಯ ಸೌಹಾರ್ದ ಪರಂಪರೆಗೆ ಮಸಿ ಬಳಿದು, ಶಾಂತಿ ಮತ್ತು ನೆಮ್ಮದಿಯನ್ನು ಕೆಡಿಸುತ್ತಿರುವ ಶಕ್ತಿಗಳ ವಿರುದ್ಧ ಬಂದ್ ಮಾಡುವ ಮೂಲಕ ಮಂಡ್ಯ ಜಿಲ್ಲೆಯನ್ನು ಸೌಹಾರ್ದದ ನೆಲೆಯಾಗಿ ಉಳಿಸಿಕೊಳ್ಳುತ್ತೇವೆ ಎಂದರು.

ಈ ನಿಟ್ಟಿನಲ್ಲಿ ಫೆ.7ರಂದು ಮಂಡ್ಯ ನಗರವನ್ನು ಸ್ವಯಂ ಪ್ರೇರಿತ ಬಂದ್ ಮಾಡುವ ಮೂಲಕ ಬೆಂಬಲ ಸೂಚಿಸಬೇಕು. ಅಂದು ರಾಷ್ಟ್ರ ಧ್ವಜವನ್ನು ಹಿಡಿದು ಬೃಹತ್ ಮೆರವಣಿಗೆ ನಡೆಸಿ ಶಾಂತಿ ಮತ್ತು ಸೌಹಾರ್ದ ಕಾಪಾಡಿಕೊಳ್ಳಲು ಜನತೆಯಲ್ಲಿ ಮನವಿ ಮಾಡಿಕೊಳ್ಳಲಾಗುವುದು ಎಂದು ಹೇಳಿದರು.


ಜಿಲ್ಲೆಯ ಎಲ್ಲಾ ಜಾತ್ಯಾತೀತ, ಶಾಂತಿಪ್ರಿಯ, ಸೌಹಾರ್ದ ಬಯಸುವ ಜನತೆ ಬಂದ್ ಬೆಂಬಲಿಸಬೇಕೆಂದು ಮನವಿ ಮಾಡಿದ ಅವರು, ಕಾನೂನು ಮುರಿಯುವ ಮತ್ತು ಶಾಂತಿ ಕದಡುವ ಶಕ್ತಿಗಳ ಮೇಲೆ ಜಿಲ್ಲಾಡಳಿತ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು. ರಾಷ್ಟ್ರ ಧ್ವಜವನ್ನು ತಾಲಿಬಾನ್ ಧ್ವಜಕ್ಕೆ ಹೋಲಿಸಿದ ವಿಕೃತ ಮನಸ್ಸಿನ ವ್ಯಕ್ತಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಕುರುಬ ಸಮುದಾಯ ನಡೆಸುತ್ತಿರುವ ವಿದ್ಯಾರ್ಥಿ ನಿಲಯದ ಮೇಲೆ ದಾಳಿ ಮಾಡಿದ ಕೃತ್ಯ ಖಂಡನೀಯ. ಒಂದು ಸಮುದಾಯ ನಡೆಸುವ ಹಾಸ್ಟೆಲ್‌ಗೆ ಅಕ್ರಮವಾಗಿ ನುಗ್ಗಿ ದಾಂದಲೆ ನಡೆಸಿ ಫ್ಲೆಕ್ಸ್ ಹರಿದು ಹಾಕಿರುವುದು ಪುಂಡಾಟಿಕೆಯ ಮತ್ತು ವಿವಿಧ ಸಮುದಾಯಗಳ ನಡುವೆ ದ್ವೇಷ ಹುಟ್ಟಿಸುವ ದುರ್ವರ್ತನೆಯಾಗಿದೆ. ಇಂತಹ ಪುಂಡರ ಮೇಲೆ ಪೊಲೀಸ್ ಇಲಾಖೆ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಜಿಲ್ಲೆಯ ಹಿಂದೂಗಳಿಗೆ ವಿವೇಕಾನಂದ, ಒಕ್ಕಲಿಗರಿಗೆ ಕುವೆಂಪು, ಶಂಕರೇಗೌಡ, ವೀರಣ್ಣಗೌಡರ, ಮಾದೇಗೌಡರು ಮಾದರಿಯಾಗಬೇಕೆ ಹೊರತು ಭಾವನೆಗಳಿಗೆ ಬೆಂಕಿ ಹಚ್ಚಿ ಬೇಳೆ ಬೇಯಿಸಿಕೊಳ್ಳುವ ಕೀಚಕರಲ್ಲ, ಹಾಗಾಗಿ ನಾವೆಲ್ಲಾ ವಿವೇಕಾನಂದ, ಕುವೆಂಪು, ಶಂಕರೇಗೌಡ, ವೀರಣ್ಣಗೌಡ, ಮಾದೇಗೌಡರ ಹಾದಿಯಲ್ಲಿ ಕೈ, ಕೈ ಹಿಡಿದು ನಡೆಯೋಣ ಎಂದು ಜಿಲ್ಲೆಯ ಯುವಜನರಲ್ಲಿ ಮನವಿ ಮನವಿ ಮಾಡಿದರು.

ಗೋಷ್ಠಿಯಲ್ಲಿ ವಿವಿಧ ಸಂಘಟನೆಯ ಮುಖ್ಯಸ್ಥರಾದ ಸಮಾನಮನಸ್ಕ ವೇದಿಕೆಯ ಎಂ.ಬಿ.ನಾಗಣ್ಣಗೌಡ, ಬಿ.ಬೊಮ್ಮೇಗೌಡ, ಸಿ.ಕುಮಾರಿ, ಟಿ.ಎಲ್.ಕೃಷ್ಣೇಗೌಡ, ಟಿ.ಡಿ.ಬಸವರಾಜ್, ಸಿದ್ದರಾಜು, ಎಚ್.ಡಿ.ಜಯರಾಮ್, ದಸಂಸದ ಕೆಂಪಣ್ಣ ಸಾಗ್ಯಾ, ಎಂ.ವಿ.ಕೃಷ್ಣ, ನರಸಿಂಹಮೂರ್ತಿ ಇತರರಿದ್ದರು.

ಕೊಟ್ಟಿಗೆ ತೆರವು ವೇಳೆ ಅಧಿಕಾರಿಗಳು, ಗ್ರಾಮಸ್ಥರ ಮಾತಿನ ಚಕಮಕಿ


ದನದ ಕೊಟ್ಟಿಗೆ ತೆರವುಗೊಳಿಸಲು ಮುಂದಾದ ಅಧಿಕಾರಿಗಳೊಂದಿಗೆ ಮಾತಿನ ಚಕಮಕಿ.

ಪಾಂಡವಪುರ, ಜ.31– ತಾಲೂಕಿನ ವಡ್ಡರಹಳ್ಳಿ ಗ್ರಾಮದಲ್ಲಿ ಜೆಡಿಎಸ್ ಕಾರ್ಯಕರ್ತ ನೋರ್ವ ಮನೆ ಪಕ್ಕದ ಸರಕಾರಿ ಜಾಗದಲ್ಲಿ ನಿರ್ಮಾಣ ಮಾಡಿರುವ ಕೊಟ್ಟಿಗೆಯನ್ನು ತೆರವುಗೊಳಿಸುವಂತೆ ತಹಶೀಲ್ದಾರ್ ಆದೇಶ ಮಾಡಿದ ಹಿನ್ನೆಲೆಯಲ್ಲಿ ಅಧಿಕಾರಿಗಳು ಹಾಗೂ ಸಾರ್ವಜನಿಕರ ನಡುವೆ ಮಾತಿನ ಚಕಮಕಿ ನಡೆದಿದೆ.

ತಹಶೀಲ್ದಾರ್ ಆದೇಶದಂತೆ ಪೊಲೀಸರ ನೇತೃತ್ವದಲ್ಲಿ ದನದ ಕೊಟ್ಟಿಗೆ ತೆರವುಗೊಳಿಸಲು ಮುಂದಾದ ರವಿನ್ಯೂ ಇನ್ಸ್‌ಪೆಕ್ಟರ್, ಗ್ರಾಮಲೆಕ್ಕಿಗ ಹಾಗೂ ಸ್ಥಳೀಯರ ನಡುವೆ ಮಾತಿನ ಚಕಮಕಿ ನಡೆಯಿತು. ಇದು ರಾಜಕೀಯ ಉದ್ದೇಶದಿಂದ ಮಾಡುತ್ತಿರುವ ಕಾರ್ಯಾಚರಣೆ, ತಹಶೀಲ್ದಾರ್ ಅವರು ರಾಜಕೀಯ ಒತ್ತಡಕ್ಕೆ ಮಣಿದು ಕೊಟ್ಟಿಗೆ ತೆರವುಗೊಳಿಸುವಂತೆ ಆದೇಶಿಸಿದ್ದಾರೆ. ವಡ್ಡರಹಳ್ಳಿ ಗ್ರಾಮದಲ್ಲಿ ದೇವರಾಜು ಒಬ್ಬರೇ ಸರಕಾರಿ ಜಾಗದಲ್ಲಿ ಮನೆ ನಿರ್ಮಾಣ ಮಾಡಿಲ್ಲ. ಇನ್ನೂ ಹಲವಾರು ಮಂದಿ ಸರಕಾರಿ ಜಾಗದಲ್ಲಿ ಅಕ್ರಮವಾಗಿ ಮನೆ ನಿರ್ಮಿಸಿದ್ದಾರೆ, ಅವುಗಳನ್ನು ತೆರವುಗೊಳಿಸಿ ಬಳಿಕ ನಮ್ಮದನ್ನು ತೆರವುಗೊಳಿಸಿ, ಅಲ್ಲಿಯವರೆಗೆ ನಾವು ಮನೆ ತೆರವುಗೊಳಿಸಲು ಬಿಡುವುದಿಲ್ಲ ಎಂದು ಪಟ್ಟುಹಿಡಿದರು.

ಈ ವೇಳೆ ಅಧಿಕಾರಿಗಳು ಹಾಗೂ ಸಾರ್ವಜನಿಕರ ನಡುವೆ ಮಾತಿನ ಚಕಮಕಿ ನಡೆಯಿತು. ಮಧ್ಯ ಪ್ರವೇಶಿಸಿದ ಪೊಲೀಸರು ಸಮಾಧಾನಪಡಿಸಿದರು. ತೆರವುಗೊಳಿಸಲು ಒಂದು ತಿಂಗಳು ಕಾಲಾವಕಾಶ ನೀಡಿ, ಅಧಿಕಾರಿಗಳು ಸ್ಥಳದಿಂದ ತೆರಳಿದರು.

ರಾಜಕೀಯ ಒತ್ತಡದಿಂದ ಆದೇಶ: ವಡ್ಡರಹಳ್ಳಿ ಗ್ರಾಮದ ಜೆಡಿಎಸ್ ಕಾರ್ಯಕರ್ತ ದೇವರಾಜು ಎಂಬುವರು ತಮ್ಮ ಮನೆಪಕ್ಕದ ಸರ್ಕಾರಿ ಜಾಗದಲ್ಲಿ ದನದ ಕೊಟ್ಟಿಗೆ ನಿರ್ಮಾಣ ಮಾಡಿದ್ದಾರೆ. ರಾಜಕೀಯ ದುರುದ್ದೇಶದಿಂದ ದನದಕೊಟ್ಟಿಗೆ ತೆರವುಗೊಳಿಸುವಂತೆ ಕೆಲವರು ತಹಶೀಲ್ದಾರ್‌ಗೆ ದೂರು ನೀಡಿದ್ದಾರೆ. ಇದಕ್ಕೆ ಪ್ರತಿಯಾಗಿ ದೇವರಾಜು ಅವರು ವಡ್ಡರಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಮನೆ ನಿರ್ಮಿಸಿದ್ದಾರೆ, ಅವುಗಳ ಬಗ್ಗೆಯೂ ಕ್ರಮಕೈಗೊಳ್ಳುವಂತೆ ತಹಶೀಲ್ದಾರ್ ಶ್ರೇಯಸ್ ಅವರಿಗೆ ಪ್ರತಿ ದೂರು ನೀಡಿದ್ದಾರೆ. ಆದರೆ, ತಹಶೀಲ್ದಾರ್ ಅವರು ಎಲ್ಲವನ್ನು ಬಿಟ್ಟು ಕೇವಲ ಜೆಡಿಎಸ್ ಕಾರ್ಯಕರ್ತ ದೇವರಾಜು ಎಂಬುವರು ನಿರ್ಮಿಸಿರುವ ದನದಕೊಟ್ಟಿಗೆ ತೆರವುಗೊಳಿಸುವಂತೆ ಆದೇಶಿಸಿದ್ದಾರೆ ಎಂದು ಆರೋಪಿಸಿದರು.

ತಾಲೂಕು ದಂಡಾಧಿಕಾರಿಗಳು ಎಲ್ಲರಿಗೂ ಸಮಾನವಾದ ನ್ಯಾಯ ದೊರಕಿಸಿಕೊಡಬೇಕು, ಅದನ್ನು ಬಿಟ್ಟು ನಾನೊಬ್ಬ ಜೆಡಿಎಸ್ ಪಕ್ಷದ ಕಾರ್ಯಕರ್ತ ಎಂಬ ಒಂದೇ ಉದ್ದೇಶಕ್ಕಾಗಿ ರಾಜಕೀಯ ಒತ್ತಡಕ್ಕೆ ಮಣಿದು ತಹಶೀಲ್ದಾರ್ ಅವರು ನನ್ನೊಂದು ಮನೆ ತೆರವುಗೊಳಿಸಲು ಆದೇಶ ನೀಡಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಠಿಣ ಪರಿಶ್ರಮದಿಂದ ಗುರಿ ಸಾಧನೆ ಮಾಡಬೇಕು


ಕಾರ್ಯಕ್ರಮ ಉದ್ಘಾಟಿಸುತ್ತಿರುವ ಗಣ್ಯರು.

ಕೆ.ಆರ್.ಪೇಟೆ, ಜ.31– ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ವ್ಯಾಸಂಗ ಮಾಡಿ ಗುರಿ ಸಾಧನೆ ಮಾಡಬೇಕು. ಉತ್ತಮ ಗುಣ ಮತ್ತು ನಡವಳಿಕೆಗಳನ್ನು ಮೈಗೂಡಿಸಿಕೊಂಡು ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ಒಳ್ಳೆಯ ಹೆಸರು ಗಳಿಸಬೇಕು ಎಂದು ಶಾಸಕ ಹೆಚ್.ಟಿ.ಮಂಜು ಹೇಳಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕ್ರೀಡೆ, ಸಾಂಸ್ಕೃತಿಕ ಹಾಗೂ ರಾಷ್ಟ್ರೀಯ ಸೇವಾ ಯೋಜನಾ ಚಟುವಟಿಕೆಗಳ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಚೆಲುವಯ್ಯ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲ ಕೆ.ಮೋಹನ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ತೋಟಪ್ಪ ಶೆಟ್ಟಿ, ಜಿಪಂ ಮಾಜಿ ಸದಸ್ಯ ಡಾ. ಎಸ್. ಕೃಷ್ಣಮೂರ್ತಿ, ಶಾಲೆಯ ಭೂದಾನಿಗಳಾದ ವೆಂಕಟನಾರಾಯಣಶೆಟ್ಟಿ, ಉಪಪ್ರಾಂಶುಪಾಲ ರವಿ, ಉಪನ್ಯಾಸಕರಾದ ಚಂದ್ರಶೇಖರ್, ಆರ್.ಬಿ.ಪದ್ಮನಾಭ ಇತರರು ಭಾಗವಹಿಸಿದ್ದರು.

ನಾಗಮ್ಮ ನಿಧನ



ಪಾಂಡವಪುರ, ಜ.31– ಪಟ್ಟಣದ ಚಂದ್ರೆ ಬಡಾವಣೆಯ ಹನುಮಂತನಗರದ ನಿವಾಸಿ ನಾಗಮ್ಮ(80) ವಯೋಸಹಜ ಕಾಯಿಲೆಯಿಂದ ಮಂಗಳವಾರ ರಾತ್ರಿ ನಿಧನರಾದರು. ಮೃತರು ನಾಲ್ವರು ಪುತ್ರರು ಸೇರಿದಂತೆ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬೀರಶೆಟ್ಟಹಳ್ಳಿ ಸಾರ್ವಜನಿಕ ಸ್ಮಶಾನದಲ್ಲಿ ಬುಧವಾರ ಮಧ್ಯಾಹ್ನ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಜನ, ಜಾನುವಾರು ರಕ್ಷಣೆ ಮಾಡಿ

ಜಿಲ್ಲಾಧಿಕಾರಿಗಳಿಗೆ ಜಾತ್ಯತೀತತೆ ಬಗ್ಗೆ ಹೊಣೆಗಾರಿಕೆ ಇರಬೇಕು. ಸಂವಿಧಾನದ ಬಗ್ಗೆ ಗೌರವ ಇರಬೇಕು. ಇದರ ವಿರುದ್ಧ ನಡೆದುಕೊಂಡರೆ ಅಂತಹ ಅಧಿಕಾರಿಗಳಿಗೆ ಇಲ್ಲಿ ಮುಂದುವರೆಯುವ ಅಧಿಕಾರ ಮತ್ತು ಹಕ್ಕೂ ಇಲ್ಲ ಎಂದು ಎಚ್ಚರಿಸಿದರು.

ನೀವು ಜಿಲ್ಲಾ ಉಸ್ತುವಾರಿ ವಹಿಸಿಕೊಂಡ ನಂತರ ಆಡಳಿತಾತ್ಮಕವಾಗಿ ಏನು ಬದಲಾವಣೆ ಆಗಿದೆ ಎಂದು ಪ್ರಶ್ನಿಸಿದ ಮುಖ್ಯಮಂತ್ರಿ, ನಿಮ್ಮಿಂದ ಯಾವ ಸಲಹೆ–ಸೂಚನೆ ಹೋಗಿದೆ ಎಂಬುದನ್ನು ಸಭೆಯ ಗಮನಕ್ಕೆ ತನ್ನಿ ಎಂದರು.

ಕೃಷಿ, ಕಂದಾಯ, ಪೊಲೀಸ್ ಠಾಣೆಗಳಿಗೆ ಜನ ಬರುತ್ತಾರೆ. ನೀವು ಇಂತಹ ಎಷ್ಟು ಕಚೇರಿಗಳಿಗೆ ಭೇಟಿ ನೀಡಿದ್ದೀರಿ ಎಂದು ಪ್ರಶ್ನಿಸಿದರು. ಜನಸ್ಪಂದನಾದಲ್ಲಿ ಬಂದ ಸಮಸ್ಯೆಗಳಿಗೆ ಸಮರೋಪಾದಿಯಲ್ಲಿ ಪರಿಹಾರ ಒದಗಿಸಿಕೊಡಿ. ವಿಧಾನಸೌಧದ ಮುಂದೆ ನಡೆಯುವ ಸ್ಪಂದನಾ ಕಾರ್ಯಕ್ರಮಕ್ಕೆ ಪ್ರತಿ ಇಲಾಖೆಗೂ ಪ್ರತ್ಯೇಕ ಟೆಂಟ್ ತೆರೆಯಲಾಗುವುದು. ನಿಮ್ಮ ಇಲಾಖಾ ಟೆಂಟ್‌ನಲ್ಲೇ ಹಾಜರಿದ್ದು ಸಮಸ್ಯೆಗಳನ್ನು ಫೆಬ್ರವರಿ 8 ರಂದು ಬಗೆಹರಿಸಿ ಎಂದು ಆದೇಶಿಸಿದರು. ಎಸಿ, ಡಿಸಿ, ತಹಸೀಲ್ದಾರ್‌ಗಳು ಮಾಡಬೇಕಾದ್ದನ್ನು ನಾವು ಮಾಡಬೇಕಿದೆ. ನೀವು ಅವರ ಮೇಲೆ ಬಿಗಿ ಹಿಡಿತ ಇಟ್ಟರೆ, ಜನರು ವಿಧಾನಸೌಧದವರೆಗೂ ಅರ್ಜಿ ಹಿಡಿದು ಬರುತ್ತಿರಲಿಲ್ಲ ಎಂದರು.

ದೇಶದಲ್ಲಿ ಈಗ ಕಾರ್ಯಗತವಾಗಿದೆ

ರೈತರು ಮತ್ತು ಬಡವರು ಎಂಬ ನಾಲ್ಕು ಬಲವಾದ ಸ್ತಂಭಗಳ ಮೇಲೆ ನಿಂತಿದೆ ಎಂದು ನನ್ನ ಸರ್ಕಾರ ನಂಬುತ್ತದೆ ಎಂದು ಹೇಳಿದರು.

ರಾಷ್ಟ್ರೀಯ ಹಿತಾಸಕ್ತಿ: ಕಳೆದ 10 ವರ್ಷಗಳಲ್ಲಿ ದಶಕಗಳಿಂದ ದೇಶದ ಜನರು ಕಾಯುತ್ತಿದ್ದ ರಾಷ್ಟ್ರೀಯ ಹಿತಾಸಕ್ತಿಯ ಹಲವಾರು ಕಾರ್ಯಕ್ರಮಗಳನ್ನು ಭಾರತವು ಪೂರ್ಣಗೊಳಿಸಿದೆ. ರಾಮ ಮಂದಿರ ನಿರ್ಮಾಣಕ್ಕೆ ಶತಮಾನಗಳಿಂದಲೂ ಕಾಯಲಾಗಿತ್ತು. ಇಂದು ಅದೂ ಪೂರೈಸಿದೆ. ಜಮ್ಮು–ಕಾಶ್ಮೀರದಿಂದ ಆರ್ಟಿಕಲ್ 370 ರದ್ದತಿ ಈಗ ಇತಿಹಾಸವಾಗಿದೆ. ಮೇಕ್ ಇನ್ ಇಂಡಿಯಾ ಮತ್ತು ಆತ್ಮ ನಿರ್ಭರ ಭಾರತ್ ನಮ್ಮ ಶಕ್ತಿಯಾಗಿವೆ. ರಕ್ಷಣಾ ಕ್ಷೇತ್ರದಲ್ಲಿನ ಉತ್ಪಾದನೆ ಲಕ್ಷ ಕೋಟಿ ರೂ.ಗಳ ಗಡಿ ದಾಟಿದೆ ಎಂದರು.

ಕಳೆದ ವರ್ಷ ಸಾಧನೆ ವರ್ಷ: ಕಳೆದ ವರ್ಷ ಭಾರತಕ್ಕೆ ಸಾಧನೆಗಳೇ ತುಂಬಿದ ವರ್ಷವಾಗಿತ್ತು. ದೇಶ ಅನೇಕ ಯಶಸ್ಸುಗಳನ್ನು ಕಂಡಿದೆ. ಭಾರತವು ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯ ಶಕ್ತಿಯಾಯಿತು. ಚಂದ್ರನ ದಕ್ಷಿಣ ಧ್ರುವವನ್ನು ತಲುಪಿದ ಮೊದಲ ರಾಷ್ಟ್ರವಾಯಿತು. ಭಾರತ ಆಯೋಜಿಸಿದ್ದ ಜಿ20 ಶೃಂಗಸಭೆಯು ವಿಶ್ವದಲ್ಲಿ ಭಾರತದ ಪಾತ್ರವನ್ನು ಬಲಪಡಿಸಿದೆ. ಏಷ್ಯನ್ ಗೇಮ್ಸ್‌ನಲ್ಲಿ ಭಾರತ ನೂರಕ್ಕೂ ಹೆಚ್ಚು ಪದಕಗಳನ್ನು ಗೆದ್ದಿದೆ. ನಮ್ಮ ಗಡಿಯಲ್ಲಿ ಸರ್ಕಾರವು ಆಧುನಿಕ ಮೂಲ ಸೌಕರ್ಯಗಳನ್ನು ನಿರ್ಮಿಸುತ್ತಿದೆ. ನಮ್ಮ ಪಡೆಗಳು ಭಯೋತ್ಪಾದನೆಗೆ ತಕ್ಕ ಪ್ರತ್ಯುತ್ತರ ನೀಡುತ್ತಿವೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಭದ್ರತೆ ಮತ್ತು ಸುರಕ್ಷತೆಯ ವಾತಾವರಣವಿದೆ. ನಕ್ಸಲ್ ಹಿಂಸಾಚಾರ ಭಾರೀ ಪ್ರಮಾಣದಲ್ಲಿ ಕಡಿಮೆಯಾಗಿದೆ ಎಂದು ಅವರು ಹೇಳಿದರು. ದೇಶದ ಹಣದುಬ್ಬರ ದರ ಈ ಹಿಂದೆ ಎರಡಂಕಿಯಲ್ಲಿತ್ತು. ಆದರೆ ಈಗ ಶೇ.4ರೊಳಗೆ ಇದೆ ಎಂದ ರಾಷ್ಟ್ರಪತಿಗಳು, ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರಕ್ಕಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಗೆ ಅಭಿನಂದನೆ ಎಂದು ಹೇಳುವ ಮೂಲಕ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು. ರಾಷ್ಟ್ರಪತಿಗಳ ಭಾಷಣದ ವೇಳೆ ಮುಂದಿನ ಸಾಲಿನಲ್ಲಿ ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಕೇಂದ್ರ ಸಚಿವರಾದ ಪಿಯೂಷ್ ಗೋಯಲ್, ನಿತಿನ್ ಗಡ್ಕರಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ ಇನ್ನಿತರರು ಆಸೀನರಾಗಿದ್ದರು.

ಹೇಮಂತ್ ಸೋರೇನ್ ಬಂಧನ

ಇತ್ತ ಮುಖ್ಯಮಂತ್ರಿಗಳ ಬಂಧನವಾಗುತ್ತಿದ್ದಂತೆಯೇ ಜಾರ್ಖಂಡ್ ಮುಕ್ತಿ ಮೋರ್ಚಾ ಪಕ್ಷದ ಶಾಸಕರು ಹೇಮಂತ್ ಸೋರೇನ್ ಸಂಪುಟದಲ್ಲಿ ಸಾರಿಗೆ ಸಚಿವರಾಗಿದ್ದ ಚಂಪೈ ಸೋರೇನ್ ಅವರನ್ನು ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆ ಮಾಡಿದ್ದು, ಮುಂದಿನ ಮುಖ್ಯಮಂತ್ರಿಯಾಗಿ ಅವರು ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ಪಕ್ಷದ ಮುಖಂಡರು ತಿಳಿಸಿದ್ದಾರೆ. ಭೂ ಹಗರಣ ಮತ್ತು ಅಕ್ರಮ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಜ.20ರಂದು ಇಡಿ ಅಧಿಕಾರಿಗಳು ಸೋರೇನ್ ಅವರನ್ನು ಪ್ರಶ್ನಿಸಿದ್ದರು. ಮುಂದಿನ ವಿಚಾರಣೆಯನ್ನು ಜ.29 ಅಥವಾ 31 ಎಂದು ಇಡಿ ಅಧಿಕಾರಿಗಳು ತಿಳಿಸಿದಾಗ ಸೋರೇನ್, ಜ.31 ಅನ್ನು ಆಯ್ಕೆ ಮಾಡಿಕೊಂಡಿದ್ದರು. ಮುಖ್ಯಮಂತ್ರಿ ಹೇಮಂತ್ ಸೋರೇನ್ ಜ.31ರಂದು ಮಧ್ಯಾಹ್ನ 1 ಗಂಟೆಗೆ ರಾಂಚಿಯಲ್ಲಿರುವ ಅವರ ನಿವಾಸದಲ್ಲಿ ಲಭ್ಯವಿರುತ್ತಾರೆ ಎಂದು ಮುಖ್ಯಮಂತ್ರಿಗಳ ಕಚೇರಿ ಅಧಿಕಾರಿಗಳು ಇಡಿ ಅಧಿಕಾರಿಗಳಿಗೆ ಅಧಿಕೃತವಾಗಿ ತಿಳಿಸಿದ್ದರು. ಈ ಹಿನ್ನೆಲೆಯಲ್ಲಿ ಇಂದು ಮಧ್ಯಾಹ್ನ ರಾಂಚಿಯಲ್ಲಿರುವ ಹೇಮಂತ್ ಸೋರೇನ್ ನಿವಾಸಕ್ಕೆ ಆಗಮಿಸಿದ ಇಡಿ ಅಧಿಕಾರಿಗಳು, ಸುಮಾರು 7 ಗಂಟೆಗಳ ಕಾಲ ಅವರನ್ನು ವಿಚಾರಣೆಗೊಳಪಡಿಸಿದ ನಂತರ ಬಂಧಿಸಿದ್ದಾರೆ. ಇದಕ್ಕೂ ಮುನ್ನ ಜ.29ರಂದು ಇಡಿ ಅಧಿಕಾರಿಗಳು ದೆಹಲಿಯಲ್ಲಿರುವ ಸೋರೇನ್ ಅವರ ನಿವಾಸದ ಮೇಲೆ ದಾಳಿ ನಡೆಸಿ, ಐಷಾರಾಮಿ ಕಾರು ಮತ್ತು 36 ಲಕ್ಷ ರೂ. ನಗದು ವಶಪಡಿಸಿಕೊಂಡಿದ್ದರು.

ಸರ್ಕಾರ ಸರ್ಕಸ್!

ಡಿ.ಕೆ.ಶಿವಕುಮಾರ್ ಮನವಿ ಮಾಡಿದ್ದಾರೆ. ನಾಡಿನ ಒಳಿತು ಮತ್ತು ಕನ್ನಡ ಭಾಷೆಗೆ ಗೌರವ ಮತ್ತು ಅಸ್ಮಿತೆಗಾಗಿ ರಾಜ್ಯ ಸರ್ಕಾರ ಸುಗ್ರೀವಾಜ್ಞೆ ತಂದಿದೆ, ಇಂತಹ ಸುಗ್ರೀವಾಜ್ಞೆಗೆ ರಾಜ್ಯಪಾಲರು ಸಮ್ಮತಿಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕನ್ನಡ ಭಾಷೆಯ ಭಾವನಾತ್ಮಕ ವಿಚಾರ, ನೀವು ಕರ್ನಾಟಕದಲ್ಲಿದ್ದೀರಿ, ನಮ್ಮ ರಾಜ್ಯಪಾಲರಾಗಿದ್ದೀರಿ, ಸರ್ಕಾರದ ಇಂತಹ ನೀತಿಯಲ್ಲಿ ತಪ್ಪು ಕಂಡುಹಿಡಿಯಬಾರದು. ನಾಗರಿಕರು, ಇತರೆ ಪಕ್ಷಗಳವರು ಈ ವಿಚಾರದಲ್ಲಿ ತಪ್ಪಿದೆ ಎಂದು ಹೇಳಿಲ್ಲ.


ಇದರಲ್ಲಿ ತಪ್ಪುಗಳಿವೆ ಎಂದು ಯಾರಾದರೂ ಆಕ್ಷೇಪ ಸಲ್ಲಿಸಿದ್ದಾರೆಯೇ, ಆದ ಕಾರಣ ಮತ್ತೊಮ್ಮೆ ಆದೇಶ ಪರಿಶೀಲಿಸುವಂತೆ ರಾಜ್ಯಪಾಲರಲ್ಲಿ ಮನವಿ ಮಾಡುತ್ತೇನೆ ಎಂದರು. ಉಪಮುಖ್ಯಮಂತ್ರಿ ಅವರ ಮಾಧ್ಯಮ ಹೇಳಿಕೆ ಬೆನ್ನಲ್ಲೇ ಈ ಸಂಬಂಧ ರಾಜಭವನ ಸ್ಪಷ್ಟನೆ ನೀಡಿ, ಕನ್ನಡ ನಾಮಫಲಕ ಕಡ್ಡಾಯ ಸುಗ್ರೀವಾಜ್ಞೆ ತಿರಸ್ಕರಿಸಿಲ್ಲ, ಹಿಂದಿರುಗಿಸಿದ್ದೇವೆ ಎಂದಿದೆ. ಸರ್ಕಾರ ವಿಧಾನಮಂಡಲದ ಅಧಿವೇಶನ ಕರೆದಿರುವ ಹಿನ್ನೆಲೆಯಲ್ಲಿ ಅಲ್ಲಿಯೇ ಕಾಯಿದೆ ಮಂಡಿಸಿ, ಒಪ್ಪಿಗೆ ಪಡೆದುಕೊಳ್ಳಿ ಎಂಬುದಾಗಿ ಮಾತ್ರ ಸಲಹೆ ನೀಡಿ ಹಿಂತಿರುಗಿಸಿದ್ದೇವೆ ಎಂದಿದೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ನಾಮಫಲಕಗಳಲ್ಲಿ ಶೇ.60ರಷ್ಟು ಕನ್ನಡ ಬಳಕೆಗೆ ಹೊರಡಿಸಿದ್ದ ಸುಗ್ರೀವಾಜ್ಞೆಗೆ ಅಂಕಿತ ಹಾಕಲು ರಾಜಭವನಕ್ಕೆ ಕಳುಹಿಸಲಾಗಿತ್ತು. ರಾಜ್ಯಪಾಲರು ಅಂಕಿತ ಹಾಕುವ ಮುನ್ನವೇ ಅಧಿವೇಶನ ಕರೆದಿರುವ ಹಿನ್ನೆಲೆಯಲ್ಲಿ ಕಡತವನ್ನು ಸರ್ಕಾರಕ್ಕೆ ಹಿಂತಿರುಗಿಸಿ, ಅಧಿವೇಶನದಲ್ಲೇ ಮಂಡಿಸಿ ಎಂದು ತಿಳಿಸಿದ್ದಾರೆ ಎಂದರು.

ಹುಣಸೂರು ಅಭಿವೃದ್ಧಿಗೆ ಈಗಾಗಲೇ ರೂಪುರೇಷೆ ಸಿದ್ಧಪಡಿಸಿದ್ದೇನೆ

ಹುಟ್ಟುಹಬ್ಬದ ಸಂಭ್ರಮದಲ್ಲಿ ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡರ ಕಳಕಳಿ


ಸಾರ್ವಜನಿಕ ಆಸ್ಪತ್ರೆಯ ರೋಗಿಗಳಿಗೆ ಹಣ್ಣು–ಹಂಪಲು ವಿತರಿಸುತ್ತಿರುವುದು.



ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡರಿಗೆ X (ಟ್ವಿಟ್ಟರ್) ಮೂಲಕ ಹುಟ್ಟುಹಬ್ಬದ ಶುಭಾಶಯ ಕೋರಿದ್ದಾರೆ.

> **ಮತ್ತೆ ಮೋದಿ ಪ್ರಧಾನಿಯಾಗಬೇಕು, ಹೆಚ್‌ಡಿಕೆ ಸಿಎಂ ಆಗಬೇಕು...**
>
> ಬಿಜೆಪಿ–ಜೆಡಿಎಸ್ ಮೈತ್ರಿಯನ್ನು ನಮ್ಮ ಕಾರ್ಯಕರ್ತರು ಮನಪೂರ್ವಕವಾಗಿ ಸ್ವಾಗತಿಸಿದ್ದಾರೆ. ಎಲ್ಲರೂ ವಿಶ್ವಾಸದಿಂದ ಕೆಲಸ ಮಾಡುತ್ತೇವೆ. ಆ ಮೂಲಕ ನರೇಂದ್ರ ಮೋದಿಯವರು ಮತ್ತೊಮ್ಮೆ ಪ್ರಧಾನಿಯಾಗಲು ಶ್ರಮಿಸುತ್ತೇವೆ. ಜೊತೆಗೆ ಹೆಚ್.ಡಿ.ಕುಮಾರಸ್ವಾಮಿ ಅವರೂ ಮೊತ್ತೊಮೆ ಮುಖ್ಯಮಂತ್ರಿ ಆಗಬೇಕೆಂಬ ವಿಚಾರ ಮುಂದಿಟ್ಟುಕೊಂಡು ನಾವು ಕೆಲಸ ಮಾಡುತ್ತೇವೆ.
>
> –ಜಿ.ಡಿ.ಹರೀಶ್‌ಗೌಡ, ಶಾಸಕರು, ಹುಣಸೂರು.

ಮೈಸೂರು,ಜ.31(ಪಿಎಂ)– ಹುಣಸೂರು ತಾಲೂಕು ಅಭಿವೃದ್ಧಿಗೆ ಈಗಾಗಲೇ ರೂಪುರೇಷೆ ಸಿದ್ಧಪಡಿಸಿದ್ದೇನೆ ಎಂದು ರಾಜ್ಯ ಅಪೆಕ್ಸ್ ಬ್ಯಾಂಕ್ ಮಾಜಿ ಉಪಾಧ್ಯಕ್ಷರೂ ಆದ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ (ಎಂಸಿಡಿಸಿಸಿ) ಬ್ಯಾಂಕ್ ನಿಕಟ ಪೂರ್ವ ಅಧ್ಯಕ್ಷ, ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಹೇಳಿದರು.

ಹುಣಸೂರಿನಲ್ಲಿ ಬುಧವಾರ ಅಭಿಮಾನಿಗಳು ಹಾಗೂ ಜೆಡಿಎಸ್ ಕಾರ್ಯಕರ್ತರು ಹಮ್ಮಿಕೊಂಡಿದ್ದ ತಮ್ಮ ಹುಟ್ಟುಹಬ್ಬ ಸಮಾರಂಭದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸಹಕಾರ ಸಂಘದಿಂದ ನಾನು ಮೊದಲು ಆಯ್ಕೆಯಾಗಿದ್ದು. ಸಹಕಾರ ಕ್ಷೇತ್ರದ ಜೊತೆಗೆ ಇಂದು ಶಾಸಕನಾಗಿ ಸೇವೆ ಸಲ್ಲಿಸುತ್ತಿದ್ದೇವೆ. ಇಚ್ಛೆಯಿಂದ ಎರಡೂ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದರಿಂದ ನನಗೆ ಯಾವುದೇ ಒತ್ತಡವಿಲ್ಲ ಎಂದು ತಿಳಿಸಿದರು.

ಹುಣಸೂರು ತಾಲೂಕು ಅಭಿವೃದ್ಧಿಯಲ್ಲಿ ಹಿಂದೆ ಉಳಿದಿದ್ದು, ಹುಣಸೂರು ಅಭಿವೃದ್ಧಿಗೆ ಏನಾಗಬೇಕೆಂಬ ಬಗ್ಗೆ ಈಗಾಗಲೇ ರೂಪುರೇಷೆ ಸಿದ್ಧಪಡಿಸಿದ್ದೇನೆ. ಅದರಂತೆ ಇಂದು ಸರ್ಕಾರದ ಮಟ್ಟದಲ್ಲಿ ಅನುದಾನ ತಂದು ಕೆಲಸ ಮಾಡಬೇಕಾದ ಅನಿವಾರ್ಯತೆ ಇದೆ. ಜೊತೆಗೆ ಸಹಕಾರ ಕ್ಷೇತ್ರದಲ್ಲಿ ಸಾಕಷ್ಟು ಸೇವೆ ಸಲ್ಲಿಸಿದ್ದೇನೆ. ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷನಾಗಿ ಇಂದು ಎಲ್ಲಾ ರೈತರ ಮನೆ ಬಾಗಿಲಿಗೆ ಬ್ಯಾಂಕ್‌ನ ಸೇವೆಗಳನ್ನು ತಲುಪಿಸಿದ್ದೇನೆ. ಸಹಕಾರ ಸಂಘಗಳ ಅಭಿವೃದ್ಧಿಗೂ ಕೆಲಸ ಮಾಡುತ್ತಿದ್ದೇನೆ ಎಂದರು.

ದುರುದ್ದೇಶದಿಂದ ಚುನಾವಣೆ ಮುಂದೂಡಿಕೆ: ಎಂಸಿಡಿಸಿಸಿ ಬ್ಯಾಂಕ್ ಚುನಾವಣೆ ವಿಳಂಬ ಸಂಬಂಧ ಪ್ರತಿಕ್ರಿಯಿಸಿ, ರಾಜಕೀಯ ದುರುದ್ದೇಶದಿಂದ ಚುನಾವಣೆ ಮುಂದೂಡುತ್ತಿದ್ದಾರೆ. ಬಹುಶಃ ಇಂದು ಸಹಕಾರಿಗಳೆಲ್ಲರಿಗೂ ಈ ವಿಚಾರ ಗೊತ್ತಿದೆ. ಚುನಾವಣೆ ನಡೆದಂತಹ ಸಂದರ್ಭದಲ್ಲಿ ಅವರು ಸೂಕ್ತ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದು ತೀಕ್ಷ್ಣವಾಗಿ ಉತ್ತರಿಸಿದರು.

ಸಹಕಾರ ಕ್ಷೇತ್ರದಲ್ಲಿ ಜಿ.ಟಿ.ದೇವೇಗೌಡರ ಕುಟುಂಬದ ಪ್ರಭಾವ ಕುಗ್ಗಿಸುವ ಪ್ರಯತ್ನ ನಡೆಯುತ್ತಿದ್ದೆಯೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ನಾನು ಕಳೆದ ಐದು ವರ್ಷಗಳಿಂದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷನಾಗಿ ಸಾಕಷ್ಟು ಸಾಧನೆ ಮಾಡಿದ್ದೇನೆ. 350 ಕೋಟಿ ರೂ. ಇದ್ದ ಠೇವಣಿಯನ್ನು 950 ಕೋಟಿ ರೂ. ವಿಸ್ತರಿಸಲಾಗಿದೆ. 600 ಕೋಟಿ ರೂ. ಮೊತ್ತದ ಸಾಲ ಕೊಡಲಾಗುತ್ತಿತ್ತು. ಅದನ್ನು ಇಂದು 1,600 ಕೋಟಿ ರೂ.ಗೆ ಹೆಚ್ಚಿಸಲಾಗಿದೆ. ಇದರಿಂದ ರೈತರಿಗೆ ಅನುಕೂಲವಾಗಿದೆ. 45 ಸಾವಿರ ರೈತ ಕುಟುಂಬಕ್ಕೆ ಕೊಡುತ್ತಿದ್ದ ಸಾಲದ ಮೊತ್ತ ಇಂದು ಲಕ್ಷ ರೈತರ ಕುಟುಂಬಕ್ಕೆ ವಿಸ್ತರಿಸಿದ್ದೇವೆ ಎಂದು ಹೇಳಿದರು.

ಕಟ್ಟಡ ನಿರ್ಮಾಣಕ್ಕೆ ಅನುದಾನ ಸಹ ಇರಲಿಲ್ಲ. ನಾಲ್ಕೈದು ಕೋಟಿ ಅನುದಾನ ಕೊಡಿಸಿದ್ದೇನೆ. ಈ ಎಲ್ಲಾ ಬೆಳವಣಿಗೆ ನೋಡಿ ಬಹುಶಃ ಅವರಿಗೆ ಸಹಿಸಲಾಗಲಿಲ್ಲವೆಂದು ಕಾಣುತ್ತದೆ. ಆದ್ದರಿಂದಲೇ ಎಂಸಿಡಿಡಿಸಿ ಬ್ಯಾಂಕ್ ಚುನಾವಣೆ ಮುಂದೂಡುತ್ತಿದ್ದಾರೆ ಎಂದು ಕಿಡಿಕಾರಿದ ಅವರು, ಚುನಾವಣೆ ನಡೆಸುವುದು ಯಾರ ಜವಾಬ್ದಾರಿ ಎಂಬುದನ್ನು ಮನಗಾಣಬೇಕು. 8 ವಾರದೊಳಗೆ ಚುನಾವಣೆ ನಡೆಸಬೇಕೆಂಬ ಈಗಾಗಲೇ ಕೋರ್ಟ್‌ನಲ್ಲಿ ಆದೇಶವಾಗಿದೆ. ಆದರೆ ಅದನ್ನು ಪಾಲನೆ ಮಾಡುತ್ತಿಲ್ಲ ಎಂದು ದೂರಿದರು.

ಹುಣಸೂರು ತಾಲೂಕಿನ ನಮ್ಮ ಎಲ್ಲಾ ಸ್ನೇಹಿತರು, ಅಭಿಮಾನಿಗಳು, ಪಕ್ಷದ ಮುಖಂಡರು, ಕಾರ್ಯಕರ್ತರು ಎಲ್ಲಾ ಸೇರಿ ಸರಳವಾಗಿ ಈ ಬಾರಿ ನನ್ನ ಹುಟ್ಟುಹಬ್ಬವನ್ನು ಆಚರಿಸಲು ತೀರ್ಮಾನಿಸಿದ್ದೇವು. ಅದರಂತೆ ಆಚರಿಸುತ್ತಿದ್ದು, ಡಿ.ದೇವರಾಜ ಅರಸು ಪ್ರತಿಮೆಗೆ ಮಾಲಾರ್ಪಣೆ ಮಾಡಿದ್ದೇನೆ ಎಂದರು.

ಹುಣಸೂರು ನಗರಸಭೆಯ ವಾತಾವರಣ ಬದಲಾವಣೆ ಆಗಬೇಕಿದೆ. ಚುನಾವಣೆ ಕಳೆದು ಏಳು ತಿಂಗಳಾಗಿದ್ದು, ನಗರಸಭೆಯ ಸುಧಾರಣೆಗೆ ಶ್ರಮ ವಹಿಸುತ್ತಿದ್ದೇನೆ. ಖಂಡಿತವಾಗಲೂ ಮುಂದಿನ ದಿನಗಳಲ್ಲಿ ನನ್ನ ಶ್ರಮಕ್ಕೆ ಪ್ರತಿಫಲ ದೊರೆಯಲಿದೆ. ನಗರಸಭೆ ಉತ್ತಮವಾಗಿ ಕಾರ್ಯನಿರ್ವಹಿಸಲಿದೆ ಎಂದು ಪ್ರಶ್ನೆಯೊಂದಕ್ಕೆ ವಿಶ್ವಾಸ ವ್ಯಕ್ತಪಡಿಸಿದರು.

ಅನುದಾನ ಬಿಡುಗಡೆಯಾಗಿಲ್ಲ: ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರದಿಂದ ಅನುದಾನ ಬಿಡುಗಡೆ ಆಗುತ್ತಿದೆಯೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ಸರ್ಕಾರ ಗ್ಯಾರಂಟಿಗಳಿಗೆ ಹಣವನ್ನು ಕೊಡುತ್ತಿರುವ ಸಂದರ್ಭದಲ್ಲಿ ರಾಜ್ಯದ ಯಾವುದೇ ಶಾಸಕರಿಗೂ ಅನುದಾನ ದೊರಕುತ್ತಿಲ್ಲ. ಅದೇ ರೀತಿಯಲ್ಲಿ ಹುಣಸೂರು ಕ್ಷೇತ್ರಕ್ಕೂ ಯಾವುದೇ ಅನುದಾನ ದೊರಕಿಲ್ಲ. ಆದರೂ ನಾನು ಎಡೆಬಿಡದೇ ನಮ್ಮ ಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಮುಖ್ಯಮಂತ್ರಿಗಳನ್ನೂ ಭೇಟಿ ಮಾಡಿ, ಅಭಿವೃದ್ಧಿ ಸಂಬಂಧ ಹಲವಾರು ಮನವಿ ಸಲ್ಲಿಸಿದ್ದೇನೆ. ಅವರೆಲ್ಲರೂ ಸಕಾರಾತ್ಮಕವಾಗಿ ಸ್ಪಂದನೆ ಮಾಡಿದ್ದಾರೆ. ಹಾಗಾಗಿ ಬೇರೆ ಬೇರೆ ಹಂತದಲ್ಲಿ ಬೇರೆ ಬೇರೆ ಯೋಜನೆಗಳು ದೊರೆಯುತ್ತಿವೆ. ಆದರೆ ಇನ್ನು ಅನುದಾನ ಬಿಡುಗಡೆ ಆಗಿಲ್ಲ. ಮಾರ್ಚ್ ಕಳೆದ ನಂತರ ಹುಣಸೂರು ಕ್ಷೇತ್ರದ ಅಭಿವೃದ್ಧಿಗೆ ಸಕಾರಾತ್ಮಕವಾಗಿ ಕೆಲಸ ಮಾಡುತ್ತೇವೆಂದು ಎಲ್ಲಾ ಸಚಿವರು ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಒಂದೇ ತಿಂಗಳಲ್ಲಿ 1.72 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ

ನವದೆಹಲಿ: ವರ್ಷದ ಆರಂಭಿಕ ತಿಂಗಳಲ್ಲೇ ಜಿಎಸ್‌ಟಿ ಸಂಗ್ರಹ ದಾಖಲೆ ಬರೆದಿದ್ದು, ಶೇ.10.4 ರಷ್ಟು ಏರಿಕೆಯಾಗಿ 1.72 ಲಕ್ಷ ಕೋಟಿ ರೂ.ಗೆ ಹೆಚ್ಚಿದೆ ಎಂದು ಹಣಕಾಸು ಸಚಿವಾಲಯ ಬುಧವಾರ ತಿಳಿಸಿದೆ.

ಜನವರಿಯಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹವು ವಾರ್ಷಿಕ ಆಧಾರದ ಮೇಲೆ ಶೇ.10.4 ರಷ್ಟು ಏರಿಕೆಯಾಗಿ 1.72 ಲಕ್ಷ ಕೋಟಿ ರೂ.ಗೆ ಹೆಚ್ಚಿದೆ. ಇದು ಒಂದು ತಿಂಗಳಲ್ಲಿ ಇದುವರೆಗಿನ ಎರಡನೇ ಅತಿ ದೊಡ್ಡ ಸಂಗ್ರಹವಾಗಿದ್ದು, ಪ್ರಸಕ್ತ ಹಣಕಾಸು ವರ್ಷದಲ್ಲಿ ಅಂದರೆ 2023–24ರಲ್ಲಿ 1.70 ಲಕ್ಷ ಕೋಟಿ ಅಥವಾ ಅದಕ್ಕಿಂತ ಹೆಚ್ಚು ಸಂಗ್ರಹವಾದ ಮೂರನೇ ತಿಂಗಳಾಗಿದೆ. 2023ರ ಏಪ್ರಿಲ್‌ನಲ್ಲಿ ಅತ್ಯಧಿಕ ಅಂದರೆ 1.87 ಲಕ್ಷ ಕೋಟಿ ರೂ.ಗಳಷ್ಟು ಮಾಸಿಕ ಜಿಎಸ್‌ಟಿ ಸಂಗ್ರಹವಾಗಿತ್ತು.

ಹಣಕಾಸು ಸಚಿವಾಲಯವು, ಜನವರಿ 2024 ರಲ್ಲಿ (31–01–2024 ರಂದು ಸಂಜೆ 5 ಗಂಟೆಯವರೆಗೆ) ಒಟ್ಟು ಜಿಎಸ್‌ಟಿ ಆದಾಯವು 1,72,129 ಕೋಟಿ ರೂಪಾಯಿಯಾಗಿದೆ ಎಂದು ತಿಳಿಸಿದೆ. ಇದು ಜನವರಿ 2023 ರಲ್ಲಿ ಸಂಗ್ರಹಿಸಲಾದ 1,55,922 ಕೋಟಿ ರೂಪಾಯಿಗಿಂತ 10.4 ಶೇಕಡಾ ಹೆಚ್ಚು. ಪ್ರಸಕ್ತ ಹಣಕಾಸು ವರ್ಷದಲ್ಲಿ, ಏಪ್ರಿಲ್ 2023 ರಿಂದ ಜನವರಿ 2024 ರವರೆಗೆ, ಒಟ್ಟು ಒಟ್ಟು GST ಸಂಗ್ರಹವು ವಾರ್ಷಿಕ ಆಧಾರದ ಮೇಲೆ 11.6 ಪ್ರತಿಶತದಷ್ಟು ಹೆಚ್ಚಾಗಿದೆ.

ಈ 10 ತಿಂಗಳಲ್ಲಿ ಈ ಅಂಕಿ ಅಂಶವು ಒಂದು ವರ್ಷದ ಹಿಂದೆ 14.96 ಲಕ್ಷ ಕೋಟಿ ರೂಪಾಯಿಗಳಿಂದ 16.69 ಲಕ್ಷ ಕೋಟಿ ರೂಪಾಯಿಗಳಿಗೆ ಹೆಚ್ಚಾಗಿದೆ. ಇದು 12ನೇ ತಿಂಗಳಿನಲ್ಲಿ 1 ಲಕ್ಷ ಕೋಟಿಗೂ ಅಧಿಕ ಜಿಎಸ್‌ಟಿ ಸಂಗ್ರಹವಾಗಿದ್ದು, 2023ರ ಏಪ್ರಿಲ್‌ನಲ್ಲಿ 1.87 ಲಕ್ಷ ಕೋಟಿ ರೂ.ಗಳ ಮಾಸಿಕ ಜಿಎಸ್‌ಟಿ ಸಂಗ್ರಹವು ಅತ್ಯಧಿಕವಾಗಿದೆ. ಜನವರಿಯಲ್ಲಿ ಎಸ್‌ಜಿಎಸ್‌ಟಿ 39,476 ಕೋಟಿ, ಐಜಿಎಸ್‌ಟಿ 89,989 ಕೋಟಿ ಮತ್ತು ಸೆಸ್ 10,701 ಕೋಟಿ ಸಂಗ್ರಹವಾಗಿದೆ. ಬಜೆಟ್‌ಗೂ ಮುನ್ನ ಬಂದಿರುವ ಈ ಅಂಕಿ ಅಂಶಗಳು ಸರ್ಕಾರದ ನೈತಿಕ ಸ್ಥೈರ್ಯ ಹೆಚ್ಚಿಸಬಹುದು. ತೆರಿಗೆ ವಂಚನೆ ಪ್ರಕರಣಗಳ ತನಿಖೆಯಲ್ಲಿ ಜಿಎಸ್‌ಟಿ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂಬ ಆರೋಪಗಳೂ ಕೇಳಿಬರುತ್ತಿವೆ.

ಮೈಸೂರು ಮಿತ್ರ

ಹಲ್ಲರೆಯಲ್ಲಿ ಪರಿಶಿಷ್ಟ ಜಾತಿ ಸಮುದಾಯದವರ ಮೇಲೆ ನಡೆದ ಹಲ್ಲೆ ನಾಗರಿಕ ಸಮಾಜ ತಲೆ ತಗ್ಗಿಸುವ ಘಟನೆ

ಮೈಸೂರಲ್ಲಿ ಮಾಜಿ ಮೇಯರ್ ಪುರುಷೋತ್ತಮ್ ವಿಷಾದ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿದರು.

ಮೈಸೂರು,ಜ.31(ಜಿಎ)–ಡಾ.ಬಿ.ಆರ್. ಅಂಬೇಡ್ಕರ್ ಫಲಕ ಅಳವಡಿಸುವ ವಿಚಾರವಾಗಿ ನಂಜನಗೂಡು ತಾಲೂಕಿನ ಹಲ್ಲರೆ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಸಮುದಾಯದವರ ಮೇಲೆ ಪರಿಶಿಷ್ಟ ಪಂಗಡ ಸಮುದಾಯದವರು ನಡೆಸಿರುವ ದೌರ್ಜನ್ಯ ನಾಗರಿಕ ಸಮಾಜ ತಲೆತಗ್ಗಿಸುವ ಘಟನೆಯಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ಬೇಸರ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಬಗ್ಗೆ ಒಂದು ಸಮುದಾಯದವರಿಗೆ ಏಕೆ ಅಷ್ಟೊಂದು ಅಸಹನೆ, ಆಕ್ರೋಶ ಎಂಬುದು ಅರ್ಥವಾಗುತ್ತಿಲ್ಲ. ಅಲ್ಲಿ ಆ ರೀತಿ ಘಟನೆ ನಡೆಯಲು ಬಿಜೆಪಿ ಕೈವಾಡವೂ ಇರಬಹುದಾಗಿದೆ. ಜೊತೆಗೆ ಅಲ್ಲಿನ ಗ್ರಾಪಂ ಬೇಜವಬ್ದಾರಿ ಸಹ ಕಾರಣವಾಗಿದೆ ಎಂದರು.

ಈ ಸಂಬಂಧ ಪಿಡಿಒ ಮತ್ತು ತಾಪಂ ಇಒ ವಿರುದ್ಧ ಕ್ರಮ ಕೈಗೊಳ್ಳಬೇಕು. ನಾಮಫಲಕಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಯಬೇಕಾಗಿತ್ತು. ಸಭೆಗೆ ಗೈರು ಹಾಜರಾದ ಸವರ್ಣೀಯ ಗ್ರಾಪಂ ಸದಸ್ಯರ ಸದಸ್ಯತ್ವ ರದ್ದುಗೊಳಿಸಬೇಕು. ಜೊತೆಗೆ ಹಲ್ಲರೆ ಗ್ರಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಅಲ್ಲಿನ ಗ್ರಾಪಂ ಆಡಳಿತ ಮಂಡಳಿ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ಎಸ್‌ಸಿ ಸಮುದಾಯದವರಿಗೆ ಆಗಿರುವ ನಷ್ಟವನ್ನು ತುಂಬಿಕೊಡಬೇಕು. ದೌರ್ಜನ್ಯ ಎಸಗಿದವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಇಂತಹ ದುಷ್ಕೃತ್ಯ ಮತ್ತೆ ಜರುಗದಂತೆ ನೋಡಿಕೊಳ್ಳಬೇಕು. ಶಾಂತಿಸಭೆ ಹೆಸರಿನಲ್ಲಿ ದೌರ್ಜನ್ಯ ಮುಚ್ಚಿಹಾಕುವ ಯತ್ನ ನಡೆಸಬಾರದು ಎಂದು ಆಗ್ರಹಿಸಿ, ಶೀಘ್ರದಲ್ಲೇ ಈ ಮಾನವ ವಿರೋಧಿ ಕೃತ್ಯ ಖಂಡಿಸಿ ನಂಜನಗೂಡಿನಿಂದ ಹಲ್ಲರೆಗೆ ಶಾಂತಿ ಪಾದಯಾತ್ರೆ ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸೋಮಯ್ಯ ಮಲೆಯೂರು, ದೇವಗಳ್ಳಿ ಸೋಮಶೇಖರ್, ಸತೀಶ್, ಪ್ರದೀಪ್‌ಕುಮಾರ್, ವಿಷಕಂಠ ಉಪಸ್ಥಿತರಿದ್ದರು.

ಲಯನ್ಸ್ ಕ್ಲಬ್ ವೆಸ್ಟ್‌ನಿಂದ ಆರೋಗ್ಯ, ಸ್ವಾಸ್ಥ್ಯ ನಿಧಿ ಸಂಗ್ರಹ ಅಂಗವಾಗಿ ವಿವಿಧ ಕಾರ್ಯಕ್ರಮ

ಆರೋಗ್ಯ ತಪಾಸಣೆ, 'ತಟ್ಟೆ ಇಡ್ಲಿ ರಾದ್ಧಾಂತ' ನಾಟಕ, ವಾಕಥಾನ್, ಯೋಗ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಡಾ. ರವಿಚಂದ್ರ ಕುಲಕರ್ಣಿ ಮಾತನಾಡಿದರು.

ಮೈಸೂರು,ಜ.31(ಜಿಎ)–ಲಯನ್ಸ್ ಕ್ಲಬ್ ಆಫ್ ಮೈಸೂರು ವೆಸ್ಟ್‌ನಿಂದ ವಾರ್ಷಿಕ ಆರೋಗ್ಯ ಮತ್ತು ಸ್ವಾಸ್ಥ್ಯ ನಿಧಿ ಸಂಗ್ರಹ ಪ್ರಯುಕ್ತ ಫೆ.3 ಮತ್ತು 4ರಂದು ನಗರದಲ್ಲಿ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆ ಅಧ್ಯಕ್ಷ ಡಾ. ರವಿಚಂದ್ರ ಕುಲಕರ್ಣಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾರಾಯಣ ಹೆಲ್ತ್ ಸಹಯೋಗದಲ್ಲಿ ಫೆ.3ರಂದು ಬೆಳಿಗ್ಗೆ 9.30ರಿಂದ ಮಧ್ಯಾಹ್ನ 2 ಗಂಟೆವರೆಗೆ ಗೋಕುಲಂನ ಲಯನ್ಸ್ ಸೇವಾನಿಕೇತನ ಶಾಲೆಯಲ್ಲಿ ಆರೋಗ್ಯ ತಪಾಸಣಾ ಉಚಿತ ಶಿಬಿರ ಆಯೋಜಿಸಲಾಗಿದೆ. ಅಲ್ಲದೇ, 500 ರೂ. ನೀಡಿ ಡೋನರ್ ಪಾಸ್ ಪಡೆದವರು ಅಂದು ಸಂಜೆ ಜೆ.ಕೆ.ಗ್ರೌಂಡ್ ಎಂಎಂಸಿ ಸಭಾಂಗಣದಲ್ಲಿ ನಡೆಯುವ 'ತಟ್ಟೆ ಇಡ್ಲಿ ರಾದ್ಧಾಂತ' ನಾಟಕ ವೀಕ್ಷಿಸಬಹುದು. ಫೆ.4ರಂದು ಬೆಳಿಗ್ಗೆ 6.30ಕ್ಕೆ ಲಯನ್ಸ್ ಶಾಲೆಯಲ್ಲಿ ವಾಕಥಾನ್ ಹಾಗೂ ಬೆಳಿಗ್ಗೆ 8.45ಕ್ಕೆ ಇಂಡಿಯಾ ಯೋಗ ಫೆಲಿಸಿಟೇಟರ್ ಮಾರ್ಗದರ್ಶನದಲ್ಲಿ ಯೋಗ ನಿದ್ರಾ–ಆಳವಾದ ವಿಶ್ರಾಂತಿ ಕಾರ್ಯಾಗಾರ ನಡೆಯಲಿದ್ದು, ಪಾಸ್ ಪಡೆದವರು ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ ಮೊ.ಸಂ. 90353 22144 ಸಂಪರ್ಕಿಸಬಹುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಗೌರವ ಕಾರ್ಯದರ್ಶಿ ವಿದ್ಯಾಶಂಕರ್, ಅಭಿನವ ಇವೆಂಟ್ಸ್ ಸಂಸ್ಥೆಯ ಪ್ರಜ್ವಲ್ ಉಪಸ್ಥಿತರಿದ್ದರು.

ಜೀನಿಯಸ್ ಕಾಲೇಜಿನಲ್ಲಿ ಜಿಲ್ಲಾ ಮಟ್ಟದ ವಾಲಿಬಾಲ್ ಪಂದ್ಯಾವಳಿ



ಮೈಸೂರಿನ ಜೀನಿಯಸ್ ಕಾಲೇಜಿನಲ್ಲಿ ಜಿಲ್ಲಾಮಟ್ಟದ ವಾಲಿಬಾಲ್ ಪಂದ್ಯಾವಳಿಯನ್ನು ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಬುಧವಾರ ಉದ್ಘಾಟಿಸಿದರು.

ಮೈಸೂರು, ಜ. 31– ಮೈಸೂರಿನ ರಿಂಗ್ ರಸ್ತೆಯಲ್ಲಿ ದೇವೇಗೌಡ ವೃತ್ತದಲ್ಲಿರುವ ಕೆ.ಬಿ.ಎಲ್ ಬಡಾವಣೆಯ ಜೀನಿಯಸ್ ಕಾಲೇಜಿನಲ್ಲಿ ಜಿಲ್ಲಾ ಮಟ್ಟದ ವಾಲಿಬಾಲ್ ಮತ್ತು ಫನ್‌ಫೇರ್ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮಕ್ಕೆ ಜ್ಯೋತಿ ಬೆಳಗಿಸುವುದರ ಮೂಲಕ ಚಾಲನೆ ನೀಡಿದ ದಕ್ಷಿಣ ಶಿಕ್ಷಕರ ಕ್ಷೇತ್ರದ ಶಾಸಕರಾದ ಮರಿತಿಬ್ಬೇಗೌಡ ಅವರು, ಇಂದು ಹುತಾತ್ಮರ ದಿನ. ಆದ್ದರಿಂದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ. ತ್ಯಾಗ ಬಲಿದಾನದಿಂದ ನಮಗೆ ಸ್ವಾತಂತ್ರವನ್ನು ತಂದುಕೊಟ್ಟಿದ್ದಾರೆ. ನನ್ನ ಜೀವನವೇ ನನ್ನ ಸಂದೇಶ ಎಂದು ಸಾರಿದ ರಾಷ್ಟ್ರಪಿತರು. ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರು ಭಾರತಕ್ಕೆ ವಿಶಿಷ್ಟವಾದ ಸಂವಿಧಾನವನ್ನು ರಚಿಸಿ ಸಮಾನತೆಯನ್ನು ತಂದವರು. ಇಂದು ಸಂವಿಧಾನವನ್ನು ಇಡೀ ವಿಶ್ವವೇ ಗೌರವಿಸುತ್ತಿರುವುದು ನಮಗೆ ಸಂತಸ ತಂದಿದೆ ಎಂದರು.

ಕ್ರೀಡೆ ಮನುಷ್ಯನಿಗೆ ಆರೋಗ್ಯವನ್ನು ಹೆಚ್ಚಿಸುತ್ತದೆ. ವಿದ್ಯಾರ್ಥಿಗಳು ಪ್ರತಿನಿತ್ಯವೂ ಬೆಳಿಗ್ಗೆ ಮತ್ತು ಸಂಜೆ ದೈಹಿಕ ಕ್ರೀಡೆಗಳಲ್ಲಿ ತೊಡಗಬೇಕೆಂದು ಕರೆ ನೀಡಿದರು. ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಎನ್.ಸುರೇಖಾಪ್ರಭು ಮಾತನಾಡಿ, ಕ್ರೀಡಾ ಚಟುವಟಿಕೆಗಳು ವಿದ್ಯಾರ್ಥಿಗಳಿಗೆ ದೈಹಿಕ ಮೌಲ್ಯದೊಂದಿಗೆ ಸದೃಢ ಶರೀರವನ್ನು ಹೊಂದುವಂತೆ ಮಾಡುತ್ತದೆ. ಆದ್ದರಿಂದ ಕಾಲೇಜಿನ ವಿದ್ಯಾರ್ಥಿಗಳು ಬಿಡುವಿನ ವೇಳೆಯಲ್ಲಿ ಕ್ರೀಡಾ ಚಟುವಟಿಕೆಯಲ್ಲಿ ತೊಡಗುವುದು ಒಳ್ಳೆಯದೆಂದು ತಿಳಿಸಿದರು. ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಹೆಚ್.ಆರ್.ಸುರೇಶ್ ವಹಿಸಿ ಮಾತನಾಡಿ, ಪಠ್ಯ ಚಟುವಟಿಕೆಗಳು ಎಷ್ಟು ಮುಖ್ಯವೋ ಅಷ್ಟೇ ಸಹಪಠ್ಯ ಚಟುವಟಿಕೆಗಳಾದ ಕ್ರೀಡೆ, ನೃತ್ಯ, ಸಂಗೀತ, ನಾಟಕ, ಸಾಹಿತ್ಯ, ವ್ಯಾಯಾಮ ವಿದ್ಯಾರ್ಥಿ ಜೀವನದಲ್ಲಿ ಮುಖ್ಯವಾಗಿರುತ್ತದೆ. ಮಾನಸಿಕ ಒತ್ತಡವನ್ನು ನಿಯಂತ್ರಿಸಬೇಕಾದರೆ ಕ್ರೀಡಾ ಚಟುವಟಿಕೆಗಳು ಪೂರಕವಾಗುತ್ತದೆ ಮತ್ತು ಆರೋಗ್ಯವನ್ನು ಸಮತೋಲನದಲ್ಲಿ ಇಡಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಕಣ್ಮನ ಸೆಳೆದ ಅಪರೂಪದ ನಾಣ್ಯ, ನೋಟುಗಳು

ಮೈಸೂರು,ಜ.31(ಎಂಟಿವೈ)– ಮೈಸೂರಿನ ಹಾರ್ಡ್ವಿಕ್ ಶಾಲೆಯ ಆವರಣದಲ್ಲಿ ಆಯೋಜಿಸಿದ್ದ ಅಪರೂಪದ ನಾಣ್ಯ, ನೋಟು ಹಾಗೂ ಅಂಚೆ ಚೀಟಿಗಳು ನೋಡುಗರ ಕಣ್ಮನ ಸೆಳೆದವು.

ಇಂಡಿಯನ್ ಥಿಯೇಟರ್ ಫೌಂಡೇಷನ್, ಹಾರ್ಡ್ವಿಕ್ ಪಿಯು ಕಾಲೇಜು, ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ಪ್ರದರ್ಶನದಲ್ಲಿ ಹುಣಸೂರಿನ ಪಿ.ಕೆ.ಕೇಶವಮೂರ್ತಿ ಸಂಗ್ರಹಿಸಿರುವ ನಾಣ್ಯ ಮತ್ತು ನೋಟು, ಸ್ಟಾಂಪ್‌ಗಳನ್ನು ಪ್ರದರ್ಶನಕ್ಕಿಡಲಾಗಿತ್ತು.

ಪ್ರದರ್ಶನದಲ್ಲಿ ತಾಮ್ರ, ಬೆಳ್ಳಿ, ಚಿನ್ನ, ಸೀಸ, ಹಿತ್ತಾಳೆ ಮುಂತಾದ ಲೋಹಗಳ ನಾಣ್ಯಗಳು, ದೇಶವನ್ನಾಳಿದ ವಿವಿಧ ಸಾಮ್ರಾಜ್ಯಗಳ ಕಾಲದಲ್ಲಿ ಚಲಾವಣೆಯಲ್ಲಿದ್ದ ನಾಣ್ಯಗಳೊಂದಿಗೆ ಅವುಗಳ ಮಾಹಿತಿ ಪ್ರದರ್ಶಿಸಲಾಗಿತ್ತು. ಕ್ರಿಸ್ತಪೂರ್ವ 5ನೇ ಶತಮಾನದಲ್ಲಿ ಬಳಕೆಗೆ ಬಂದ ಭಾರತದ ಮೊಟ್ಟ ಮೊದಲ ಪಂಚ್ ಮಾರ್ಕ್ ನಾಣ್ಯಗಳು, ಗ್ರೀಕ್ ರೋಮನ್, ಕುಶಾನರು, ಗುಪ್ತ, ಶಾತವಾಹನ, ಕದಂಬ, ಚೋಳ, ಪಾಂಡ್ಯ ಮುಂತಾದ ಪ್ರಾಚೀನ ಭಾರತದ ನಾಣ್ಯಗಳು, ಮೊಘಲ್ ಸಾಮ್ರಾಜ್ಯದ ಅಕ್ಬರ್, ಜಹಾಂಗೀರ್, ಷಹಜಹಾನ್, ಔರಂಗಜೇಬ್ ಸೇರಿದಂತೆ ಇನ್ನಿತರರ ಕಾಲದ ನಾಣ್ಯಗಳು, ಮೈಸೂರು, ಬಿಜಾಪುರ ಪೋರ್ಚಗೀಸರ ಮತ್ತು ಸ್ವತಂತ್ರ ಭಾರತದ ನಾಣ್ಯಗಳು ಹಾಗೂ



ಮೈಸೂರಿನ ಹಾರ್ಡ್ವಿಕ್ ಶಾಲೆ ಆವರಣದಲ್ಲಿ ಆಯೋಜಿಸಿದ್ದ ನಾಣ್ಯ, ನೋಟು ಹಾಗೂ ಅಂಚೆ ಚೀಟಿ ಪ್ರದರ್ಶನದಲ್ಲಿ ಪಿ.ಕೆ.ಕೇಶವಮೂರ್ತಿ ನಾಣ್ಯಗಳ ಕುರಿತು ಮಾಹಿತಿ ನೀಡುತ್ತಿರುವುದು.

ನೋಟುಗಳು, ಚಲಾವಣೆಯಿಂದ ಹಿಂತೆಗೆದುಕೊಂಡ ಐದು ನೂರು, ಸಾವಿರ ರೂಪಾಯಿ ನೋಟುಗಳು, ಸರಣಾರ್ಥ ಬಿಡುಗಡೆಯಾದ 1 ಸಾವಿರ, 150, 100, 75, 60, 50, 20 ಮತ್ತು 10 ರೂ. ನಾಣ್ಯಗಳು ಸಾರ್ವಜನಿಕರು ನೋಡಿ ಆನಂದಿಸಿದರು. ಅಫ್ಘಾನಿಸ್ತಾನ, ಅರಬ್, ಬಾಂಗ್ಲಾದೇಶ, ಭೂತಾನ್, ಬೆಲ್ಜಿಯಂ, ಬ್ರೆಜಿಲ್, ರಷ್ಯಾ, ಥೈಲ್ಯಾಂಡ್ ಸೇರಿದಂತೆ ನೂರಾರು ದೇಶ–ವಿದೇಶಗಳ ವೈವಿಧ್ಯಮಯ ನಾಣ್ಯ, ನೋಟುಗಳು, ವಿದೇಶಗಳ ಚಿನ್ನದಿಂದ ಮಾಡಿದ ನೋಟುಗಳು, ಇತ್ತೀಚಿನ ಪ್ಲಾಸ್ಟಿಕ್ ನೋಟುಗಳು, ಮುದ್ರರಾಕ್ಷಸನ ಹಾವಳಿಯ ದೋಷವುಳ್ಳ ವಿವಿಧ ಆಕಾರದ ನಾಣ್ಯ, ನೋಟು, ನೂರಾರು ವರ್ಷಗಳ ಅಪೂರ್ವ ಸಂಗ್ರಹವನ್ನು ಒಂದು ಸ್ಥಳದಲ್ಲಿ ವೀಕ್ಷಣೆಯೊಂದಿಗೆ ಜಗತ್ತಿನ ಇತಿಹಾಸ, ಕುತೂಹಲ ಸಂಗತಿಗಳನ್ನು ತಿಳಿದುಕೊಳ್ಳಲು ಪ್ರದರ್ಶನ ಸಹಕಾರಿಯಾಯಿತು.

ಕವಿಗಳ ಜೀವನ ಚರಿತ್ರೆ ಮಾಹಿತಿ: ಕನ್ನಡದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ದ.ರಾ.ಬೇಂದ್ರೆ, ಕುವೆಂಪು, ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕೆ.ಶಿವರಾಮ ಕಾರಂತರ ವಿಶೇಷ ಸ್ಟಾಂಪ್‌ಗಳೊಂದಿಗೆ ಜೀವನ ಚರಿತ್ರೆಯನ್ನು ಪ್ರದರ್ಶಿಸಲಾಗಿತ್ತು. ಪುರಂದರದಾಸರು, ಭಕ್ತ ಕನಕದಾಸರು, ಭೀಮಸೇನ ಜೋಷಿ, ಸರ್.ಎಂ.ವಿಶ್ವೇಶ್ವರಯ್ಯ, ವಿಜ್ಞಾನಿ ಸರ್.ವಿ.ರಾಮನ್, ಗಂಗೂಬಾಯಿ ಹಾನಗಲ್, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಅವರ ಸಾಧನೆಗಳ ಮಾಹಿತಿಯುಳ್ಳ ಮಾಹಿತಿ ಪತ್ರಗಳನ್ನು ಪ್ರದರ್ಶಿಸಲಾಗಿತ್ತು. ಬಸವೇಶ್ವರರು, ಶಿವರಾತ್ರಿ ಶಿವಯೋಗಿ ಸ್ವಾಮೀಜಿ, ಮೈಸೂರು ದಸರೆಯ ಇತಿಹಾಸವನ್ನು ತಿಳಿಸುವ ಸ್ಟಾಂಪ್‌ಗಳು ಅಪೂರ್ವ ಮಾಹಿತಿ ಒದಗಿಸಿದವು. ಇವುಗಳನ್ನು ನೋಡಿದ ವಿವಿಧ ಶಾಲೆಯ ವಿದ್ಯಾರ್ಥಿಗಳು ತಾವು ಓದುತ್ತಿದ್ದ ಇತಿಹಾಸವನ್ನು ಕಣ್ಣಾರೆ ನೋಡಿ ಇನ್ನಷ್ಟು ತಿಳಿದುಕೊಂಡರು.

> ಬಿಎಸ್‌ಎನ್‌ಎಲ್ ನೌಕರರನಾಗಿದ್ದ ನಾನು ಮೊದಲಿನಿಂದಲೂ ಅಂಚೆ ಚೀಟಿ ಸಂಗ್ರಹಿಸುವ ಹವ್ಯಾಸ ಮೈಗೂಡಿಸಿಕೊಂಡಿದ್ದೆ. 1985ರಿಂದ ನಾಣ್ಯಗಳನ್ನು ಸಂಗ್ರಹಿಸುವ ಅಭಿರುಚಿ ಆರಂಭವಾಯಿತು. 1992ರಲ್ಲಿ ನಾಣ್ಯ ಮತ್ತು ನೋಟುಗಳ ಮೊದಲ ಪ್ರದರ್ಶನ ಏರ್ಪಡಿಸಿದ್ದೆ. ಇದುವರೆಗೂ 157 ಪ್ರದರ್ಶನ ನಡೆಸಿದ್ದೇನೆ. ರಾಜ್ಯ–ರಾಷ್ಟ್ರ ಮಟ್ಟದ ಪ್ರದರ್ಶನಗಳಲ್ಲಿ ಪ್ರಶಸ್ತಿ–ಬಿರುದುಗಳನ್ನು ಪಡೆದುಕೊಂಡಿದ್ದೇನೆ. ಮೈಸೂರಲ್ಲಿ ನಡೆಸಿದ ಒಂದು ದಿನದ ಪ್ರದರ್ಶನದಲ್ಲಿ ನೂರಾರು ವಿದ್ಯಾರ್ಥಿಗಳು, ಆಸಕ್ತ ಸಾರ್ವಜನಿಕರು ವೀಕ್ಷಿಸಿ ಮಾಹಿತಿ ಪಡೆದುಕೊಂಡಿದ್ದಾರೆ.
>
> –ಪಿ.ಕೆ.ಕೇಶವಮೂರ್ತಿ, ನಾಣ್ಯ, ನೋಟು ಸಂಗ್ರಹಗಾರರು

ಕವಿ–ಕಲೆಯ ನಡುವಿನ ಬಾಂಧವ್ಯ ಅಪರಿಮಿತವಾದದ್ದು

ಡಾ.ತಾರಿಣಿ ಚಿದಾನಂದ್

ಮೈಸೂರು, ಜ. 31–ರಾಷ್ಟ್ರಕವಿ ಕುವೆಂಪು ಅವರ 119ನೇ ಜನ್ಮದಿನೋತ್ಸವ ಮತ್ತು ಚಿತ್ರಕಲಾ ವಿಜೇತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮೈಸೂರಿನ ವಿ.ವಿ.ಮೊಹಲ್ಲಾದ ಆರ್ಟ್–ಆಲ್ಟರ್ನೇಟಿವ್ ಚಿತ್ರಕಲಾ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಸುಪುತ್ರಿ ಡಾ.ತಾರಿಣಿ ಚಿದಾನಂದ್, ಕುವೆಂಪು ವಿಶ್ವ ವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ. ಕೆ ಚಿದಾನಂದ ಗೌಡ, ಮೈಸೂರು ಗ್ರಾಹಕರ ಪರಿಷತ್ ಸಂಸ್ಥಾಪಕ ಸಂಚಾಲಕ ಡಾ. ಭಾಮೀ ವಿ. ಶೆಣೈ, ಮತ್ತು ಹಿರಿಯ ವಿಜ್ಞಾನಿ ಡಾ.ಜಿ.ಪಾಂಡುರಂಗ ಮೂರ್ತಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕುವೆಂಪುರವರ ಸುಪುತ್ರಿ ಡಾ.ತಾರಿಣಿ ಚಿದಾನಂದ್ ಮಾತನಾಡಿ, ಕವಿ ಮತ್ತು ಕಲೆಯ ನಡುವಿನ ಬಾಂಧವ್ಯ ಅಪರಿಮಿತವಾದದ್ದು; ಪರಿಸರವನ್ನು ನಂಬಿ ಬೆಳೆದರೆ ಮಾತ್ರವೇ ಮಾನವನ ಪಾರಂಪರಿಕ ನೆಲೆ ಸಾಧ್ಯ ಎಂಬ ಕುವೆಂಪುರವರ ಸಾರ್ವಕಾಲಿಕ ಅಭಿಮತವನ್ನು ನಿರ್ದಿಷ್ಟ ಉದಾಹರಣೆಯೊಂದಿಗೆ ವಿವರಿಸಿದರು. ಜೊತೆಗೆ, ಬಾಲ್ಯದಲ್ಲಿ ತಾವು ತಂದೆಯ ವಿಚಾರಧಾರೆಗಳಿಂದ ಪ್ರೇರೇಪಿತವಾದ ಸನ್ನಿವೇಶಗಳನ್ನು ಅತ್ಯಂತ ಪ್ರಖರವಾಗಿ ಹೇಳುತ್ತಾ, ಮುಂದಿನ ಜನಾಂಗ ಸಾಹಿತ್ಯದ ಅಭಿರುಚಿಯನ್ನು ಬೆಳೆಸಿಕೊಳ್ಳುವ ಮೂಲಕ ಬದುಕಿನಲ್ಲಿ ವ್ಯಕ್ತಿತ್ವದ ಪರಿವರ್ತನೆ ಹೊಂದಬಹುದು. ಅದು



ರಾಷ್ಟ್ರಕವಿ ಕುವೆಂಪು ಅವರ 119ನೇ ಜನ್ಮದಿನೋತ್ಸವ ಮತ್ತು ಚಿತ್ರಕಲಾ ವಿಜೇತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಜೀವನದ ಪರಿಪೂರ್ಣತೆಗೆ ದಾರಿಯಾಗುತ್ತದೆ ಎಂದು ಹೇಳಿದರು. ಹಿರಿಯ ವಿಜ್ಞಾನಿ ಡಾ.ಜಿ.ಪಾಂಡುರಂಗ ಮೂರ್ತಿ, ಕುವೆಂಪು ವಿಶ್ವಮಾನವ ಸಂದೇಶ ಸಾರಿದ್ದಾರೆ. ಅವರು ಬರೆಯದ ಸಾಹಿತ್ಯದ ಪ್ರಾಕಾರವಿಲ್ಲ, ಕನ್ನಡ ಸಾಹಿತ್ಯಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿ ತಂದುಕೊಡುವ ಮೂಲಕ ಕನ್ನಡವನ್ನು ಸಾಹಿತ್ಯ ಲೋಕದಲ್ಲಿ ಶ್ರೀಮಂತಗೊಳಿಸಿದರು ಎಂದರು.

ವಿಶ್ರಾಂತ ಕುಲಪತಿಗಳಾದ ಡಾ. ಕೆ. ಚಿದಾನಂದಗೌಡ ಮಾತನಾಡಿ, ಕುವೆಂಪು ಅವರ ವಿಶ್ವಮಾನವ ಸಂದೇಶ ಸಾರ್ವಕಾಲಿಕ ಮತ್ತು ಪ್ರಾಪಂಚಿಕವಾದದ್ದು; ಜೀವನದಲ್ಲಿ, ಯಾವುದೇ ಸಾಧನೆ ಮಾಡಿದರೂ ಅದನ್ನು ಮಾನವ ಕಲ್ಯಾಣಕ್ಕೆ ವಿನಿಯೋಗಿಸುವ ಪ್ರಾಮಾಣಿಕತೆಯೇ ಮಾನವ–ವಿಶ್ವಮಾನವನಾಗುವ ಪ್ರಾಕಾರ ಎಂದು ವ್ಯಾಖ್ಯಾನ ನೀಡಿದರು.

ಮೈಸೂರು ಗ್ರಾಹಕರ ಪರಿಷತ್‌ನ ಸಂಸ್ಥಾಪಕ ಸಂಚಾಲಕ ಡಾ. ಭಾಮೀ ವಿ. ಶೆಣೈ ತಮ್ಮ ಭಾಷಣದಲ್ಲಿ, ಮಕ್ಕಳಿಗೆ ಮೊಬೈಲ್ ಕೊಡುವುದನ್ನು ನಿರ್ಬಂಧಿಸಿ, ಅದರಲ್ಲೂ ವಿದ್ಯಾರ್ಥಿಗಳು ಮೊಬೈಲ್‌ಗೆ ದಾಸರಾಗಿ ಅದರಿಂದ ಸದುಪಯೋಗ ಪಡೆಯುವುದಕ್ಕಿಂತ, ಅಡ್ಡದಾರಿ ಹಿಡಿಯುವುದೇ ಹೆಚ್ಚಾಗಿದೆ. ಜೊತೆಗೆ ಅವರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಿ ಮಾನಸಿಕ ಸ್ತಿಮಿತ ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ಮುಂದೆ ಇದು ಸಮಾಜದ ಒಟ್ಟು ಪ್ರಗತಿಯ ಮೇಲೆ ಋಣಾತ್ಮಕ ಪರಿಣಾಮ ಉಂಟಾಗುತ್ತದೆ ಎಂದು ಎಚ್ಚರಿಸಿದರು. ಅಲ್ಲದೇ, ಕುವೆಂಪುರವರ ಆದರ್ಶ ಮುಂದಿನ ಜನಾಂಗಕ್ಕೆ ಪರಿಚಯಿಸುವ ನಿಟ್ಟಿನಲ್ಲಿ ಈ ಸಮಾರಂಭದಲ್ಲಿ ಡಾ.ಜಿ.ಪಾಂಡುರಂಗ ಮೂರ್ತಿ ಅವರು ಕುವೆಂಪು ಜೀವನ ಗಾಥೆ ಕುರಿತು ಚಿತ್ರ–ಪ್ರದರ್ಶನದ ಮೂಲಕ ನೀಡಿದ ವಿಶೇಷ ಪ್ರವಚನ ಅತ್ಯಂತ ಪರಿಣಾಮಕಾರಿಯಾಗಿದೆ ಎಂದು ಬಣ್ಣಿಸಿದರು. ವಿಶ್ವಮಾನವ ಕುವೆಂಪು ಲಯನ್ಸ್ ಮೈಸೂರು ಸಂಸ್ಥೆಯ ಕಾರ್ಯದರ್ಶಿ ಡಿ.ವಿ. ದಯಾನಂದ ಸಾಗರ್ ಅಧ್ಯಕ್ಷತೆ ವಹಿಸಿದ್ದರು.

ರಾಷ್ಟ್ರ ಮಟ್ಟದ ಈಜು ಸ್ಪರ್ಧೆಯಲ್ಲಿ ಎಸ್.ತಾನ್ಯಗೆ ಚಿನ್ನದ ಪದಕ

ಮೈಸೂರು, ಜ. 31– ಇತ್ತೀಚೆಗೆ ಚೆನ್ನೈನಲ್ಲಿ ನಡೆದ ರಾಷ್ಟ್ರ ಮಟ್ಟದ ಖೇಲೋ ಇಂಡಿಯಾ ಯೂತ್ ಗೇಮ್ಸ್ ಈಜು ಸ್ಪರ್ಧೆಯಲ್ಲಿ ಎಸ್. ತಾನ್ಯ ಚಿನ್ನದ ಪದಕ ಪಡೆದಿದ್ದಾರೆ. ಕರ್ನಾಟಕದಿಂದ 9ನೇ ಗ್ರೇಡ್ ಮಹಿಳಾ ವಿಭಾಗದಲ್ಲಿ ಸ್ಪರ್ಧಿಸಿದ್ದ ಮೈಸೂರಿನ ಗ್ಲೋಬಲ್ ಸ್ಪೋರ್ಟ್ಸ್ ಅಸೋಸಿಯೇಷನ್‌ನ ಈಜುಪಟು ಎಸ್. ತಾನ್ಯ ಅವರು 400 ಮೀ. ವೈಯಕ್ತಿಕ ಮಿಡ್ಲೆಯಲ್ಲಿ ಚಿನ್ನದ ಪದಕ ಪಡೆದಿದ್ದಾರೆ. ಮೈಸೂರಿಗೆ ಪ್ರಪ್ರಥಮ ಬಾರಿಗೆ ಚಿನ್ನದ ಪದಕ ಪಡೆದು ಇತಿಹಾಸ ನಿರ್ಮಿಸಿರುವ ಕೀರ್ತಿ ತಾನ್ಯ ಅವರಿಗೆ ಸಲ್ಲುತ್ತದೆ. ಇವರು ಜೆ.ಪಿ.ನಗರದಲ್ಲಿರುವ ಜಿಎಸ್‌ಎಸ್ ಸ್ಪೋರ್ಟ್ಸ್ ಕ್ಲಬ್‌ನ ಹಿರಿಯ ಕೋಚ್ ಪವನ್‌ಕುಮಾರ್ ಮಾರ್ಗದರ್ಶನದಲ್ಲಿ ತರಬೇತಿ ಪಡೆಯುತ್ತಿದ್ದಾರೆ.



ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸುವ ದಿನಾಂಕ ವಿಸ್ತರಣೆ

ಮೈಸೂರು, ಜ.31– ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1ರ ಅಲೆಮಾರಿ ಅಥವಾ ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ 2023–24 ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ 'ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ', 'ಶುಲ್ಕ ವಿನಾಯಿತಿ', 'ವಿದ್ಯಾಸಿರಿ ಊಟ ಮತ್ತು ವಸತಿ ಸಹಾಯ ಯೋಜನೆ' ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಹಾಕಲು ದಿನಾಂಕವನ್ನು ಫೆ.15 ರವರೆಗೆ ವಿಸ್ತರಿಸಲಾಗಿದೆ. ವಿದ್ಯಾರ್ಥಿಗಳು https://ssp.postmatric.karnataka.gov.in ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಕಾರ್ಯಕ್ರಮಗಳ ವಿವರ, ಅರ್ಹತೆ, ಹಾಗೂ ಸಲ್ಲಿಸಬೇಕಾದ ದಾಖಲೆಗಳು ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ https://bcwd.karnataka.gov.in ವೆಬ್‌ಸೈಟ್, ಸಹಾಯವಾಣಿ ಸಂ: 8050770005 ಹಾಗೂ ಇ–ಮೇಲ್ bcwdhelpline@gmail.com ಗೆ ಭೇಟಿ ನೀಡಬಹುದು. ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಇ–ಮೇಲ್ postmatrichelp @karnataka.gov.in ಮತ್ತು ದೂರವಾಣಿ ಸಂ: 080–35254757 ಅನ್ನು ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವ ಜನರು ರಾಷ್ಟ್ರದ ಏಳಿಗೆಗೆ ಕೊಡುಗೆ ನೀಡಬೇಕು

ಆರ್‌ಎಲ್‌ಹೆಚ್‌ಪಿ ಕಾರ್ಯದರ್ಶಿ ಪ್ರೊ.ಜೋಸ್ ವಿ.ಕೆ ಸಲಹೆ

ಮೈಸೂರು,ಜ.31(ಎಂಟಿವೈ)–ಯುವ ಜನರು ಕೇವಲ ಶೈಕ್ಷಣಿಕ ಪ್ರಗತಿ ಸಾಧಿಸುವತ್ತ ಗಮನ ಕೇಂದ್ರೀಕರಿಸದೇ ರಾಷ್ಟ್ರದ ಏಳಿಗೆಗೆ ಕೊಡುಗೆ ನೀಡುವ ಪಣತೊಡಬೇಕು ಎಂದು ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆಯ ಕಾರ್ಯದರ್ಶಿ ಪ್ರೊ. ಜೋಸ್ ವಿ.ಕೆ ಸಲಹೆ ನೀಡಿದ್ದಾರೆ.

ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ನಾತಕೋತ್ತರ ವಿಭಾಗ) ಹಾಗೂ ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ (ಆರ್‌ಎಲ್‌ಹೆಚ್‌ಪಿ) ಸಹಯೋಗದೊಂದಿಗೆ ಕಾಲೇಜಿನ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ 'ರಾಷ್ಟ್ರೀಯ ಯುವಜನ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಷ್ಟ್ರ ನಿರ್ಮಾಣದಲ್ಲಿ ಯುವ ಜನರ ಪಾತ್ರ ಮಹತ್ವದ್ದಾಗಿದೆ. ಪ್ರಸ್ತುತ ಯುವ ಜನರು ಕೇವಲ ಶೈಕ್ಷಣಿಕ ಪ್ರಗತಿಗೆ ಮಾತ್ರ ಸೀಮಿತರಾಗಿರುವಂತೆ ಕಂಡು ಬರುತ್ತಿದೆ. ಈ ಹಿನ್ನೆಲೆಯಲ್ಲಿ ಯುವ ಜನರು ಶೈಕ್ಷಣಿಕ ಪ್ರಗತಿಯೊಂದಿಗೆ ತಮ್ಮ ಸಮುದಾಯ ಹಾಗೂ ರಾಷ್ಟ್ರದ ಅಭಿವೃದ್ಧಿಗೂ ಶ್ರಮಿಸಬೇಕು. ಜಾಗತಿಕ ಸಮಸ್ಯೆಯಾಗಿ ಕಾಡುತ್ತಿರುವ ಹವಾಮಾನ ಬದಲಾವಣೆ, ಪರಿಸರ ಸಂರಕ್ಷಣೆ ಕುರಿತು ಯುವಜನರು ಎಚ್ಚೆತ್ತುಕೊಳ್ಳಬೇಕು. ಸ್ವಾಮಿ ವಿವೇಕಾನಂದ ಅವರು ಯುವ ಶಕ್ತಿಯ ಮೇಲೆ ವಿಶ್ವಾಸವಿಟ್ಟಿದ್ದರು. ಯುವ ಜನರಿಂದಲೇ ಸದೃಢವಾದ ಭಾರತ ನಿರ್ಮಾಣ ಮಾಡುವ ಆಶಯ ಹೊಂದಿದ್ದರು. ಅದನ್ನು ಸಾಕಾರಗೊಳಿಸಲು ಯುವ ಜನರು ಮನಸ್ಸು ಮಾಡಬೇಕು ಎಂದರು.

ಸಾಮಾಜಿಕ ನ್ಯಾಯ ವೇದಿಕೆಯ ಪ್ರಾದೇಶಿಕ ಮುಖ್ಯಸ್ಥರಾದ ಸತೀಶ್ ಮೈತ್ರಿ ಮಾತನಾಡಿ, ಸಮಾಜದಲ್ಲಿ ಬೇರೂರಿ



ಮೈಸೂರಿನ ಮಹಾಜನ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಯುವಜನ ದಿನದ ಕಾರ್ಯಕ್ರಮವನ್ನು ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆಯ ಕಾರ್ಯದರ್ಶಿ ಪ್ರೊ.ಜೋಸ್ ವಿ.ಕೆ ಉದ್ಘಾಟಿಸಿದರು.

ರುವ ತಾರತಮ್ಯ, ಅಸಮಾನತೆ ಹಾಗೂ ಪರಿಸರ ಸಮಸ್ಯೆಗಳನ್ನು ನಿರ್ಮೂಲನೆ ಮಾಡುವಲ್ಲಿ ಯುವಜನರು ಕಾರ್ಯೋನ್ಮುಖರಾಗಬೇಕು. ಸಮಾಜ ಸೇವೆ ಮಾಡಲು ಯಾವುದೇ ಕಟ್ಟುಪಾಡುಗಳಿಲ್ಲ. ಸೇವೆ ಮಾಡಲು ಯಾವುದೇ ಹುದ್ದೆ, ಶಿಕ್ಷಣ ಹಾಗೂ ಸಂಸ್ಥೆಗಳೇ ಆಗಬೇಕು ಎಂಬ ನಿರ್ಬಂಧವಿಲ್ಲ. ಸೇವಾ ಮನೋಭಾವ ಹಾಗೂ ಮನಸ್ಸಿದ್ದರೆ ಸಾಕು ಸಮಾಜ ಸೇವಾ ಕ್ಷೇತ್ರದಲ್ಲಿ ಕೆಲಸ ಮಾಡಬಹುದು. ಯಾವುದೇ ಕಟ್ಟುಪಾಡುಗಳಿಲ್ಲದೆ ನೇರವಾಗಿ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬಹುದು ಎಂದರು.

ಸೇವಾ ಕ್ಷೇತ್ರದಲ್ಲಿ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಳ್ಳಬೇಕು. ಆಗ ಮಾತ್ರ ಸುಧಾರಣೆ ಸಾಧ್ಯ. ಆ ಮೂಲಕ ಸಮಾಜದಲ್ಲಿ ಕಾಡುವ ಸಮಸ್ಯೆಗಳನ್ನು ಬಗೆಹರಿಸಬಹುದಾಗಿದೆ. ಈಗಲೂ ಸಮಾಜದಲ್ಲಿ ತಾರತಮ್ಯ ನೀತಿ, ಅಸಮಾನತೆ ಎದ್ದು ಕಾಣುತ್ತಿದೆ. ಅದನ್ನು ಕಟ್ಟುನಿಟ್ಟಾಗಿ ನಿವಾರಿಸಬೇಕಾಗಿದೆ. ಅದರೊಂದಿಗೆ ಪರಿಸರದ ಮೇಲಿನ ದೌರ್ಜನ್ಯ, ಮಾಲಿನ್ಯ ಸೇರಿದಂತೆ ಅನೇಕ ಸಮಸ್ಯೆಗಳಿದ್ದು, ಅವುಗಳ ನಿರ್ಮೂಲನೆಗೆ ಯುವಜನರು ಪಣತೊಡಬೇಕು. ಯುವ ಜನರ ಮೇಲೆ ಹೆಚ್ಚಿನ ಜವಾಬ್ದಾರಿಯಿದ್ದು, ಬದ್ಧತೆಯಿಂದ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಪೂಜಾ ಭಗವತ್ ಮೆಮೋರಿಯಲ್ ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ.ಸಿ.ಕೆ.ರೇಣುಕಾರ್ಯ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಯುವ ಜನರು ದುಶ್ಚಟಗಳತ್ತ ವಾಲುತ್ತಿದ್ದಾರೆ. ಯುವಶಕ್ತಿಯನ್ನು ಸಕಾರಾತ್ಮಕವಾಗಿ ಕೊಂಡೊಯ್ಯುವ ಅಗತ್ಯವಿದೆ. ದುಶ್ಚಟಗಳಿಂದಾಗಿ ಸಾಧನೆ ಮಾಡಲು ಯುವ ಜನರು ಹಿನ್ನಡೆ ಅನುಭವಿಸುತ್ತಿದ್ದಾರೆ. ಮೊಬೈಲ್, ಸಾಮಾಜಿಕ ಜಾಲತಾಣಗಳ ಬಳಕೆಯಲ್ಲಿ ಮುಳುಗುತ್ತಿದ್ದಾರೆ. ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರಲು ಶ್ರಮಿಸಬೇಕು ಎಂದು ತಿಳಿಸಿದರು.

ರಾಷ್ಟ್ರೀಯ ಯುವಜನ ದಿನಾಚರಣೆಯ ಅಂಗವಾಗಿ 'ಆಧುನಿಕ ಜೀವನ ಶೈಲಿಯನ್ನು ಬದಲಾಯಿಸುವುದರಿಂದ ಪರಿಸರ ಸಂರಕ್ಷಣೆ ಮಾಡಬಹುದೇ?' ವಿಷಯದ ಕುರಿತು ಆಯೋಜಿಸಿದ್ದ ಚರ್ಚಾ ಸ್ಪರ್ಧೆಯಲ್ಲಿ ಕಾಲೇಜಿನ 12 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಆರ್‌ಎಲ್‌ಹೆಚ್‌ಪಿ ಸಂಸ್ಥೆಯ ನಿರ್ದೇಶಕಿ ಸರಸ್ವತಿ, ಸಮಾಜ ಕಾರ್ಯ ವಿಭಾಗದ ಮುಖ್ಯಸ್ಥರಾದ ಡಾ. ಭಾವನಾ ಸೇರಿದಂತೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಅರ್ಜಿ ಆಹ್ವಾನ

ಮೈಸೂರು ಜ.31–ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು(ಕಾವಾ), 2023–24ನೇ ಶೈಕ್ಷಣಿಕ ಸಾಲಿಗೆ ಮಾತ್ರ ಸಂಪನ್ಮೂಲ ವ್ಯಕ್ತಿಗಳಾಗಿ ಬೋಧನೆ ಮಾಡಲು ಇಚ್ಛಿಸುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಬಿಎಎ, ಎಂವಿಎ ವಿದ್ಯಾರ್ಥಿಗಳಿಗೆ ಭಾರತ ಸಂವಿಧಾನ ಎ.ಇ.ಸಿ.ಸಿ ಬೋಧನಾ ವಿಷಯವಾಗಿದ್ದು, ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಕಾನೂನು ವಿಷಯದಲ್ಲಿ (ಎಲ್‌ಎಲ್‌ಎಂ) ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇ.55ರಷ್ಟು ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು.

ಆಯ್ಕೆಯಾಗುವ ಸಂಪನ್ಮೂಲ ವ್ಯಕ್ತಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಿಗದಿಪಡಿಸಿರುವ ಪ್ರತಿ ಗಂಟೆಗೆ ರೂ. 500 ಗಳಂತೆ ಪ್ರತಿ ಮಾಹೆಗೆ ಗರಿಷ್ಠ ರೂ. 10,500 ಮೀರದಂತೆ ಗೌರವ ಸಂಭಾವನೆಯನ್ನು ನೀಡಲಾಗುವುದು. ಅರ್ಜಿ ಸಲ್ಲಿಸಲು ಫೆ.8 ಕೊನೆಯ ದಿನಾಂಕ.

ಫೆ.9ರಂದು ಬೆಳಗ್ಗೆ 11 ಗಂಟೆಗೆ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ)ದಲ್ಲಿ ಸಂದರ್ಶನ ನಡೆಸಲಾಗುವುದು. ಆಸಕ್ತರು ಕರ್ನಾಟಕ ಸರ್ಕಾರದ www.mysore.nic.in ಮತ್ತು www.cavamysore.karnataka.gov.in ಅಂತರ್ಜಾಲದ ಮೂಲಕ ಮಾಹಿತಿಯನ್ನು ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0821–2438931 ಅನ್ನು ಸಂಪರ್ಕಿಸಬಹುದು ಎಂದು ಕಾವಾ ಸಂಸ್ಥೆಯ ಡೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಎಚ್.ಡಿ ಪದವೀಧರೆ


ಮೈಸೂರು, ಜ. 31– ಡಾ. ಎಸ್.ಟಿ. ರಾಮಚಂದ್ರ ಅವರ ಮಾರ್ಗದರ್ಶನದಲ್ಲಿ ಜಿ.ವಿಜಯಲಕ್ಷ್ಮಿ ಅವರು ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಮೈಸೂರು ಮಿತ್ರ ಗುರುವಾರ 1 ಫೆಬ್ರವರಿ 2024

ಹಾಡಿ ಜನರ ಸಂಕಷ್ಟದ ಜೀವನ ಕಂಡು ಮರುಗಿದ ನಾರಾಯಣಸ್ವಾಮಿ

ಬಾಳುಗೋಡು ಯರವ ಹಾಡಿ ಜನರೊಂದಿಗೆ ಮಾನವ ಹಕ್ಕು ಆಯೋಗದ ಅಧ್ಯಕ್ಷರ ಸಂವಾದ



ಬಿಟ್ಟಂಗಾಲ ಗ್ರಾಪಂ ವ್ಯಾಪ್ತಿಯ ಬಾಳುಗೋಡು ಯರವ ಹಾಡಿಗೆ ಭೇಟಿ ನೀಡಿದ ಮಾನವ ಹಕ್ಕು ಆಯೋಗದ ಅಧ್ಯಕ್ಷ ಎಲ್.ನಾರಾಯಣಸ್ವಾಮಿ, ಸದಸ್ಯರಾದ ಎಸ್.ಕೆ.ವಂಟಿಗೋಡಿ ಹಾಗೂ ಟಿ.ಶ್ಯಾಮ್ ಭಟ್ ಹಾಡಿಯ ಜನರಿಂದ ಜೀವನ ದೂಡುತ್ತಿರುವುದನ್ನು ವಿಚಾರಿಸಿದರು.

ವಿರಾಜಪೇಟೆ, ಜ.31–ವಿರಾಜಪೇಟೆ ಬಳಿಯ ಬಿಟ್ಟಂಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಾಳುಗೋಡು ಯರವ ಹಾಡಿಗೆ ಬುಧವಾರ ಮಾನವ ಹಕ್ಕು ಆಯೋಗದ ಅಧ್ಯಕ್ಷ ಎಲ್.ನಾರಾಯಣಸ್ವಾಮಿ, ಸದಸ್ಯರಾದ ಎಸ್.ಕೆ.ವಂಟಿಗೋಡಿ ಹಾಗೂ ಟಿ.ಶ್ಯಾಮ್ ಭಟ್ ಭೇಟಿ ನೀಡಿ, ವಸತಿ ರಹಿತ ಕುಟುಂಬದವರೊಂದಿಗೆ ಸಂವಾದ ನಡೆಸಿದರು.

ಇದೇ ವೇಳೆ ನಿವೇಶನ, ಹಾಡಿಯ ಜನರಿಗೆ ಮನೆ ಇಲ್ಲದಿರುವುದು, ಕುಡಿಯುವ ನೀರು, ವಿದ್ಯುತ್, ಸಾರಿಗೆ ಸಂಪರ್ಕ ಇಲ್ಲದಿರುವುದು, ಟಾರ್ಪಲ್ ಕಟ್ಟಿಕೊಂಡು ಜೀವನ ದೂಡುತ್ತಿರುವುದನ್ನು ಗಮನಿಸಿದ ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರು ಬೇಸರ ವ್ಯಕ್ತಪಡಿಸಿದರು.

ನಂತರ ಹಾಡಿ ಜನರೊಂದಿಗೆ ಸಂವಾದ ನಡೆಸಿದ ಆಯೋಗದ ಅಧ್ಯಕ್ಷ ಎಲ್.ನಾರಾಯಣಸ್ವಾಮಿ, ಮಕ್ಕಳನ್ನು ಕಡ್ಡಾಯವಾಗಿ ಹತ್ತಿರದಲ್ಲೇ ಇರುವ ಏಕಲವ್ಯ ಮಾದರಿ ವಸತಿ ಶಾಲೆಗೆ ಸೇರಿಸಬೇಕು. ಶಿಕ್ಷಣದಿಂದ ಯಾರೂ ವಂಚಿತರಾಗಬಾರದು. ಶಿಕ್ಷಣದಿಂದ ಮಾತ್ರ ಸಮಾಜದಲ್ಲಿ ಬದಲಾವಣೆ ಕಾಣಲು ಸಾಧ್ಯ. ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ನೀಡುವಂತೆ ಸಲಹೆ ನೀಡಿದರು.

ಇದೇ ವೇಳೆ ಹಾಡಿಯ ಯರವ ಸಮುದಾಯದ ಶೋಭಾ ಮಾತನಾಡಿ, ಜಿಲ್ಲೆಯ ವಿವಿಧ ಭಾಗದ ಲೈನ್‌ಮನೆಗಳಲ್ಲಿ ಕೂಲಿ ಮಾಡಿಕೊಂಡು ಜೀವನ ದೂಡುತ್ತಿದ್ದೇವೆ. ಸದ್ಯ ಕಳೆದ 6 ವರ್ಷಗಳಿಂದ ಬಾಳುಗೋಡು ಪೈಸಾರಿ ಜಾಗದಲ್ಲಿ ಟಾರ್ಪಲ್ ಹೊದಿಕೆಯಿಂದ ಚಳಿ, ಮಳೆ, ಗಾಳಿಯನ್ನು ಎದುರಿಸಿ ವಾಸ ಮಾಡುತ್ತಿದ್ದೇವೆ. ನಮಗೆ ನಿವೇಶನ ಹಕ್ಕುಪತ್ರ ನೀಡಿಲ್ಲ, ಮನೆ ಇಲ್ಲ, ರಾತ್ರಿ ಹಾವುಗಳ ಭಯದಿಂದ ಎಚ್ಚರವಾಗಿ ನಿದ್ರೆಯಿಲ್ಲದೆ ದಿನ ಕಳೆಯುತ್ತಿದ್ದು, ಬದುಕು ಸಂಕಷ್ಟವಾಗಿದೆ ಎಂದು ಅಳಲು ತೋಡಿಕೊಂಡರು.

ಆಹಾರ ಇಲಾಖೆಯಿಂದ ನೀಡುತ್ತಿರುವ 5 ಕೆಜಿ ಅಕ್ಕಿ ಸಾಲುತ್ತಿಲ್ಲ. ಸುತ್ತಮುತ್ತಲಿನ ಕಾಫಿ ತೋಟಗಳಲ್ಲಿ ಕೂಲಿ ಮಾಡಿದರೆ ಮಾತ್ರ ಊಟ. ಇಲ್ಲದಿದ್ದಲ್ಲಿ ಉಪವಾಸದಿಂದ ಮಲಗಬೇಕಾದ ಪರಿಸ್ಥಿತಿ ಇದೆ ಎಂದು ನೋವು ತೋಡಿಕೊಂಡರು. ಕುಡಿಯುವ ನೀರನ್ನು 1 ಕಿಮೀ ದೂರದಿಂದ ಹೊತ್ತುಕೊಂಡು ಬರುತ್ತಿದ್ದೇವೆ. ವಿದ್ಯುತ್ ಸಂಪರ್ಕ ಇಲ್ಲದೆ ಪರಿತಪಿಸುತ್ತಿದ್ದೇವೆ. ಆದ್ದರಿಂದ ಕೂಡಲೇ ಕುಡಿಯುವ ನೀರು ಒದಗಿಸಬೇಕು. ಹಾಗೆಯೇ ನಿವೇಶನ ಹಕ್ಕುಪತ್ರ ದೊರೆಯಬೇಕು. ಜೊತೆಗೆ ಮನೆ ನಿರ್ಮಿಸಿಕೊಡಬೇಕು ಎಂದು ಮಾನವ ಹಕ್ಕು ಆಯೋಗದ ಅಧ್ಯಕ್ಷರಲ್ಲಿ ಯರವ ಕುಟುಂಬಸ್ಥರು ಮನವಿ ಮಾಡಿದರು.

ಬಳಿಕ ಮಾತನಾಡಿದ ಮಾನವ ಹಕ್ಕು ಆಯೋಗದ ಸದಸ್ಯ ಎಸ್.ಕೆ.ವಂಟಿಗೋಡಿ, ಇಂದಿನಿಂದಲೇ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಸಲಾಗುವುದು. ಕಂದಾಯ ಇಲಾಖೆಯಿಂದ ಜಾಗವನ್ನು ತಾಲೂಕು ಪಂಚಾಯಿತಿಗೆ ನೀಡಲಾಗಿದ್ದು, ಲೇಔಟ್ ನಿರ್ಮಾಣವಾದ ನಂತರ ಹಕ್ಕುಪತ್ರ ವಿತರಣೆಗೆ ಕ್ರಮವಹಿಸಲಾಗುವುದು. ಈ ಎಲ್ಲಾ ಕೆಲಸಗಳು 20 ದಿನದಲ್ಲಿ ಆಗಬೇಕು. ಇಲ್ಲಿನ ಸ್ಥಿತಿಗತಿ ಹಾಗೂ ಪ್ರತಿ ಸಂಬಂಧ ಆಗಾಗ ಮಾಹಿತಿ ಪಡೆಯಲಾಗುವುದು ಎಂದು ಹೇಳಿದರು.

ಐಟಿಡಿಪಿ ಇಲಾಖೆಯ ಅಧಿಕಾರಿ ಹೊನ್ನೇಗೌಡ ಮಾತನಾಡಿ, ಹಾಡಿಯ ಮಕ್ಕಳ ವಸತಿ ಶಾಲೆ ಸೇರ್ಪಡೆಗೆ ಕ್ರಮವಹಿಸಲಾಗುವುದು. ಯರವ ಸಮುದಾಯದವರಿಗೆ ಮನೆ ನಿರ್ಮಿಸಿಕೊಡುವ ನಿಟ್ಟಿನಲ್ಲಿ ಅಗತ್ಯ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಮಾನವ ಹಕ್ಕು ಆಯೋಗಕ್ಕೆ ತಿಳಿಸಿದರು. ಇದೇ ವೇಳೆ ಉಪವಿಭಾಗಾಧಿಕಾರಿ ವಿನಾಯಕ ನರ್ವಾಡೆ, ತಹಶೀಲ್ದಾರ್ ರಾಮಚಂದ್ರ, ಪೊಲೀಸ್ ಅಧಿಕಾರಿಗಳು, ಯರವ, ಪಣಿಯ ಆದಿವಾಸಿ ಜನರು ಇದ್ದರು.

ನಿವೇಶನ ಒದಗಿಸಲು ಗ್ರಾಮಸಭೆಯಲ್ಲಿ ನಿರ್ಧಾರ

ಗ್ರಾಮಸಭೆಯಲ್ಲಿ ನಿರ್ಧರಿಸಿ ನಿವೇಶನ ಒದಗಿಸಲು ಮುಂದಾಗಲಾಗುವುದಾಗಿ ತಾಪಂ ಇಓ ಅಪ್ಪಣ್ಣ ಹಾಗೂ ಬಿಟ್ಟಂಗಾಲ ಗ್ರಾಪಂ ಪಿಡಿಓ ವಿಶ್ವನಾಥ್ ಮಾಹಿತಿ ನೀಡಿದರು. ಬೆಂಗಳೂರಿನ ನೈಜ ಹೋರಾಟಗಾರ ಎಚ್.ಎಂ.ವೆಂಕಟೇಶ್ ಮಾತನಾಡಿ, ಬಾಳುಗೋಡುವಿನಲ್ಲಿ ಯರವ ಹಾಡಿಯಲ್ಲಿ 21 ಕುಟುಂಬಗಳಿದ್ದು, ಪ್ರತಿ ಕುಟುಂಬಕ್ಕೂ ಕನಿಷ್ಠ 5 ಸೆಂಟ್ ಜಾಗ ನೀಡಬೇಕು. ಕುರಿ, ಕೋಳಿ, ಹಂದಿ ಸಾಕಾಣಿಕೆಗೆ ಸಹಕಾರ ನೀಡಬೇಕು. ಆ ನಿಟ್ಟಿನಲ್ಲಿ ಅಗತ್ಯ ಸಹಕಾರ ನೀಡುವಂತೆ ಮನವಿ ಮಾಡಿದರು. ಇದಕ್ಕೆ ಹೋರಾಟಗಾರ ನಂಜರಾಜ ಅರಸು ಧ್ವನಿಗೂಡಿಸಿದರು. ಇದೇ ವೇಳೆ ಪ್ರಮುಖರಾದ ಗಪ್ಪು, ಕುಣಿಗಲ್ ನರಸಿಂಹ ಮೂರ್ತಿ, ಕುಣಿಗಲ್ ನಾಗರಾಜ್ ಇಲ್ಲಿನ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿದರು.

ವಿರಾಜಪೇಟೆಯಲ್ಲಿ ಸಾರ್ವಜನಿಕರ ಅಹವಾಲು ಸ್ವೀಕಾರ



ವಿರಾಜಪೇಟೆ ತಹಶೀಲ್ದಾರ್ ಕಚೇರಿಯಲ್ಲಿ ರಾಜ್ಯ ಮಾನವ ಹಕ್ಕು ಆಯೋಗದ ಅಧ್ಯಕ್ಷ ಎಲ್.ನಾರಾಯಣಸ್ವಾಮಿ, ಸದಸ್ಯರಾದ ಎಸ್.ಕೆ.ವಂಟಿಗೋಡಿ ಹಾಗೂ ಟಿ.ಶ್ಯಾಮ್ ಭಟ್ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

ವಿರಾಜಪೇಟೆ ತಹಶೀಲ್ದಾರ್ ಕಚೇರಿಯಲ್ಲಿ ರಾಜ್ಯ ಮಾನವ ಹಕ್ಕು ಆಯೋಗದ ಅಧ್ಯಕ್ಷ ಎಲ್.ನಾರಾಯಣಸ್ವಾಮಿ, ಸದಸ್ಯರಾದ ಎಸ್.ಕೆ.ವಂಟಿಗೋಡಿ ಹಾಗೂ ಟಿ.ಶ್ಯಾಮ್ ಭಟ್ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

ಇದಕ್ಕೂ ಮೊದಲು ಮಾತನಾಡಿದ ಆಯೋಗದ ಅಧ್ಯಕ್ಷ ಎಲ್.ನಾರಾಯಣಸ್ವಾಮಿ, ಬಾಳುಗೋಡುಯರವ ಕುಟುಂಬದವರು ವಾಸ ಮಾಡುತ್ತಿರುವುದನ್ನು ಗಮನಿಸಿ ವಿಚಲಿತನಾದೆ. ಆದಿವಾಸಿ ಜನರಿಗೆ ಬೇಕಿರುವ ನಿವೇಶನ, ಮನೆ, ದೀಪ, ಹತ್ತಿರದ ಅಂಗನವಾಡಿ, ಶಾಲೆಗಳಲ್ಲಿ ಕನಿಷ್ಠ ಮೂಲಸೌಲಭ್ಯ ಇಲ್ಲದಿರುವುದು ನಮ್ಮ ವ್ಯವಸ್ಥೆ ಯಾವ ಮಟ್ಟಕ್ಕೆ ಇದೆ ಎಂಬುದನ್ನು ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಬೇಕಿದೆ ಎಂದು ತಿಳಿಸಿದರು.

ಆಯೋಗದ ಸದಸ್ಯ ಎಸ್.ಕೆ.ವಂಟಿಗೋಡಿ ಮಾತನಾಡಿ, ಇಲ್ಲಿನ ಬಾಳುಗೋಡು ಯರವ ಹಾಡಿಯ ಜನರ ಸ್ಥಿತಿಗತಿಯನ್ನು ಗಮನಿಸಲಾಗಿದೆ. ಮಾನವ ಹಕ್ಕು ಉಲ್ಲಂಘನೆಯಾಗಿರುವುದು ಕಂಡು ಬಂದಿದೆ. ಮಾನವ ಹಕ್ಕು ಉಲ್ಲಂಘನೆಯಾಗದಂತೆ ಗಮನಹರಿಸಬೇಕಿತ್ತು. ಆದರೆ, ಈ ಕಾರ್ಯ ಆಗಿಲ್ಲ ಎಂದು ಹೇಳಿದರು.

ಮತ್ತೊಬ್ಬ ಸದಸ್ಯ ಶ್ಯಾಮ್ ಭಟ್ ಮಾತನಾಡಿ, ಮಾನವ ಹಕ್ಕು ಸಂಬಂಧಿಸಿದಂತೆ ನಾಗರಿಕರಲ್ಲಿ ಅರಿವು ಇರಬೇಕು. ಬಾಳುಗೋಡು ಯರವ ಕುಟುಂಬದವರಿಗೆ ಸರ್ಕಾರದಿಂದ ಸಿಗಬೇಕಾದ ಸೌಲಭ್ಯಗಳು ತಲುಪಿಲ್ಲ. ಅಧಿಕಾರಿಗಳು ಈ ನಿಟ್ಟಿನಲ್ಲಿ ಮನಸ್ಸು ಮಾಡಬೇಕು ಎಂದರು.

ಬಳಿಕ ಮಾನವ ಹಕ್ಕು ಉಲ್ಲಂಘನೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣಗಳನ್ನು ವಿಚಾರಣೆ ನಡೆಸಿದರು. ಉಪವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಮಾನವ ಹಕ್ಕು ಆಯೋಗದ ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಅರುಣ್ ಪೂಜಾರ್, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು. ಅಹವಾಲು ಸ್ವೀಕರಿಸುವುದಕ್ಕೂ ಮೊದಲು ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿಪಂ ಸಿಇಓ ವರ್ಣಿತ್ ನೇಗಿ ಅವರೊಂದಿಗೆ ಮಾನವ ಹಕ್ಕು ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು ಬಾಳುಗೋಡು ಯರವ ಹಾಡಿ ಸೇರಿದಂತೆ ಹಲವು ವಿಚಾರಗಳ ಕುರಿತು ಚರ್ಚಿಸಿದರು.

ಕೇಂದ್ರ ಸರ್ಕಾರದಿಂದ ಪ್ರತಿ ಪ್ರಜೆಗೆ 4.50 ಲಕ್ಷ ಸಾಲ

ಮಡಿಕೇರಿ, ಜ.31– ಪ್ರಧಾನಿ ಮೋದಿ ಅವರು ದಿನದ 18 ಗಂಟೆ ದುಡಿಯುತ್ತಿದ್ದಾರೆ, ದೇಶ ಅಭಿವೃದ್ಧಿ ಹೊಂದುತ್ತಿದೆ ಎಂದು ಬಿಜೆಪಿಯವರು ಹೇಳಿಕೊಳ್ಳುತ್ತಿದ್ದಾರೆ. ಆದರೆ, ದೇಶದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕಾಣುತ್ತಿಲ್ಲ. ಬದಲಿಗೆ ಪ್ರತಿಯೊಬ್ಬ ಪ್ರಜೆಯ ತಲೆಗೆ 4.50 ಲಕ್ಷ ರೂ. ಸಾಲದ ಹೊರೆಯನ್ನು ಹಾಕಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2014ರ ಮಾರ್ಚ್ ವರೆಗೆ ದೇಶದ ಸಾಲ 53.11 ಲಕ್ಷ ಕೋಟಿ ರೂ. ಇತ್ತು. ಆದರೆ, ಈಗ ಈ ಮೊತ್ತ 173 ಲಕ್ಷ ಕೋಟಿ ರೂ. ಆಗಿದೆ. 25 ಲಕ್ಷ ಕೋಟಿಯಷ್ಟು ಆರ್‌ಬಿಐ ಸಾಲ ಸೇರಿ ಕಳೆದ 10 ವರ್ಷಗಳಲ್ಲಿ ಸಾಲದ ಮೊತ್ತ ಒಟ್ಟು 258 ಲಕ್ಷ ಕೋಟಿಯಾಗಿದೆ ಎಂದರು. ಕರ್ನಾಟಕ ತೆರಿಗೆ ವಸೂಲಿಯಲ್ಲಿ ಎರಡನೇ ಸ್ಥಾನದಲ್ಲಿದ್ದು, ವಾರ್ಷಿಕ ಕೇಂದ್ರಕ್ಕೆ 4 ಲಕ್ಷದ 81 ಸಾವಿರ ಕೋಟಿ ರೂ. ತೆರಿಗೆಯನ್ನು ಪಾವತಿಸುತ್ತಿದೆ. ನೀತಿ ಆಯೋಗದ ಪ್ರಕಾರ ಶೇ.40ರಷ್ಟು ಹಣವನ್ನು ನಮ್ಮ ರಾಜ್ಯಕ್ಕೆ ನೀಡಬೇಕಿತ್ತು. ಆದರೆ, ಕೇಂದ್ರ ಕೇವಲ ಶೇ.10ರಷ್ಟು ನೀಡಿದೆ. ಕೇಂದ್ರ ಸರ್ಕಾರ ನಿರಂತರವಾಗಿ ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದು ದೂರಿದರು.

ರಾಜ್ಯದ ರೈತರು ಹಾಗೂ ಜನರು ಬರದಿಂದ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೇಂದ್ರದ ಬರ ಅಧ್ಯಯನ ತಂಡ ರಾಜ್ಯದಲ್ಲಿ 35 ಸಾವಿರ ಕೋಟಿ ರೂ.ನಷ್ಟು ನಷ್ಟ ಸಂಭವಿಸಿದೆ ಎಂದು ವರದಿ ನೀಡಿದರೂ ಕೇಂದ್ರ ಇಲ್ಲಿಯವರೆಗೆ 35 ಪೈಸೆಯನ್ನು ಕೂಡ ಪರಿಹಾರವಾಗಿ ನೀಡಿಲ್ಲ. ಬಿಜೆಪಿ ರಾಜ್ಯದಲ್ಲಿ ಕೋಮು ಸಂಘರ್ಷಕ್ಕೆ ಮುಂದಾಗಿದ್ದು, ಕರಾವಳಿಯ ಕೋಮು ಪ್ರಯೋಗಾಲಯವನ್ನು ಮಂಡ್ಯದಲ್ಲಿ ಪ್ರಯೋಗಿಸಲು ಮುಂದಾಗಿದೆ. ಹಸಿರು ಶಾಲಿಗೆ ಹೆಸರುವಾಸಿಯಾಗಿದ್ದ ಮಂಡ್ಯದಲ್ಲಿ ಕೇಸರಿ ಶಾಲನ್ನು ಪ್ರಯೋಗಿಸುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಇದೇ ಸಂದರ್ಭ ಲಕ್ಷ್ಮಣ್ ಕೇಂದ್ರ ಸರ್ಕಾರದಿಂದ ಕಳೆದ 5 ವರ್ಷಗಳಲ್ಲಿ ಕರ್ನಾಟಕಕ್ಕೆ ಆಗಿರುವ ಅನ್ಯಾಯಗಳು ಎಂಬ ಪತ್ರವನ್ನು ಬಿಡುಗಡೆ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಸುರಯ್ಯ ಅಬ್ರಾರ್, ಕೆಪಿಸಿಸಿ ಸದಸ್ಯ ಬೇಕಲ್ ರಮಾನಾಥ್, ಸಾಮಾಜಿಕ ಜಾಲತಾಣದ ಅಧ್ಯಕ್ಷ ಸೂರಜ್ ಹೊಸೂರು ಹಾಗೂ ಮಾಧ್ಯಮ ಸಂಯೋಜಕ ಮಹೇಶ್ ಮೈಸೂರು ಉಪಸ್ಥಿತರಿದ್ದರು.

ಕೂಡಿಗೆ ಶನೇಶ್ವರ ದೇಗುಲಕ್ಕೆ ಸುತ್ತೂರು ಶ್ರೀಗಳ ಭೇಟಿ



ಸುತ್ತೂರು ಮಠಾಧ್ಯಕ್ಷರಾದ ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಕುಶಾಲನಗರದ ಶನೇಶ್ವರ ದೇವಾಲಯದ ಧರ್ಮದರ್ಶಿ ಎಲ್ಲೂಬಾಯಿ ಅವರ ಅನಾರೋಗ್ಯ ವಿಚಾರಿಸಿದರು.

ಕುಶಾಲನಗರ, ಜ.31–ಇಲ್ಲಿನ ಶನೇಶ್ವರ ದೇವಾಲಯಕ್ಕೆ ಸುತ್ತೂರು ಮಠಾಧ್ಯಕ್ಷರಾದ ಶ್ರೀ ಶಿವರಾತ್ರಿ ದೇಶೀಕೇಂದ್ರಸ್ವಾಮೀಜಿ ಬುಧವಾರ ಭೇಟಿ ನೀಡಿದರು.

ಇದೇ ವೇಳೆ ದೇವಾಲಯದ ಧರ್ಮದರ್ಶಿ ಶತಮಾನದ ಆಸುಪಾಸಿನಲ್ಲಿರುವ ಎಲ್ಲೂಬಾಯಿ ಅವರ ಅನಾರೋಗ್ಯ ವಿಚಾರಿಸಿದರು. ನಂತರ ಮಾತನಾಡಿದ ಶ್ರೀಗಳು, ದೇವಾಲಯದ ಧರ್ಮದರ್ಶಿ ಎಲ್ಲೂಬಾಯಿ ಅವರು ಶ್ರೀ ರಾಜೇಂದ್ರ ಸ್ವಾಮೀಜಿಗಳಿಂದ ಶಿವದೀಕ್ಷೆ ಪಡೆದಿದ್ದಾರೆ. ಇವರಿಗೆ ವೈದ್ಯಕೀಯ ನೆರವು ನೀಡುವುದಾಗಿ ಹೇಳಿದರು.

ಅರಮೇರಿ ಮಠದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಕೊಡ್ಲಿಪೇಟೆಯ ಕಿರಿಕೊಡ್ಲಿ ಮಠದ ಶ್ರೀ ಸದಾಶಿವ ಸ್ವಾಮೀಜಿ, ತೊರೆನೂರು ಮಠದ ಶ್ರೀ ಮಲ್ಲೇಶ ಸ್ವಾಮೀಜಿ, ಕೊಡಗು ವಚನ ಸಾಹಿತ್ಯ ವೇದಿಕೆ ಅಧ್ಯಕ್ಷ ಕೆ.ಎಸ್.ಮೂರ್ತಿ, ಬಸವನಹಳ್ಳಿ ಲ್ಯಾಂಪ್ಸ್ ಅಧ್ಯಕ್ಷ ಅರುಣ್ ರಾವ್, ದೇವಾಲಯದ ಪ್ರಮುಖರಾದ ಸುನಿಲ್ ರಾವ್, ಕಾಂಗ್ರೆಸ್ ಮುಖಂಡ ವಿ.ಪಿ.ಶಶಿಧರ್ ಮತ್ತಿತರರಿದ್ದರು.

ಕಾಫಿ ಕಣದಲ್ಲಿ 2 ನಾಗರಹಾವು ಪತ್ತೆ



ಸಿದ್ದಾಪುರ, ಜ.31– ಗುಹ್ಯ ಗ್ರಾಮದ ನಂದ ಅವರ ತೋಟದ ಕಾಫಿ ಕಣದಲ್ಲಿ ಬುಧವಾರ ಎರಡು ನಾಗರಹಾವುಗಳು ಪತ್ತೆಯಾಗಿವೆ. ನಂತರ ಉರಗ ರಕ್ಷಕ ಸುರೇಶ್ ಪೂಜಾರಿಗೆ ಮಾಹಿತಿ ನೀಡಿದ ಹಿನ್ನೆಲೆ ಸ್ಥಳಕ್ಕೆ ಬಂದ ಸುರೇಶ್ ದೊಡ್ಡ ಗಾತ್ರದ ನಾಗರಹಾವುಗಳನ್ನು ಸೆರೆಹಿಡಿದು, ಮಾಲ್ದಾರೆ ಅರಣ್ಯಕ್ಕೆ ಬಿಟ್ಟರು.

ಬಾಲ್ಯವಿವಾಹ ನಿಷೇಧ ಪರಿಣಾಮಕಾರಿ ಅನುಷ್ಠಾನಗೊಳಿಸಿ

ವಿವಿಧ ಕಾರ್ಯಕ್ರಮಗಳ ಸಭೆಯಲ್ಲಿ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಶಿಲ್ಪನಾಗ್ ಸೂಚನೆ



ಚಾಮರಾಜನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶಿಲ್ಪನಾಗ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅಧಿಕಾರಿಗಳು ಮಾಹಿತಿ ನೀಡಿದರು. ನ್ಯಾಯಾಧೀಶ ಎಂ.ಶ್ರೀಧರ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಇಂದುಶೇಖರ್ ಇದ್ದರು.

> ಕೌಟುಂಬಿಕ ಹಿಂಸೆಯಿಂದ ತೊಂದರೆಗೊಳಗಾದ ಮಹಿಳೆಯರ ಪ್ರಕರಣಗಳಲ್ಲಿ ಕೌಟುಂಬಿಕ ಘಟನಾ (ಡಿಐಆರ್) ವರದಿಯನ್ನು ಸಲ್ಲಿಸಬೇಕು. ಮಹಿಳೆಯರ ಸಂರಕ್ಷಣೆ ವಿಷಯದಲ್ಲಿ ನೀಡಲಾಗುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಬಾಲ್ಯ ವಿವಾಹ ಪ್ರಕರಣಗಳಲ್ಲಿ ಪ್ರಥಮ ವರ್ತಮಾನ ವರದಿ, ಕಾನೂನಾತ್ಮಕ ಪ್ರಕ್ರಿಯೆಗಳ ವಿಳಂಬಕ್ಕೆ ಅವಕಾಶವಿಲ್ಲದೆ ತಕ್ಷಣ ಕೈಗೊಳ್ಳಬೇಕು.
>
> -ಎಂ.ಶ್ರೀಧರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ

ಚಾಮರಾಜನಗರ, ಜ.31–ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣೆ, ಬಾಲ್ಯ ವಿವಾಹ ನಿಷೇಧ ಹಾಗೂ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಆಶ್ರಯ ನೆರವು ನೀಡುವ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಶಿಲ್ಪನಾಗ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣೆ, ಬಾಲ್ಯ ವಿವಾಹ ನಿಷೇಧ, ಸಖಿ ಒನ್ ಸ್ಟಾಪ್ ಸೆಂಟರ್ ನಿರ್ವಹಣೆ, ಮಹಿಳೆಯರು ಮತ್ತು ಮಕ್ಕಳ ಪೌಷ್ಟಿಕ ಆಹಾರ ವಿತರಣೆ ಸೇರಿದಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕುರಿತ ವಿವಿಧ ಕಾರ್ಯಕ್ರಮಗಳ ಸಭೆಯಲ್ಲಿ ಮಾತನಾಡಿದ ಅವರು, ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣೆ ಕಾಯ್ದೆಯನ್ವಯ ಮಹಿಳೆಯರಿಗೆ ರಕ್ಷಣೆ ನೀಡುವ ಕಾರ್ಯವನ್ನು ಸಮರ್ಪಕವಾಗಿ ಕೈಗೊಳ್ಳಬೇಕು. ನೊಂದ ಮಹಿಳೆಯರಿಗೆ ಸಾಂತ್ವನ ಕೇಂದ್ರಗಳು ನೆರವಿಗೆ ಬರಬೇಕು. ಮಹಿಳೆಯರಿಗಾಗಿ ಇರುವ ಕಾರ್ಯಕ್ರಮಗಳು ಚಾಚು ತಪ್ಪದೇ ಅನುಷ್ಠಾನಕ್ಕೆ ತರಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಬಾಲ್ಯವಿವಾಹ ಪ್ರಕರಣಗಳಿಗೆ ಅವಕಾಶವಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಬಾಲ್ಯ ವಿವಾಹ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಶಾಲಾ–ಕಾಲೇಜುಗಳಲ್ಲಿ ಜಾಗೃತಿ ಮೂಡಿಸಬೇಕು. ಶಿಕ್ಷಕರು, ಉಪನ್ಯಾಸಕರ ನೆರವು ಪಡೆದು ಯಾವುದೇ ಪ್ರಕರಣಗಳು ನಡೆಯದಂತೆ ನಿಗಾ ವಹಿಸಬೇಕು ಎಂದು ಹೇಳಿದರು.

ಗರ್ಭಿಣಿಯರು, ಬಾಣಂತಿಯರು ಮತ್ತು ಮಕ್ಕಳಿಗೆ ಅಂಗನವಾಡಿಗಳಲ್ಲಿ ಪೌಷ್ಟಿಕ ಆಹಾರ ವಿತರಣೆ ಮಾರ್ಗಸೂಚಿ ಅನುಸಾರ ಆಗಬೇಕು. ಸರಬರಾಜಾಗುವ ಆಹಾರದ ಗುಣಮಟ್ಟ ಪರೀಕ್ಷಿಸಬೇಕು. ಅಂಗನವಾಡಿಗಳಲ್ಲಿ ಶುಚಿತ್ವ ಕಾಪಾಡಬೇಕು. ದೂರುಗಳು, ಯಾವುದೇ ಲೋಪಗಳು ಕಂಡು ಬಂದರೆ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಆರೋಗ್ಯ ತಪಾಸಣೆ, ಪೌಷ್ಟಿಕ ಆಹಾರ ವಿತರಣೆಗೆ ವಿಶೇಷ ಗಮನ ನೀಡಿ. ಆರೋಗ್ಯ ಇಲಾಖೆ ಸೇರಿದಂತೆ ಇತರೆ ಇಲಾಖೆಗಳ ಸಹಕಾರದೊಂದಿಗೆ ಮಕ್ಕಳ ಆರೋಗ್ಯ ವೃದ್ಧಿಗೆ ಇರುವ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮುಂದಾಗಿ. ಪ್ರತಿ ತಾಲೂಕಿನಲ್ಲಿ ಕನಿಷ್ಠ 50 ಅಂಗನವಾಡಿಗಳಲ್ಲಿ ಪೌಷ್ಟಿಕ ಕೈತೋಟಗಳನ್ನು ಅಭಿವೃದ್ಧಿಪಡಿಸುವ ಗುರಿ ಹಾಕಿಕೊಳ್ಳಿ, ತೋಟಗಾರಿಕೆ ಇಲಾಖೆಯ ಸಲಹೆ ಪಡೆದು ಅಗತ್ಯ ಕ್ರಮ ಕೈಗೊಳ್ಳಿ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕುರಿತ ವಿವಿಧ ಕಾರ್ಯಕ್ರಮಗಳ ಪ್ರಗತಿಯನ್ನು ಸುಧೀರ್ಘವಾಗಿ ಪರಿಶೀಲಿಸಲಾಯಿತು. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಇಂದುಶೇಖರ್, ಜಿಲ್ಲಾ ಪಂಚಾಯಿತಿ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಮಂಜುನಾಥ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಚಿದಂಬರ, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥ ಪ್ರಸನ್ನ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ಮತ್ತಿತರರು ಉಪಸ್ಥಿತರಿದ್ದರು.

ಸಿಂಚನಾರಿಂದ ಪ್ರಧಾನಿ ಸಮ್ಮುಖದಲ್ಲಿ ವಸ್ತುಪ್ರದರ್ಶನ ಮಾದರಿ ಪ್ರಸ್ತುತ




ದೆಹಲಿಯಲ್ಲಿ ನಡೆದ ಪರೀಕ್ಷಾ ಪೇ ಚರ್ಚಾ 7ನೇ ಆವೃತ್ತಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಸಮ್ಮುಖದಲ್ಲಿ ವಿಜ್ಞಾನ ವಸ್ತುಪ್ರದರ್ಶನ ಮಾದರಿ ಪ್ರಸ್ತುತಪಡಿಸಿದ ಚಾಮರಾಜನಗರದ ಹೊಂಡರಬಾಳು ನವೋದಯ ವಿದ್ಯಾರ್ಥಿನಿ ಎಸ್.ಸಿಂಚನಾ.

ಚಾಮರಾಜನಗರ, ಜ.31– ಜಿಲ್ಲೆಯ ಹೊಂಡರಬಾಳುವಿನ ಜವಾಹರ ನವೋದಯ ವಿದ್ಯಾಲಯದ ವಿದ್ಯಾರ್ಥಿನಿ ಎಸ್.ಸಿಂಚನಾ ದೆಹಲಿಯಲ್ಲಿ ನಡೆದ ಪರೀಕ್ಷಾ ಪೇ ಚರ್ಚಾ 7ನೇ ಆವೃತ್ತಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಸಮ್ಮುಖದಲ್ಲಿ ಸಂಶೋಧನಾತ್ಮಕ ವಿಜ್ಞಾನ ವಸ್ತುಪ್ರದರ್ಶನ ಮಾದರಿಯನ್ನು ಪ್ರಸ್ತುತಪಡಿಸಿದಳು.

ಜ.29ರಂದು ದೆಹಲಿಯಲ್ಲಿ ನಡೆದ ಪರೀಕ್ಷಾ ಪೇ ಚರ್ಚಾ 7ನೇ ಆವೃತ್ತಿಗೆ ನವೋದಯ ವಿದ್ಯಾಲಯದ 11ನೇ ತರಗತಿ ವಿದ್ಯಾರ್ಥಿನಿ ಎಸ್.ಸಿಂಚನಾ ರಾಷ್ಟ್ರಮಟ್ಟದ ವಿಜ್ಞಾನ ವಸ್ತುಪ್ರದರ್ಶನದಲ್ಲಿ ಆಯ್ಕೆಯಾಗಿದ್ದಳು. ವಸ್ತುಪ್ರದರ್ಶನ ಮಾದರಿಯನ್ನು ಜೀವಶಾಸ್ತ್ರ ಶಿಕ್ಷಕ ಟಿ.ಆರ್.ಶಶಿಧರ್ ಮಾರ್ಗದರ್ಶನದಲ್ಲಿ ಈಕೆ ಪ್ರಸ್ತುತ ಪಡಿಸಿ ಜಿಲ್ಲೆಗೆ ಕೀರ್ತಿ ತಂದಿದ್ದಾಳೆ ಎಂದು ನವೋದಯ ವಿದ್ಯಾಲಯದ ಪ್ರಾಂಶುಪಾಲ ವಿ.ಪ್ರಸಾದ್ ಸಂತಸ ವ್ಯಕ್ತಪಡಿಸಿದ್ದಾರೆ.

ಚಿಕ್ಕಲ್ಲೂರಿನಲ್ಲಿ ಪ್ರಾಣಿಬಲಿ ತಡೆ ಯಶಸ್ವಿ: ದಯಾನಂದಸ್ವಾಮೀಜಿ

ಚಾಮರಾಜನಗರ, ಜ.31– ಕೊಳ್ಳೇಗಾಲ ತಾಲೂಕಿನ ಚಿಕ್ಕಲ್ಲೂರು ಶ್ರೀ ಸಿದ್ದಪ್ಪಾಜಿ ಜಾತ್ರೆಯಲ್ಲಿ ಪ್ರಾಣಿಬಲಿ ತಡೆ ಸಂಪೂರ್ಣವಾಗಿ ಯಶಸ್ವಿಯಾಗಿದೆ. ಇದು



ಭಾರತೀಯ ಧಾರ್ಮಿಕ ಕ್ಷೇತ್ರದ ಮತ್ತೊಂದು ಐತಿಹಾಸಿಕ ಮೈಲಿಗಲ್ಲಾಗಿದೆ ಎಂದು ವಿಶ್ವಪ್ರಾಣಿ ಕಲ್ಯಾಣ ಮಂಡಳಿ, ಪಶು–ಪ್ರಾಣಿ ಬಲಿ ನಿರ್ಮೂಲನ ಜಾಗೃತಿ ಮಹಾಸಂಘದ ಅಧ್ಯಕ್ಷ ದಯಾನಂದಸ್ವಾಮಿ ಹೇಳಿದರು.

ಹೈಕೋರ್ಟ್ ಆದೇಶ ಮತ್ತು ಕರ್ನಾಟಕ ಪ್ರಾಣಿಬಲಿ ಪ್ರತಿಬಂಧಕ ಅಧಿನಿಯಮದಡಿ ಜಿಲ್ಲಾಡಳಿತ, ಪೊಲೀಸ್ ಇಲಾಖೆ, ದೇವಾಲಯ ಮತ್ತು ಆಡಳಿತ ಮಂಡಳಿ ಪ್ರಾಣಿಬಲಿ ತಡೆಯುವಲ್ಲಿ ಸಂಪೂರ್ಣ ಯಶಸ್ವಿಯಾಗಿದೆ. ಅವರಿಗೆ ಕೃತಜ್ಞತೆ ಸಲ್ಲಿಸುವುದಾಗಿ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಅಧಿಕಾರಿಗಳೊಂದಿಗೆ ಜಾತ್ರೆಯಲ್ಲೇ ಬೀಡುಬಿಟ್ಟು ಅಹಿಂಸಾ–ಪ್ರಾಣಿದಯಾ, ಆಧ್ಯಾತ್ಮ ಸಂದೇಶ ಯಾತ್ರೆ ಮೂಲಕ ಚಾಮರಾಜನಗರ, ಕೊಳ್ಳೇಗಾಲ, ಯಳಂದೂರು ಹಾಗೂ ಚಿಕ್ಕಲ್ಲೂರು ಜಾತ್ರಾ ಪರಿಸರ ಮತ್ತು ಸುತ್ತಮುತ್ತಲಿನ ಊರುಗಳಲ್ಲಿ ಪ್ರಾಣಿಬಲಿ ತಡೆದು, ಸಾತ್ವಿಕ ಪೂಜೆ ಸಲ್ಲಿಸಬೇಕು ಎಂದು ಭಕ್ತರಲ್ಲಿ ಮನವಿ ಮಾಡಲಾಗಿತ್ತು ಎಂದರು.

ಯಳಂದೂರು ತಾಲೂಕಿನ ಬಿಳಿಗಿರಿರಂಗನಾಥಸ್ವಾಮಿ ಹಾಗೂ ಕೊಡ್ಲೂರಿನ ಶ್ರೀ ಏಳುದಂಡೆ ಮುನೇಶ್ವರಸ್ವಾಮಿ ಜಾತ್ರೆಯಲ್ಲೂ ಪ್ರಾಣಿಬಲಿ ತಡೆಯುವಲ್ಲಿ ಜಿಲ್ಲಾಡಳಿತ ಯಶಸ್ವಿಯಾಗಿದೆ. ಶಿಂಷಾ ಮಾರಮ್ಮ, ಬೂದುಬಾಳು ವೆಂಕಟರಮಣಸ್ವಾಮಿ, ಕುರುಬನಕಟ್ಟೆ ಮಂಟೆಸ್ವಾಮಿ, ಕಪ್ಪಡಿ ಮುಂತಾದ ಧಾರ್ಮಿಕ ಸ್ಥಳಗಳಲ್ಲಿ ಯಾವುದೇ ಪ್ರಾಣಿಬಲಿ ನಡೆಯದಂತೆ ಹಾಗೂ ಜಾನುವಾರುಗಳ ಹತ್ಯೆ ಆಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಬಿಜೆಪಿ ಬೆಂಬಲಿತ 11 ನಿರ್ದೇಶಕರ ಗೆಲುವು



ಚಾಮರಾಜನಗರ ತಾಲೂಕಿನ ಮೂಡ್ನಾಕೂರು ಡೇರಿ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಬಿಜೆಪಿ ಬೆಂಬಲಿತ ನಿರ್ದೇಶಕರು.

ಚಾಮರಾಜನಗರ, ಜ.31–ತಾಲೂಕಿನ ಮೂಡ್ನಾಕೂರು ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕರ ಆಯ್ಕೆ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ 11 ನಿರ್ದೇಶಕರು ಗೆಲುವು ಸಾಧಿಸಿದ್ದಾರೆ.

ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳಾದ ಆರ್.ಸುರೇಶ, ಬಾಲಸುಬ್ರಮಣ್ಯ ಸ್ವಾಮಿ, ಎಂ.ಎಂ.ಲೋಕೇಶ್, ನಟರಾಜು, ಮಹೇಶ್, ಎಂ.ಎನ್.ಪ್ರಭುಸ್ವಾಮಿ, ಎಂ.ಸಿ.ಪ್ರಕಾಶ್, ಚಿನ್ನಸ್ವಾಮಿ, ಶಿವಕುಮಾರ್, ಸುಂದರಮ್ಮ, ನಾಗಮ್ಮ ಜಯಗಳಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಎಂ.ಬಿ.ಶಿವಮಲ್ಲಪ್ಪ, ಗೌಡಿಕೆ ರೇವಣ್ಣ, ಮಾಜಿ ಅಧ್ಯಕ್ಷ ಬಸಪ್ಪ, ಸಿದ್ದಪ್ಪ, ಬಿಜೆಪಿ ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಮೂಡ್ನಾಕೂಡು ಪ್ರಕಾಶ್, ನಾಗೇಂದ್ರಪ್ರಸಾದ್, ಎಂ.ಸಿಮಲ್ಲಣ್ಣ, ಕುಮಾರ್ ಕೆಂಡ್, ಚಿ.ಗೌ.ಪ್ರಕಾಶ್, ನಾಗಭೂಷಣ್, ಗ್ರಾಪಂ ಸದಸ್ಯರಾದ ನಾಗೇಂದ್ರ, ರಾಜಪ್ಪ, ಮಾದೇಶ್, ಗಿರೀಶ್, ಮಾಜಿ ಸದಸ್ಯ ಪುಟ್ಟಸ್ವಾಮಿ, ಸುಬ್ಬಪ್ಪ, ಕಪಿಲೆ ಬಾಬು, ಮಹೇಂದ್ರ, ಹಾಗೂ ಪಕ್ಷದ ಮುಖಂಡರು ಹಾಜರಿದ್ದರು.

ನಾಳೆ ಮ.ಬೆಟ್ಟದ ಹುಂಡಿ ಹಣ ಎಣಿಕೆ

ಚಾಮರಾಜನಗರ, ಜ.31–ಮಲೆಮಹದೇಶ್ವರಬೆಟ್ಟದ ದೇವಸ್ಥಾನದ ಗೋಲಕಗಳ ಎಣಿಕೆ ಕಾರ್ಯವನ್ನು ಫೆ.2ರಂದು ನಡೆಸಲಾಗುವುದು. ಬೆಟ್ಟದ ಬಸ್ ನಿಲ್ದಾಣದ ವಾಣಿಜ್ಯ ಸಂಕೀರ್ಣದ ಮೊದಲ ಮಹಡಿಯ ವಿಶ್ರಾಂತಿ ಗೃಹದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್‌ನೊಂದಿಗೆ ಎಣಿಕೆ ನಡೆಸಲಾಗುವುದು ಎಂದು ಮಲೆಮಹದೇಶ್ವರ ಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಬಿಗರ ಚೌಡಯ್ಯ ಜಯಂತಿ ಆಚರಣೆ

ಚಾಮರಾಜನಗರ, ಜ.31– ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಿಜಶರಣ ಅಂಬಿಗರ ಚೌಡಯ್ಯನವರ ಜಯಂತಿಯನ್ನು ನಗರದಲ್ಲಿ ಮಂಗಳವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಸಿ.ಪುಟ್ಟರಂಗಶೆಟ್ಟಿ, 12ನೇ ಶತಮಾನದ ಪ್ರಮುಖ ವಚನಕಾರರಲ್ಲಿ ಅಂಬಿಗರ ಚೌಡಯ್ಯ ಅವರು ಒಬ್ಬರಾಗಿದ್ದಾರೆ. ತಮ್ಮದೇ ವಿಶಿಷ್ಟ ವಚನಗಳ ಮೂಲಕ ಗಮನಸೆಳೆದಿದ್ದಾರೆ. ಅಂದಿನ ಕಾಲದ ಶೋಷಣೆ ವಿರುದ್ಧ ವಚನಗಳಿಂದ ಎಚ್ಚರಿಸಿದರು ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಮುಖಂಡರಾದ ಗು.ಪುರುಷೋತ್ತಮ್ ಮಾತನಾಡಿದರು. ಮುಖಂಡ ಪ್ರಕಾಶ್, ಅಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಅಂಬಿಗರ ಚೌಡಯ್ಯ ಜಯಂತಿಯಲ್ಲಿ ಅವರ ಭಾವಚಿತ್ರಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಹಾಗೂ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಪುಷ್ಪ ನಮನ ಸಲ್ಲಿಸಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

COMMERCIL SITE VIJYANAGAR 3RD STG
60x82 West Facing MUDA Site For Sale on Ring Road, Price 4.75 Cr
8660105902

Newly constructed House for sale!
20x30 duplex 3BHK with East facing door at Vijayanagar 4th stage 2nd phase Price : 78 lakh (Slightly Negotiable)
9663727759 7892942305

REQUIRED STAFFS
For SCET English Medium School, Vijayanagar, Clerk Cum Computer Teacher (Fluency in Englis) Must Contact us on: chikkammaschoolhinkal@gmail.com
0821-2302079 8867280449

WANTED
COMPUTER TYPIST (Male / Female) FOR ADVOCATE OFFICE Qualification: Typing - English & Kannada (Kan - Nudi / Baraha) in M.S. Word & Excel / Page Maker 9.30 am to 2 pm. Sunday: 10.30 to 3 pm. Salary: 10,000/- per month. For evening: (Male only). 6.30 pm to 11.30 pm. Salary: Rs. 10,000/- per month.
7349337469, 9448525072

ಬೇಕಾಗಿದ್ದಾರೆ
ಮೊಬೈಲ್ ಫೋನ್ ಶೋರೂಮ್‌ಗೆ ಕೆಲಸಕ್ಕೆ ಬೇಕಾಗಿದ್ದಾರೆ. ಪಾರ್ಟ್ ಟೈಂ/ ಫುಲ್ ಟೈಂ ಸಂಪರ್ಕಿಸಿ:
9886409722

ಕ್ರಯಕ್ಕೆ ಬೇಕಾಗಿದೆ
ದಟ್ಟಗಳ್ಳಿಯಲ್ಲಿ ಮುಡಾ ಅಲಾಟೆಡ್ 30x40 ಸೈಟ್ ಅಥವಾ ಡೂಪ್ಲೆಕ್ಸ್ ಮನೆ ಮತ್ತು 60x40 ಸೈಟ್ ಕ್ರಯಕ್ಕೆ ಬೇಕಾಗಿದೆ. ಸಂಪರ್ಕಿಸಿ:
Mob: 9886281713

WANTED
50x80 Site in Heritage Nagar (Back of APMC Market), East or North facing.
Mob: 9342182275

Sri Ramakrishna Vidyakula
KHB Colony, Hootagalli, Mysuru-18
TECHERS VACANCY 2024-25
1) TGT-ENGLISH/ SOCIAL - B.A/B.Ed,
2) TGT-Maths/ Science-B.Sc/ B.Ed
3) PGT-English/Social - M.A/ B.Ed
4) PGT-Maths/Science-M.Sc/ B.Ed
5) PGT-Kannada/Hindi-M.A/ B.Ed
Note:* Minimum 5 years teaching Experience and Fluency in English Must. *TET is compulsory Drop your resume to srkvidyakula@gmail.com
9141859198,9880709249

ನುರಿತ ಕೆಲಸಗಾರರು ಬೇಕಾಗಿದ್ದಾರೆ
ಪುರುಷರು/ಮಹಿಳೆಯರು ಜೆ.ಪಿ.ನಗರ, ನಾಚನಹಳ್ಳಿ ಪಾಳ್ಯ ಶ್ರೀರಾಂಪುರ ಸುತ್ತಮುತ್ತಲಿನವರಿಗೆ ಆದ್ಯತೆ ಶ್ರೀ ವರಸಿದ್ಧಿ ವಿನಾಯಕ ಲೈಮ್ಸ್
9945781094

LAND FOR SALE
ಹತ್ತು ಗುಂಟೆ ಜಮೀನು ಮಾರಾಟಕ್ಕಿದೆ ಶ್ರೀರಂಗಪಟ್ಟಣ ರಿಂಗ್ ರಸ್ತೆ ಯಿಂದ 15 ಕಿ.ಮೀ ಇದ್ದು ಒಂದು ಗುಂಟೆ 1.5 ಲಕ್ಷಗಳಿಗೆ ಮಾರಾಟಕ್ಕಿದೆ. (DIRECT OWNER) 1.02 ಎಕರೆ ಕನ್ವರ್ಟೆಡ್ ಭೂಮಿ ಸಾಲಿಗ್ರಾಮದಿಂದ ರಾಮನಾಥಪುರ ಹೈವೇಗೆ 5.5 ಕೋಟಿಗೆ ಮಾರಾಟಕ್ಕಿದೆ
7411110087

MUDA ALLOTMENT SITE FOR SALE
40X60 South facing Site For Sale at J P Nagar Nachanahalli Koppalur (40ft Road) Opp. Sumithra Steel Contact : Vishwanath Gowda
9590911111

CAR AVAILABLE FOR HIRE / RENTALS
My TATA TIAGO Electric Vehicle (EV) is available on Hire/ Rental Basis (As a Contract) along with Driver Facility and the amount would be Rs. 50000 per Month (This includes Driver Salary and Electricity Charges) Rates are Negotiable Kindly Contact:
7975936766

ಮನೆ ಮಾರಾಟಕ್ಕಿದೆ
20x30 ರ ಅಳತೆಯ ನೆಲ ಮತ್ತು ಮೊದಲನೆ ಮಹಡಿ ಮನೆ ಪಶ್ಚಿಮ ದಿಕ್ಕಿನ ಸೈಟು ಉತ್ತರಕ್ಕೆ ಬಾಗಿಲು ದಟ್ಟಗಳ್ಳಿ ಜೋಡಿ ಬೇವಿನ ಮರದ ಹತ್ತಿರ ಮೈಸೂರು
9739703467 9686895205

MUDA APP SITE KAMADHENU LAYOUT, SRIRAMPURA
30x40 East South Corner Site Price: 68 Lakhs within Ring Road
8660105902

ಶಿಕ್ಷಕಿಯರು ಬೇಕಾಗಿದ್ದಾರೆ
ನೂತನವಾಗಿ ಪ್ರಾರಂಭವಾಗುತ್ತಿರುವ ಶ್ರೀಮತಿ ಲಕ್ಷ್ಮಿ ವಿದ್ಯಾಸಂಸ್ಥೆಯಲ್ಲಿ Pre, Kg, LKG ಹಾಗೂ UKG ಇಂಗ್ಲೀಷ್ ಮೀಡಿಯಂ ತರಗತಿಗಳು ಆರಂಭವಾಗುತ್ತಿದ್ದು ಮಕ್ಕಳಿಗೆ ಭೋದನೆ ಮಾಡಲು NST ಅಥವಾ Montessori ತರಬೇತಿ ಹೊಂದಿರುವ ಶಿಕ್ಷಕಿಯರು ಬೇಕಾಗಿದ್ದಾರೆ. ಸಂಪರ್ಕಿಸಿ: ಶ್ರೀಮತಿ ಲಕ್ಷ್ಮಿ ಆಶಾಧಾಮ ಟ್ರಸ್ಟ್ ರಮ್ಮನಹಳ್ಳಿ, ಮೈಸೂರು
9880174924

ಮನೆ ಮಾರಾಟಕ್ಕಿದೆ
20x30 ಗುಂಡೂರಾವ್ ನಗರ ಪಕ್ಕ
9353134015

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ. ತರಬೇತಿಗಾಗಿ:
7406375196, 9880548596

CATERING
SWAADHA SAMPADA Catering Services VEG
6363436728

ವಿಶಾಲ್ ರೋಡ್ವೇಸ್ ಪ್ರೈವೇಟ್ ಲಿಮಿಟೆಡ್
ಖಾಲಿ ಹುದ್ದೆ: 150+ DATA ENTRY OPERATOR ಸಂಬಳ 10,000 + 5000 Incentive ಸಂದರ್ಶನದ ಸಮಯ: 9.30 ರಿಂದ 5.30. ವಿಳಾಸ: #42, JCK ಇಂಡಸ್ಟ್ರಿಯಲ್ ಪಾರ್ಕ್, ಮೇಟಗಳ್ಳಿ ಪೋಸ್ಟ್, ಪ್ರೀತಿ ಗ್ರಾನೈಟ್ ಹತ್ತಿರ, ಕೆ.ಆರ್.ಎಸ್. ರಸ್ತೆ, ಮೈಸೂರು-570 016. ಕರೆ ಮಾಡಿ:
Mob: 8867064586

Aquaguard & Kent Sales and Service
Service Charge: 300/-
9901200444

COMMERCIAL SPACE FOR RENT
1000sq.ft., 1st floor with 15 KWT near Ramaswamy Circle, Mysuru-570 004
Contact : 94495 43636 / 94485 59759

ಶಿರಡಿ ಪ್ರವಾಸ
5 ದಿನಗಳು 20–02–2024 ಕೊಲ್ಹಾಪುರ, ಪಂಡರಾಪುರ, ತುಳಜಾಭವಾನಿ, ಶನಿಸಿಂಗಪೂರ, ಎಲ್ಲೋರ, ನಾಸಿಕ್ ಮತ್ತು 3 ಜ್ಯೋತಿರ್ಲಿಂಗ ದರ್ಶನ ಮೈತ್ರಿ ಟ್ರಾವೆಲ್ಸ್
6360422209

WANTED
Exp. Cooks & Supervisors for Reputed company in Mysuru Best Salary + EPF & ESI Call / Whatsapp
8951189182 9880656245

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9591815191

100% TEAK WOOD FACTORY FINISH DOORS @ DEPOT RATES

10YEARS WARRANTY
www.ssbuildmart.com
9901291267
9845426862

MICROWAVE OVEN SERVICES
Indian / Imported Call for Microwave Oven Repair
Mob: 9900237315, 9845963421, 08214266495

REQUIRED TELECALLER
for a reputed educational institution. Graduates with fluency in English, Hindi & Kannada may apply to:
shikshak2024@gmail.com

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ–ಯುವತಿಯರು ಬೇಕಾಗಿದ್ದಾರೆ. SALARY : 13000-21000 + ESI.PF ವಿದ್ಯಾರ್ಹತೆ: 10TH, PUC, ITI, Diploma & Any Degree ಇಂದೇ ಸಂಪರ್ಕಿಸಿ:
9035734821

ಹೊಸ ಮನೆ ಮಾರಾಟಕ್ಕಿದೆ
30x40 ಪೂರ್ವ ದಿಕ್ಕು 3 BHK ಕಲ್ಪವೃಕ್ಷನಗರ ಕೆಸರೆ 3ನೇ ಹಂತ, ಮೈಸೂರು
8095673991

ಸೈಟ್ ಬೇಕಾಗಿದೆ
ವಸಂತ್‌ನಗರ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಪೊಲೀಸ್ ಲೇಔಟ್ 2–3 ನೇ ಹಂತದಲ್ಲಿ ಸೈಟ್ ಬೇಕಾಗಿದೆ
9448601655

ಸುವರ್ಣ ಯಾತ್ರ
7 ದಿನಗಳು 21–2–2024 ಕಾಶಿ ಹಾಗೂ ಬಾಬಾ ವೈದ್ಯನಾಥ ಜ್ಯೋತಿರ್ಲಿಂಗ ಪ್ರವಾಸ. ಅಯೋಧ್ಯೆ, ತ್ರಿವೇಣಿ ಸಂಗಮ, ನೈಮಿಶಾರಣ್ಯ, ಗಯಾ, ಬುದ್ಧಗಯಾ. ನೇಪಾಳ ಪ್ರವಾಸ 9 ದಿನಗಳು 12–3–2024 ಅಯೋಧ್ಯೆ, ಮುಕ್ತಿನಾಥ್, ಪಶುಪತಿನಾಥ್, ಕಠ್ಮಂಡು ಹೋತ್ರ ಮನೋಕಾಮನದೇವಿ ಇತರೆ ಸ್ಥಳಗಳು.
8660233673, 9008381022

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿದೆ. ಸಂಬಳ+ಟಿಎ 15,200/- to 86,000/-
7619318801, 9035836473

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

ಬೇಕಾಗಿದ್ದಾರೆ
1) Tig Welder
2) ARC Welder
3) Helper
4) Sheet Metal Worker
5) Turner
WITH ESI FACILITY.
9980066216, 9880742644

ತಕ್ಷಣ ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ, ಮತ್ತು ಮೈಸೂರಿನಾದ್ಯಂತ ಪ್ರಸಿದ್ಧ MNC ಕಂಪನಿಗಳಿಗೆ, ಕಂಪನಿ ಕೆಲಸಕ್ಕೆ, ಆಫೀಸ್ ಕೆಲಸಕ್ಕೆ, ತಕ್ಷಣ ಯುವಕ, ಯುವತಿಯರು, ಬೇಕಾಗಿದ್ದಾರೆ, ಯಾವುದೇ ಎಜುಕೇಷನ್, ಯಾವುದೇ AGE ಲಿಮಿಟ್ ಇಲ್ಲ, SALARY 18000 TO 38000 ಇರುತ್ತದೆ, ಹೆಚ್ಚಿನ ಮಾಹಿತಿಗೆ ಇಂದೇ ಸಂಪರ್ಕಿಸಿ,
HR MADAM 9886385585 8296278130

ಕೂಡಲೇ ಕೆಲಸಕ್ಕೆ ಬೇಕಾಗಿದ್ದಾರೆ
ಹೋಟೆಲ್ ರಿಸೆಪ್ಷನ್ ಮತ್ತು ಹೌಸ್‌ಕೀಪಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಮೂರು ಹೊತ್ತು ಊಟ ಹಾಗೂ ತಂಗಲು ರೂಮಿನ ವ್ಯವಸ್ಥೆ ಲಭ್ಯವಿರುತ್ತದೆ.
9008810004

ಮನೆ ಬಾಡಿಗೆಗೆ ಇದೆ
2BHK, Ground Floor ನಲ್ಲಿರುವ ಸುಸಜ್ಜಿತವಾದ ಮನೆ ಬನುಮಯ್ಯ ರಸ್ತೆ, 3ನೇ ಕ್ರಾಸ್, ದಳವಾಯಿ ಸ್ಕೂಲ್ ಹತ್ತಿರ ಸಸ್ಯಾಹಾರಿಗಳಿಗೆ ಮಾತ್ರ
9900904073

Shop for Rent / Lease
1) G.F. shop 2 Nos. 13'x22' ft / 18'x22' ft
2) 1 Floor 4 BHK, 18 Sqrs.
3) 2nd Floor 4 BHK, 18 sqrs.
Vijayanagar 2nd Stage, H.T. Double Main Road. Contact:
9538280996, 9663604699

Document Lost
Nagarathnamma, W/o K.C. Mahadevaswamy, residing at #2706, Medara Street, Hunsur Town, I lost my original gift deed paper (Hun-1-05861/2007/08) at Gokula Road, Hunsur Town. *Finders please contact:*
Mob: 9964902356

FOR SALE
1) 30x50, 21 Lakhs Kote Road.
2) 20x30, 30x40 Bogadi Road
3) 2, 3 BHK flats in Ramakrishnanagar.
4) 10, 20 Guntas farm land KRS Back Water attach 19 Lakhs starts.
5) 20x30, 30x40 site Srirampura
6) 40x70 house Vidyaranyapuram.
7) 18x40, 40 Ft. Road Kuvempunagar.
PRAKRUTHI PROPERTIES
9538690359, 9035990359

ಪ್ರಮಾಣ ಪತ್ರ
ಎಸ್.ಕೆ. ಭಾಗ್ಯಲಕ್ಷ್ಮಿ, ಮನೆ ನಂ. 909, 4/7ನೇ ಕ್ರಾಸ್, ಇ&ಎಫ್ ಬ್ಲಾಕ್, ರಾಮಕೃಷ್ಣನಗರ, ಮೈಸೂರು–570 023ರಲ್ಲಿ ವಾಸವಿದ್ದು, ನಾನು ಪ್ರಮಾಣೀಕರಿಸುವುದೇನೆಂದರೆ, ನನ್ನ ಹೆಸರು ಸೌಭಾಗ್ಯ ಎಸ್.ಕೆ. ಎಂದು ನನ್ನ ಆಧಾರ್ ಕಾರ್ಡಿನಲ್ಲಿ ತಪ್ಪಾಗಿ ನಮೂದಾಗಿರುತ್ತದೆ. ಈಗ ನಾನು ಹೊಸ ಆಧಾರ್ ಕಾರ್ಡ್ ಮಾಡಿಸಿದ್ದು, ಅದರಲ್ಲಿ ನನ್ನ ಹೆಸರು ಎಸ್.ಕೆ. ಭಾಗ್ಯಲಕ್ಷ್ಮಿ ಎಂದು ಸರಿಯಾಗಿ ನಮೂದಾಗಿರುತ್ತದೆ. ಇನ್ನು ಮುಂದೆ ನನ್ನ ಹೆಸರು ಎಸ್.ಕೆ. ಭಾಗ್ಯಲಕ್ಷ್ಮಿ ಎಂದು ಈ ಮೂಲಕ ನೋಟರಿ ವೆಂಕಟೇಶ ಪಟವರ್ಧನ್‌ರವರು ಎದುರು ದಿನಾಂಕ 20–12–2023ರಂದು ಪ್ರಮಾಣೀಕರಿಸಿರುತ್ತೇನೆ.
ಸಹಿ/– ಎಸ್.ಕೆ. ಭಾಗ್ಯಲಕ್ಷ್ಮಿ

ಕೊಳ್ಳೇಗಾಲದ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಮೋಡಿ ಮಾಂತ್ರಿಕ ಪಂ|| ಎಸ್.ಕೆ. ಪ್ರಶಾಂತ್ ಆಚಾರ್ಯ
ಮೊ: 9740947045
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ, ದಾಂಪತ್ಯ ಸಮಸ್ಯೆ, ನಾಗದೋಷ, ಕುಜದೋಷ, ದುಷ್ಟಶಕ್ತಿ, ಪ್ರೇತಬಾಧೆ, ಸಾಲಬಾಧೆ, ವ್ಯಾಪಾರದಲ್ಲಿ ತೊಂದರೆ ತನ್ನವರೆ ತನಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾಡುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ, ಡಾ|| ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೊಸ ಸುಮಂಗಲಿ ಸಿಲ್ಕ್ಸ್ ಹತ್ತಿರ), ಮೈಸೂರು.

ಮನೆ ಮಾರಾಟಕ್ಕಿದೆ
ಲಾಲ್ ಬಹದ್ದೂರ್ ಶಾಸ್ತ್ರಿ ನಗರ ಪೊಲೀಸ್ ಲೇಔಟ್‌ನಲ್ಲಿ ಮನೆ ಮಾರಾಟಕ್ಕಿದೆ.
9448601655

ಮನೆ ಮಾರಾಟಕ್ಕಿದೆ
9x26 ಅಡಿಯುಳ್ಳ ಉತ್ತರ-ದಕ್ಷಿಣ ದಿಕ್ಕಿನ ಮಂಗಳೂರು ಹಂಚಿನ ಮನೆ ಸಿಟಿ ಮಧ್ಯಭಾಗದಲ್ಲಿ ಮಂಡಿ ಪೊಲೀಸ್ ಸ್ಟೇಷನ್ ಹತ್ತಿರ ಇರ್ವಿನ್ ರಸ್ತೆ ಹಿಂಭಾಗ ಬೆಲೆ: 25 ಲಕ್ಷ
6361777082

Change of Name
I, Seema Mitra, residing at No. 901, Tower No. 10, Vipul Greens, Opp. South City-2, Gate No. 2, Sector-48, Sohna Road, Gurugram (Gurgaon), Haryana-122018, hereby renounce and abandon the use of my farmer name of Sathya Seema D. (original name) and in lieu thereof assume as from the date hereof for the reason that after my marriage on my own free will I wish to change my name as Seema Mitra. I declared this infront of Notary Jayalakshmi on 29-1-2024.
Sd/- Sathya Seema

ಬೇಕಾಗಿದ್ದಾರೆ
ಮೈಸೂರು–ಕೊಡಗು–ಮಂಗಳೂರು ಮಾರ್ಗಗಳಲ್ಲಿ ದಿನನಿತ್ಯ ಸಂಚರಿಸುವ ಲಾರಿಗಳಲ್ಲಿ ಪಾರ್ಸಲ್ ವಿತರಿಸಲು ಯುವಕರು / ಡ್ರೈವರ್ ಬೇಕಾಗಿದ್ದಾರೆ. 1) ಡೆಲಿವರಿ ಬಾಯ್. ಆರಂಭಿಕ ವೇತನ 12,000. (2) ಹೆವಿ ಡ್ರೈವರ್ 18,000. ಸಂಪರ್ಕಿಸಿ:
Mob: 9740408488

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

WANTED
For wholesale shop Driving cum Distribution work. SSLC / PUC Pass / Fail.
Mob: 9113545381

WANTED
H R EXECUTIVE Graduates having 1 Min Exp in HR & Office Administration with Good Communication Skills in English Salary Best as per the Industry. For Interview Contact:
8971799998

ತಕ್ಷಣ ಬೇಕಾಗಿದ್ದಾರೆ
ಗಣಪತಿ ಸಚ್ಚಿದಾನಂದ ಆಶ್ರಮ, ಎಲೆ ತೋಟದ ಸುತ್ತಮುತ್ತಲಿನ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ESI & PF ಸೌಲಭ್ಯವಿರುತ್ತದೆ. ವಯೋಮಿತಿ : 50 ವರ್ಷದ ಮೇಲ್ಪಟ್ಟು
9620667819 9880727819

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಬೇಕಾಗಿದ್ದಾರೆ
ಹಿನಕಲ್ ಹತ್ತಿರ ಇರುವ ಹೋಟೆಲ್ ಮತ್ತು ಮೇಟಗಳ್ಳಿ ಹಾಗೂ ಕೂರ್ಗಳ್ಳಿ ಇಂಡಸ್ಟ್ರೀಸ್ ನಲ್ಲಿ ಕೆಲಸ ಮಾಡಲು ಅನುಭವವುಳ್ಳ ನುರಿತ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: ಎಸ್ಎಸ್ಎಲ್‌ಸಿ. ಸಂಪರ್ಕಿಸಿ:
9035050653, 9035050656

IN GOKULAM SITE FOR SALE
50x75 Commercial Site, MUDA North East Corner Price: 4.95 Cr. 40 Feet Road
8660105902

HOUSE FOR SALE
Muda Layout 2+1 BHK 20x30 South Facing Site East Facing Door Shanthaveri Gopal Gowda Nagar, Mysore
9738884777 9740019514

ಸೈಟು ಮಾರಾಟಕ್ಕಿದೆ
ವರಕೂಡು ಸರ್ಕಲ್ ಹತ್ತಿರ ವನಸಿರಿ ಗಾರ್ಡನ್ (SBM ಆಫೀಸರ್ ಎನ್ ಕ್ಲೈವ್) ಮೈಸೂರು 30x37.5 - 16 ಲಕ್ಷ DCTP Approved
7676077678

ಬೇಕಾಗಿದೆ
20 ಟಿಪ್ಪರ್‌ಗಳು, ಗ್ರಾವೆಲ್ (ಮಣ್ಣು) ಸಂಪರ್ಕಿಸಿ: ಬಾಲಕೃಷ್ಣ ಟ್ರೇಡಿಂಗ್ ಕಾರ್ಪೋರೇಷನ್ 23F ಇಂಡಸ್ಟ್ರಿಯಲ್ ಸಬರ್ಬ್ ಜೆ.ಪಿ.ನಗರ, ಮೈಸೂರು
9986756866

50x80 SITE Kuvempunagar
West Facing MUDA Site for Sale Price: 4700 / Sq.ft. Behind RMP Quarters, 40 Feet Road
Mob: 8660105902

HOUSE FOR SALE
30x40 Ramakrishnanagar 3 Floor, East face.
Mob: 7619491879
BROKERS EXCUSE

WANTED
SECURITY GUARD FOR SOFTWARE COMPANY. Salary: 19,000/-. Benefits: ESI, PF, Bonus, NFH, EL, Gratuity, Insurance, Uniform free. Location: Hebbal Industrial Area, Mysore.
9008794218, 9538014456

ಬೇಕಾಗಿದ್ದಾರೆ
1)ಸೆಕ್ಯೂರಿಟಿ ಸೂಪರ್‌ವೈಸರ್ (SSLC/PUC)
2)ಸೆಕ್ಯೂರಿಟಿ ಗಾರ್ಡ್ (SSLC Pass/Fail)
3) ಸ್ವೀಪರ್ಸ್
ಕೆಲಸಕ್ಕೆ ಅನುಭವವಿರುವ ಪುರುಷರು & 50 ವರ್ಷದೊಳಗಿನ ಅಭ್ಯರ್ಥಿಗಳು ಬೇಕಾಗಿದ್ದಾರೆ.
9844235981,9483853975 9739199355

MUDA & RERA APPROVED 30X40 SITE FOR SALE
West facing @ 2300/Sqft North Facing @ 2500 Sqft Near Kit Eng. Collage, Next to Lalbahadur Shastri Nagar, off. T-Narasipura Main Road, Immediate Registration & Bank Loan Available
7337786007

ತಕ್ಷಣ ಬೇಕಾಗಿದ್ದಾರೆ
ಮಹಿಳೆಯರಿಗೆ ಮೊದಲ ಆಧ್ಯತೆ ಬೆಂಗಳೂರು ಮೈಸೂರಿನಲ್ಲಿರುವ ಯುವಕ ಯುವತಿಯರಿಗೆ 7ನೇ, 10ನೇ ಡಿಗ್ರಿ, ಬಿಕಾಂ ಆದವರು ಎಂ.ಎನ್.ಸಿ ಕಂಪನಿಗಳಿಗೆ ಆಫೀಸ್‌ಗಳಿಗೆ ವಸತಿಯೂಟದೊಂದಿಗೆ ESI-PF ಸಂಬಳ 18000 – 35000 ಮೊದಲು ಬಂದವರಿಗೆ ಕೆಲಸ, ಸಂಪರ್ಕಿಸಿ:
8095109991 8095109998

ಬೇಕಾಗಿದೆ
ಸೈಟ್ ಅಥವಾ ಹಳೆಮನೆ 30x40 ಕೆಸರೆ 3ನೇ ಹಂತ R. S ನಾಯ್ಡುನಗರ, ಮೈಸೂರು
9686119686

BSK GROUPS
Best deal all services
ಬೇಕಾಗಿದ್ದಾರೆ
ಮನೆ ಖರೀದಿ ಸಾಲ ಗೃಹ ನಿರ್ಮಾಣ ಸಾಲ ಅಡಮಾನ ಸಾಲ ಟಾಪ್–ಅಪ್ ಲೋನ್ ನಮ್ಮಲ್ಲಿ A,B, 9/11A, 11B ಪಂಚಾಯ್ತಿ ಖಾತಾ, ಗ್ರಾಮಠಾಣ, ಹಕ್ಕು ಪತ್ರ, ಪುರಸಭೆ ಖಾತಾ, ಎಲ್ಲಾ ತರಹದ ಲೋನ್ಸ್ ಖಾತಾ ದಾಖಲಾತಿಗಳಿಗೆ ಎಲ್ಲಾ ತರಹದ ಬ್ಯಾಂಕ್‌ಗಳಲ್ಲಿ ಮಾಡಿಕೊಡಲಾಗುತ್ತದೆ. 100% Free
8073630175

ಬೇಕಾಗಿದ್ದಾರೆ
ಮೈಸೂರು ವಿದ್ಯಾರಣ್ಯಪುರಂನಲ್ಲಿ ಇರುವ ಪೇಂಟ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
9448603211

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benifits : Fixed Salary + PF + ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು: 1) ಫೋಟೋ 2) ಪಾನ್‌ಕಾರ್ಡ್ 3) ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್. ಸ್ಥಳ: Maurya Residency, Sri Harsha Road, Mysore-570001. Time-11am Date: 5-2-24
9448376423,9886883858
(Followed by Lunch)

ಕಳೆದಿದೆ
ಅನುಪಮ ಆದ ನಾನು ಪ್ಲಾಟ್ ನಂ.201, ಎಸ್.ಎ. ಇಮ್ಮಾಕ್ಯುಲೇಟ್, 1ನೇ ಮೇನ್ ರೋಡ್, ಯಾದವಗಿರಿ, ಮೈಸೂರಿನಲ್ಲಿ ವಾಸವಿದ್ದು, ನನಗೆ ಸೇರಿದ ಮೇಲೆ ತಿಳಿಸಿರುವ ಸ್ವತ್ತಿನ ಅಸಲು ಸೇಲ್ ಡೀಡ್ ದಾಖಲಾತಿ ಕಳೆದಿದ್ದು, ಸಿಕ್ಕವರು ಸಂಪರ್ಕಿಸಿ
9008044914

MATCH MAKERS , BRIDE / GROOM
ತಕ್ಷಣ ವಿವಾಹಕ್ಕೆ ವಧು/ವರರಿಗಾಗಿ
ಎಲ್ಲಾ ಜಾತಿಯ Govt Job, Private, ಸ್ವಂತ / ಪ್ರಾತಿಪರರು/ ಉದ್ದಿಮೆದಾರರು, ಡಾಕ್ಟರ್, ಇಂಜಿನಿಯರ್, ಡಿಗ್ರಿ ಎಲ್ಲಾ ವಿದ್ಯಾಭ್ಯಾಸದವರ ಮದುವೆ ಕರ್ನಾಟಕದಾದ್ಯಂತ ಇರುವ ಲಕ್ಷಾಂತರ ದಲ್ಲಿ ಆಯ್ಕೆಗೆ ವಧುಗಳು/ವರಗಳು ಮೊದಲನೆ ಮದುವೆ/ ಡೈವೋರ್ಸಿಗಳು / ಸ್ವತಂತ್ರರು, 600 ಶ್ರೀಮಂತ ವರರಿಗೆ ವಧು ಬೇಕಾಗಿದೆ. 1200 ಸ್ವತಂತ್ರ ವಧುಗಳಿಗೆ ವರಬೇಕು. Life Partner ಗಾಗಿ ನೇರ ಭೇಟಿನೀಡಿ ಆರಿಸಿಕೊಳ್ಳಿ/ ಎಲ್ಲಾ ರೀತಿಯ ಉದ್ಯೋಗ ದೊರೆಯುತ್ತದೆ.
7975728012

ಬೇಕಾಗಿದ್ದಾರೆ
ಮಂಡ್ಯ, ಮೈಸೂರು, ಹೆಚ್.ಡಿ.ಕೋಟೆ ಹಾಗೂ ಹುಣಸೂರು ತಾಲ್ಲೂಕಿನಾದ್ಯಂತ ದ್ವಿಚಕ್ರ ವಾಹನದ ಸಾಲ ವಸೂಲಾತಿ ಕೆಲಸ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
6360065884

2 ಅಪಾರ್ಟ್‌ಮೆಂಟ್‌ನ ಮನೆಗಳು (Good Location)
ಮಾರಾಟಕ್ಕಿದೆ (ಕಡಿಮೆ ಬೆಲೆಯಲ್ಲಿ) ಮೂಡಾ ಸೈಟು, ಮನೆ ಮಾರುವವರು ಹಾಗೂ ಕೊಳ್ಳುವವರು ಸಂಪರ್ಕಿಸಿ: ಶೀಘ್ರ ವ್ಯವಹರಿಸಲಾಗುವುದು ಡಿ.ಡಿ. ರಿಯಲ್ ಎಸ್ಟೇಟ್
9343361444

0% Brokerage
For Buying and Selling any Properties in Mysore City Contact: Mysore Estates Vishwanath Gowda
9590911111

ಕಳೆದಿದೆ
ವನಜ ವಿಜಯಕುಮಾರ್ ಆದ ನಾನು ನಂ.1063/95A, 2ನೇ ಮೇನ್, 9ನೇ ಕ್ರಾಸ್, ವಿದ್ಯಾರಣ್ಯಪುರಂ, ಮೈಸೂರು ಇಲ್ಲಿ ವಾಸವಿದ್ದು ನನ್ನ ಬಾಬ್ತು ಮನೆಯ ದಾಖಲಾತಿ ಪತ್ರ (ನಂ.1063/95A) ಕಳೆದಿದ್ದು ಸಿಕ್ಕವರು ಸಂಪರ್ಕಿಸಿ:
8762061067 8884735188

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಅರ್ಜಿ ಆಹ್ವಾನ

ಮೈಸೂರು, ಜ.31– 2023–24ನೇ ಸಾಲಿನ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಬಾಡಿಗೆ ಆದಾರದಲ್ಲಿ ಒದಗಿಸುವಂತೆ ಹೈಟೆಕ್ ಹಾರ್ವೆಸ್ಟರ್ ಹಬ್‌ನ್ನು ಸ್ಥಾಪಿಸಲು ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಡಿ ವೈಯಕ್ತಿಕ ಫಲಾನುಭವಿ, ಸಂಘ–ಸಂಸ್ಥೆ (ಚಾಲ್ತಿಯಲ್ಲಿರುವ ಕೃಷಿ ಯಂತ್ರಧಾರೆ ಕೇಂದ್ರಗಳು, ಸೇವಾದಾರ ಸಂಸ್ಥೆಗಳು, ಕೃಷಿ ಯಂತ್ರೋಪಕರಣಗಳ ಬ್ಯಾಂಕ್ ಹಾಗೂ ನೋಂದಾಯಿತ ಸಂಘ–ಸಂಸ್ಥೆಗಳು) ಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ನಿಗದಿತ ನಮೂನೆ, ಸಂಸ್ಥೆ ನೊಂದಾಯಿಸಿದ ಪ್ರಮಾಣ ಪತ್ರ, ಗುರುತಿನ ಪತ್ರ, ಬ್ಯಾಂಕ್ ಪಾಸ್ ಬುಕ್ ಪ್ರತಿ, 20 ರೂ.ಗಳ ಛಾಪಾ ಕಾಗದದ ಮೇಲೆ ಹಬ್ ಅನ್ನು ಪರಬಾರೆ ಮಾಡುವುದಿಲ್ಲ ವೆಂದು ಮುಚ್ಚಳಿಕೆ ಪತ್ರ, 2 ವರ್ಷಗಳ ಕಾಲ ಲೆಕ್ಕ ಪರಿಶೋದನಾ ಪತ್ರ ಸಲ್ಲಿಸಬೇಕು. ಸಹಕಾರ ಸಂಘಗಳ ನಿಬಂಧನೆಯಂತೆ, ಕಂಪನಿ ಕಾಯ್ದೆಯಡಿ ನೋಂದಾಯಿಸಿದ ಸಂಘ–ಸಂಸ್ಥೆಗಳು ಮಾತ್ರ ಅರ್ಹತೆಯನ್ನು ಹೊಂದಿರುತ್ತಾರೆ. ವೈಯಕ್ತಿಕ ಫಲಾನುಭವಿಗಳು ಪ್ರತಿಯೊಬ್ಬ ಎಫ್.ಐ.ಡಿ ಹೊಂದಿರುವ ರೈತರು ಒಂದು ಕಂಬೈನ್ಡ್ ಹಾರ್ವೆಸ್ಟರ್‌ಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಸದರಿ ಯೋಜನೆಯ ಆಸಕ್ತರು ಹತ್ತಿರದ ರೈತ ಸಂಪರ್ಕ ಕೇಂದ್ರ ಹಾಗೂ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಭೇಟಿ ನೀಡಬಹುದು. ಅರ್ಜಿಯನ್ನು ಫೆ.7 ರೊಳಗೆ ಸಂಬಂಧಿಸಿದ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸಬೇಕು ಎಂದು ತಿಳಿಸಿದ್ದಾರೆ.

ಮೈಸೂರು ವಿವಿ ವಿದ್ಯಾರ್ಥಿ ಸ್ನೇಹಿಯಾಗಿರಲಿ; ಶಿಕ್ಷಣ ಮಂಡಳಿ ಸದಸ್ಯರ ಸಲಹೆ

ಅಂಕಪಟ್ಟಿ, ಪದವಿ ಪ್ರಮಾಣಪತ್ರ ನೀಡಲು ಪ್ರತ್ಯೇಕ ವೆಬ್‌ಸೈಟ್

ಮೈಸೂರು, ಜ.31(ಆರ್‌ಕೆ)– ಅಂಕಪಟ್ಟಿ, ಪದವಿ ಪ್ರಮಾಣಪತ್ರ (ಕಾನ್ವೊಕೇಷನ್ ಸರ್ಟಿಫಿಕೇಟ್) ಇನ್ನಿತರ ದಾಖಲಾತಿಗಳನ್ನು ನೀಡಲು ಪ್ರತ್ಯೇಕ ವೆಬ್‌ಸೈಟ್ ಆರಂಭಿಸಿ, ಮೈಸೂರು ವಿಶ್ವವಿದ್ಯಾನಿಲಯವನ್ನು ವಿದ್ಯಾರ್ಥಿ ಸ್ನೇಹಿಯಾಗಿ ಮಾಡಬೇಕೆಂದು ಶಿಕ್ಷಣ ಮಂಡಳಿ ಸದಸ್ಯರು ಸಲಹೆ ನೀಡಿದ್ದಾರೆ.

ಕ್ರಾಫರ್ಡ್ ಭವನದಲ್ಲಿ ಬುಧವಾರ ಕುಲ ಪತಿ ಪ್ರೊ.ಎನ್.ಕೆ.ಲೋಕನಾಥ್ ಅಧ್ಯಕ್ಷತೆಯಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಪ್ರಸ್ತಾಪಿಸಿದ ಬಿಇಡಿ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲರೊಬ್ಬರು, ಪದವಿ ಪರೀಕ್ಷಾ ಫಲಿತಾಂಶ ಪ್ರಕಟವಾದ ತಕ್ಷಣ ನಿಗದಿತ ಸಮಯದಲ್ಲಿ ಅಂಕಪಟ್ಟಿ ನೀಡದೇ ಇರುವುದರಿಂದ ಸರ್ಕಾರ ಜಾರಿಗೊಳಿಸಿರುವ ಯುವನಿಧಿ ಯೋಜನೆಗೆ ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತಿಲ್ಲ ಎಂಬುದರ ಬಗ್ಗೆ ಕುಲಪತಿಗಳ ಗಮನ ಸೆಳೆದರು.

ವಿದೇಶಿ ವಿದ್ಯಾರ್ಥಿಗಳು ನಿಗದಿತ ಸಮಯಕ್ಕೆ ತಮ್ಮ ದೇಶಗಳಿಗೆ ಹಿಂದಿರುಗಬೇಕಾಗುತ್ತದೆ. ಅವರ ವೀಸಾ ಅವಧಿ ಮುಗಿಯುವುದರೊಳಗಾಗಿ ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಅಂಕಪಟ್ಟಿ ನೀಡಬೇಕು. ಆದರೆ ನೀಡಲಾಗುತ್ತಿಲ್ಲ ಎಂದು ಮತ್ತೊಬ್ಬ ಸದಸ್ಯರು ಪ್ರಸ್ತಾಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಈ ಸಂಬಂಧ ಉನ್ನತ ಶಿಕ್ಷಣ ಇಲಾಖೆ ಗಮನಕ್ಕೆ ತಂದರೆ, ಮೈಸೂರು ವಿಶ್ವವಿದ್ಯಾನಿಲಯದವರು ಯಾವಾಗಲೂ ಸಮಸ್ಯೆ ತರುತ್ತೀರಿ ಎಂದು ಅಧಿಕಾರಿಗಳು ಹೇಳುತ್ತಾರೆ ಎಂದರು.



ಮೈಸೂರು ವಿಶ್ವವಿದ್ಯಾನಿಲಯದ ಕಾರ್ಯಸೌಧ ಕ್ರಾಫರ್ಡ್ ಭವನದಲ್ಲಿ ಶಿಕ್ಷಣ ಮಂಡಳಿ ಸಭೆ ಬುಧವಾರ ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಅಧ್ಯಕ್ಷತೆಯಲ್ಲಿ ನಡೆಯಿತು. ಕುಲಸಚಿವೆ ವಿ.ಆರ್. ಶೈಲಜಾ, ಪರೀಕ್ಷಾಂಗ ಕುಲಸಚಿವ ಪ್ರೊ.ಮಹದೇವನ್, ಹಣಕಾಸು ಅಧಿಕಾರಿ ಕೆ.ಎಸ್.ರೇಖಾ ಅವರನ್ನು ಚಿತ್ರದಲ್ಲಿ ಕಾಣಬಹುದು.

ಕುಲಸಚಿವರ ಐಡಿಯಾ: ಮಧ್ಯ ಪ್ರವೇಶಿಸಿದ ಕುಲಸಚಿವೆ ವಿ.ಆರ್.ಶೈಲಜಾ, ಕಂದಾಯ ಇಲಾಖೆಯಲ್ಲಿ 'ಭೂಮಿ' ಲ್ಯಾಂಡ್ ರೆಕಾರ್ಡ್ಸ್ ವೆಬ್‌ಸೈಟ್ ಇರುವಂತೆ ವಿಶ್ವವಿದ್ಯಾನಿಲಯಗಳ ಅಂಕಪಟ್ಟಿ, ಪದವಿ ಪ್ರಮಾಣಪತ್ರ ನೀಡಲು ಪ್ರತ್ಯೇಕ ವೆಬ್‌ಸೈಟ್ ಆರಂಭಿಸಲಾಗುವುದು. ಎಲ್ಲಾ ಮಾಹಿತಿ, ದಾಖಲೆಗಳನ್ನು ಇದರಲ್ಲಿ ಹಾಕಿದರೆ ವಿದ್ಯಾರ್ಥಿಗಳು ತಮಗೆ ಬೇಕಾದ ದಾಖಲೆ ಪ್ರಮಾಣಪತ್ರಗಳನ್ನು ಪಡೆಯಬಹುದು. ಇದರಿಂದ ಮೈಸೂರು ವಿವಿಯನ್ನು ವಿದ್ಯಾರ್ಥಿ ಸ್ನೇಹಿಯನ್ನಾಗಿ ಮಾಡಬಹುದು ಎಂದರು.

ಪಿಹೆಚ್.ಡಿ ಪ್ರವೇಶ ಪರೀಕ್ಷೆ ಸಂಬಂಧ ರಾಜ್ಯಾದ್ಯಂತ ಏಕೀಕೃತಗೊಳಿಸುವ ಉನ್ನತ ಶಿಕ್ಷಣ ಇಲಾಖೆಯ ಚಿಂತನೆಗೆ ಶಿಕ್ಷಣ ಮಂಡಳಿ ಸದಸ್ಯರು ವಿರೋಧಿಸಿದರು.

ಉಪಸಮಿತಿ ರಚನೆ

"ಕಾಮರ್ಸ್ ಮತ್ತು ಎಂಬಿಎ ಇಂಟರ್ನ್‌ಶಿಪ್ ವಿದ್ಯಾರ್ಥಿಗಳಿಗಾಗಿ ಹೊಸ ಪಠ್ಯ ರೂಪಿಸಲು, ಕೈಗಾರಿಕೆಗಳ ತಜ್ಞರನ್ನು ಕರೆದು ಉಪನ್ಯಾಸ ಕೊಡಿಸಲು ಹಾಗೂ ಇಂಟರ್ನ್‌ಶಿಪ್ ರೂಪಿಸಲು ತಜ್ಞರನ್ನೊಳಗೊಂಡ ಉಪಸಮಿತಿ ರಚಿಸಲಾಗುವುದು. ಎಲ್ಲಾ ವಿದ್ಯಾರ್ಥಿಗಳಿಗೂ ಕೈಗಾರಿಕೆಗಳಲ್ಲಿ ಇಂಟರ್ನ್‌ಶಿಪ್ ತರಬೇತಿ ನೀಡಲಾಗದು. ಪ್ರಾಜೆಕ್ಟ್ ವರ್ಕ್‌ನಿಂದ ಜೆರಾಕ್ಸ್ ಅಂಗಡಿಯವರಿಗೆ ಅನುಕೂಲವಾಗುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ)ಯಲ್ಲೂ ಗೊಂದಲವಿರುವುದರಿಂದ ಉಪಸಮಿತಿ ಯಿಂದ ಅಧ್ಯಯನ ನಡೆಸಿ ವರದಿ ತರಿಸಿಕೊಂಡು ನಿರ್ಧರಿಸಬಹುದು.

–ಪ್ರೊ.ಲೋಕನಾಥ್, ಕುಲಪತಿ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದಲೇ ಪಿಹೆಚ್.ಡಿ ಪ್ರವೇಶ ಪರೀಕ್ಷೆ ನಡೆಸಲು ನಿರ್ಧರಿಸಲಾಗಿದೆ. ಅದರಿಂದ ವಿಶ್ವವಿದ್ಯಾನಿಲಯಗಳ ಸ್ವಾಯತ್ತತೆಗೆ ಧಕ್ಕೆಯಾಗುತ್ತದೆ ಎಂದು ಸದಸ್ಯರು ತಿಳಿಸಿದರು. ಈ ಸಂಬಂಧ ಮಾತನಾಡಿದ ಕುಲಪತಿಗಳು, ವಿವಿಗಳು ಪರೀಕ್ಷೆ ನಡೆಸುವುದರಿಂದ ಯಾವುದೇ ಭಾಗದ ವಿದ್ಯಾರ್ಥಿಗಳಿಗೆ ತೊಂದರೆಯಾಗಿಲ್ಲ. ಫೆ.8ರಂದು ಇಲಾಖೆ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸುವುದಾಗಿ ಭರವಸೆ ನೀಡಿದರು.

ಇಂಜಿನಿಯರಿಂಗ್ ಕಾಲೇಜು ಕಾಣಿಸುತ್ತಿಲ್ಲ!: ಮೈಸೂರು ವಿವಿ ಅರಂಭಿಸಿರುವ ಇಂಜಿನಿಯರಿಂಗ್ ಕಾಲೇಜು ಕಾಣಿಸುತ್ತಿಲ್ಲ ಎಂದು ಸ್ನೇಹಿತರೊಬ್ಬರು ಹೇಳುತ್ತಿದ್ದರು. ಅದು ನಡೆಯುತ್ತಿದೆಯೋ ಇಲ್ಲವೋ ಎಂದು ಅವರು ಕೇಳಿದರು ಎಂದು ಸದಸ್ಯರೊಬ್ಬರು ಸಭೆಯ ಗಮನ ಸೆಳೆದಾಗ ಪ್ರತಿಕ್ರಿಯಿಸಿದ ಪ್ರೊ.ಲೋಕನಾಥ್, ಕಾಲೇಜನ್ನು ಬೆಳಕಿಗೆ ತರಲಾಗುವುದು ಎಂದು ಮಾರ್ಮಿಕವಾಗಿ ನುಡಿದರು.

ಚಿನ್ನದ ಪದಕ, ದತ್ತಿ ಸ್ಥಾಪನೆ: ಲೇಟ್ ಅಮರಾವತಿ ಮತ್ತು ಲೇಟ್ ಕೃಷ್ಣಾಚಾರಿ ನಗದು ಬಹುಮಾನ, ಪ್ರೊ. ಮಲ್ಲಿನಾಥ ಕುಂಬಾರರ ಅಭಿನಂದನಾ ನಗದು ಬಹುಮಾನ, ಪ್ರೊ.ಬಿ.ಎಸ್.ಕಿರಣಗಿ ಚಿನ್ನದ ಪದಕ ಮತ್ತು ವಿವಿಧ ದತ್ತಿ ಸ್ಥಾಪನೆ, ವಿವಿಧ ಕಾಲೇಜುಗಳಿಗೆ ಸಂಯೋಜನೆ, 9 ಸರ್ಕಾರಿ ಕಾಲೇಜುಗಳಲ್ಲಿ ಬಿಸಿಎ ಕೋರ್ಸ್ ಆರಂಭಿಸಲು ಸಭೆಯು ಒಪ್ಪಿಗೆ ನೀಡಿತು.

ಪರೀಕ್ಷಾಂಗ ಕುಲಸಚಿವ ಪ್ರೊ. ಮಹದೇವನ್, ಹಣಕಾಸು ಅಧಿಕರಿ ಕೆ.ಎಸ್. ರೇಖಾ ಹಾಗೂ ಶೈಕ್ಷಣಿಕ ಮಂಡಳಿ ಸದಸ್ಯರು ಸಭೆಯಲ್ಲಿ ಉಪಸ್ಥಿತರಿದ್ದರು.

ಮೈಸೂರಲ್ಲೂ ಎಇಪಿಎಸ್ ದುರ್ಬಳಕೆ; ಸೈಬರ್ ವಂಚಕರ ಕೈಚಳಕ

ಸದ್ದಿಲ್ಲದೆ ಖಾತೆಯಲ್ಲಿ ಹಣ ಮಂಗಮಾಯ





ಮೈಸೂರು,ಜ.31(ಪಿಎಂ)– ಬಯೋಮೆಟ್ರಿಕ್ ಡೇಟಾ ಮತ್ತು ಫಿಂಗರ್ ಪ್ರಿಂಟ್ ಕದ್ದು 'ಆಧಾರ್ ಎನೇಬಲ್ ಪೇಮೆಂಟ್ ಸಿಸ್ಟಂ (ಎಇಪಿಎಸ್)' ದುರ್ಬಳಕೆ ಮಾಡಿಕೊಳ್ಳುವ ಮೂಲಕ ಬ್ಯಾಂಕ್ ಖಾತೆಗಳಿಂದ ಹಣ ದೋಚುವ ಸೈಬರ್ ಅಪರಾಧ ಇದೀಗ ಮೈಸೂರಿಗೂ ಕಾಲಿಟ್ಟಿದೆ.

ಸೈಬರ್ ಖದೀಮರು ಮೈಸೂರಿನಲ್ಲೂ ತಮ್ಮ ಕೈಚಳಕ ಶುರು ಮಾಡಿದ್ದು, ಇದ್ದಕ್ಕಿದ್ದಂತೆ ಹಣ ಡ್ರಾ ಆಗಿರುವ ಸಂದೇಶ ಮೊಬೈಲ್‌ಗೆ ಬರುತ್ತಿದ್ದಂತೆ ಖಾತೆದಾರರು ತಬ್ಬಿಬ್ಬಾಗಿ ತಮ್ಮ ಬ್ಯಾಂಕ್ ಶಾಖೆಯತ್ತ ದೌಡಾಯಿಸುತ್ತಿದ್ದಾರೆ. ಕಳೆದ ಮೂರು ತಿಂಗಳಿಂದ ಈ ವಂಚನೆ ಮೈಸೂರು ನಗರದಲ್ಲಿ ಆಗಾಗ್ಗೆ ನಡೆಯುತ್ತಿದ್ದು, 15ರಿಂದ 20 ಪ್ರಕರಣಗಳು ನಡೆದಿವೆ ಎನ್ನುತ್ತಿವೆ ಪೊಲೀಸ್ ಮೂಲಗಳು.

ಮೈಸೂರಿನ ನಿವಾಸಿ ಕೆ.ಪವನ್‌ಕುಮಾರ್ ಅವರ ಖಾತೆಯಿಂದ ಮಂಗಳವಾರ ಮಧ್ಯಾಹ್ನ 3.34ರ ವೇಳೆಯಲ್ಲಿ 7,500 ರೂ. ಹಣ ಡ್ರಾ ಆಗಿರುವ ಸಂದೇಶ ಅವರ ಮೊಬೈಲ್‌ಗೆ ಬಂದಿದೆ. ತಾವು ಯಾವುದೇ ಹಣ ಡ್ರಾ ಮಾಡಿಲ್ಲದ ಹಿನ್ನೆಲೆಯಲ್ಲಿ ಗಾಬರಿಗೊಂಡ ಅವರ ತಕ್ಷಣ ತಾವು ಖಾತೆ ಹೊಂದಿರುವ ಮೈಸೂರಿನ ಚಾಮುಂಡಿಪುರಂನ ಎಸ್‌ಬಿಐ ಬ್ಯಾಂಕ್ ಶಾಖೆಗೆ ಭೇಟಿ ನೀಡಿ ವಿಚಾರಣೆ ಮಾಡಿದಾಗ, ಎಇಪಿಎಸ್ ದುರ್ಬಳಕೆ ಮೂಲಕ ಸೈಬರ್ ವಂಚಕರು ಹಣ ಲೂಟಿ ಮಾಡಿರುವುದು ಗೊತ್ತಾಗಿದೆ.

ಆಧಾರ್ ಬಯೋಮೆಟ್ರಿಕ್ ಲಾಕ್, ಅನ್‌ಲಾಕ್

ಎಂ ಆಧಾರ್ ಆ್ಯಪ್ ಅಥವಾ ಮೈ ಆಧಾರ್ ಪೋರ್ಟಲ್ ಮೂಲಕ ಆಧಾರ್ ಬಯೋಮೆಟ್ರಿಕ್ ಲಾಕ್ ಮಾಡುವುದರಿಂದ ಎಇಪಿಎಸ್ ದುರ್ಬಳಕೆ ಮೂಲಕ ನಡೆಯುವ ವಂಚನೆಯಿಂದ ತಪ್ಪಿಸಿಕೊಳ್ಳಬಹುದು. ಅಗತ್ಯವಿದ್ದಾಗ ಅನ್‌ಲಾಕ್ ಮಾಡಿಕೊಳ್ಳಲೂ ಅವಕಾಶವಿದೆ ಎಂದು ಸೈಬರ್ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಸದ್ಯ ಈ ವಿಧಾನ ಸೂಕ್ತ ಎಂದು ಈಗಾಗಲೇ ಹಲವರು ಇದನ್ನು ಅನುಸರಿಸುತ್ತಿದ್ದಾರೆ. ಆದರೆ ಸೈಬರ್ ಖದೀಮರು ಇನ್ಯಾವ ಕಳ್ಳ ದಾರಿ ಹುಡುಕಿಕೊಳ್ಳುತ್ತಾರೋ ಎಂಬ ಆತಂಕವೂ ಇದ್ದೇ ಇದೆ. ಇನ್ನು ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಆಯಾಯ ಪ್ರದೇಶಗಳಲ್ಲಿ ಸ್ಥಳೀಯ ಆಡಳಿತಗಳು ಸಾರ್ವಜನಿಕರಿಗೆ ಮಾಹಿತಿ ನೀಡುವುದು ಅಗತ್ಯವಿದೆ. ಆದರೆ ಇದು ಪರಿಣಾಮಕಾರಿಯಾಗಿ ನಡೆಯುತ್ತಿಲ್ಲ ಎಂಬ ಆರೋಪವೂ ಕೇಳಿ ಬಂದಿದೆ. ಇನ್ನಾದರೂ ಸಂಬಂಧಿಸಿದವರು ಎಚ್ಚೆತ್ತುಕೊಂಡು ಮುನ್ನಚ್ಚರಿಕೆ ಕ್ರಮಗಳ ಬಗ್ಗೆ ಅರಿವು ಮೂಡಿಸಲು ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳಬೇಕಿದೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಕೆ.ಪವನ್ ಕುಮಾರ್, ನಿಮ್ಮ ಎಇಪಿಎಸ್ ನಗದು ಹಿಂಪಡೆಯುವಿಕೆ ಯಶಸ್ವಿಯಾಗಿದೆ ಎಂದು ನನ್ನ ಮೊಬೈಲ್‌ಗೆ ಎಸ್‌ಎಂಎಸ್ ಬಂದಿತು. ಆದರೆ ನಾನು ಹಣ ಡ್ರಾ ಮಾಡದ ಹಿನ್ನೆಲೆಯಲ್ಲಿ ಗಾಬರಿಯಾಯಿತು. ಹೀಗಾಗಿ ಕೂಡಲೇ ಬ್ಯಾಂಕಿನ ಶಾಖೆಗೆ ಪಾಸ್‌ಬುಕ್ ತೆಗೆದುಕೊಂಡು ಹೋದೆ. ಆಧಾರ್ ಅಪ್‌ಡೇಟ್ ಮಾಡಿಸಲು ಹೆಬ್ಬೆಟ್ಟು ಕೊಟ್ಟಿದ್ದರೆ, ಅದನ್ನು ಬಳಸಿಕೊಂಡು ಯಾರೋ ದುಷ್ಕರ್ಮಿಗಳು ಹಣ ಡ್ರಾ ಮಾಡುವ ಕೃತ್ಯ ನಡೆಸುತ್ತಿದ್ದಾರೆ. ಇಂದು ನಮ್ಮ ಶಾಖೆಯಲ್ಲಿ ಈ ರೀತಿ ಆಗಿರುವುದರಲ್ಲಿ ನೀವು ಮೂರನೇಯವರು ಎಂದು ಬ್ಯಾಂಕ್‌ನವರು ತಿಳಿಸಿದರು ಎಂದು ಆತಂಕ ವ್ಯಕ್ತಪಡಿಸಿದರು. ಇತ್ತೀಚೆಗೆ ನಿಮ್ಮ ಶಾಖೆಯಲ್ಲೇ ಫಿಂಗರ್ ಪ್ರಿಂಟ್ ಸ್ಕ್ಯಾನ್ ಮಾಡಿಸಿದ್ದೇನೆ. ಅದಕ್ಕಿಂತ ಮುಂಚೆ ಬೇರೆ ಎಲ್ಲಿಯೂ ಕೊಟ್ಟಿಲ್ಲ ಎಂದೆ. ಕೊನೆಗೆ ಆಧಾರ್ ನಂಬರ್ ಬ್ಲಾಕ್ ಮಾಡಿಸಲು ಅರ್ಜಿ ಕೇಳಿ ಸ್ವೀಕರಿಸಿದರು. ಆಧಾರ್ ನಂಬರ್ ಜೊತೆಗೆ ನನ್ನ ಖಾತೆಯನ್ನು ಬ್ಲಾಕ್ ಮಾಡಿದರು. ಇನ್ನು ಬೇರೆ ಖಾತೆಗಳನ್ನು ಹೊಂದಿದ್ದರೆ ಆಧಾರ್ ನಂಬರ್ ಬ್ಲಾಕ್ ಮಾಡಿಸಿ ಎಂದೂ ಸಲಹೆ ನೀಡಿದರು. ನನ್ನ ಮುಂದೆಯೇ ಇದೇ ರೀತಿ ವಂಚನೆಗೆ ಒಳಗಾಗಿರುವ ಮೂರು ಅರ್ಜಿಗಳನ್ನು ತೋರಿಸಿದರು. ನನ್ನ ಖಾತೆಯಿಂದ ನನಗೆ ಅರಿವಿಲ್ಲದೇ ಹಣ ಡ್ರಾ ಮಾಡಿರುವ ಸಂಬಂಧ ಮೈಸೂರು ಸೆನ್ ಪೊಲೀಸ್ ಠಾಣೆ ಮತ್ತು ವಿದ್ಯಾರಣ್ಯಪುರಂ ಪೊಲೀಸ್ ಠಾಣೆಗೆ ದೂರು ನೀಡಿದ್ದೇನೆ ಎಂದು ತಿಳಿಸಿದರು.

ಸೈಬರ್ ಮಹಾ ವಂಚನೆ ಜಾಲ ಬಯಲು; 11 ಖದೀಮರ ಬಂಧನ

ದೇಶಾದ್ಯಂತ ಉದ್ಯೋಗ, ಹೂಡಿಕೆ ಮೋಸದ ದಂಧೆ; ಕರ್ನಾಟಕದಲ್ಲೇ 158 ಕೋಟಿ ವಂಚನೆ

ಬೆಂಗಳೂರು, ಜ.31– ಆನ್‌ಲೈನ್ ಉದ್ಯೋಗ ಮತ್ತು ಹೂಡಿಕೆ ವಂಚನೆ ದಂಧೆಯನ್ನು ಭೇದಿಸಿರುವ ಸೈಬರ್ ಕ್ರೈಂ ಪೊಲೀಸರು 11 ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ. ಹೆಚ್ಚಿನ ಬಡ್ಡಿದರ ನೀಡುವ ಆಸೆ ತೋರಿಸಿ ಹಣವನ್ನು ಹೂಡಿಕೆ ಮಾಡಲು ಜನರಿಗೆ ಆಮಿಷವೊಡ್ಡುತ್ತಿದ್ದ 11 ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ. ದೇಶಾದ್ಯಂತ ವರದಿಯಾದ 2,143 ಪ್ರಕರಣಗಳಲ್ಲಿ ಬಂಧಿತರು ಆರೋಪಿಗಳು ಎಂದು ವರದಿಯಾಗಿದೆ, ಈ 11 ಮಂದಿ ಕರ್ನಾಟಕದಲ್ಲಿ 158.94 ಕೋಟಿ ರೂ. ವಂಚಿಸಿದ್ದಾರೆ ಎಂದು ತಿಳಿದು ಬಂದಿದೆ. ರಾಜ್ಯದಲ್ಲಿ ಈ ಗ್ಯಾಂಗ್ ಕನಿಷ್ಠ 265 ಜನರನ್ನು ವಂಚಿಸಿದ್ದು, ಅವರಲ್ಲಿ 135 ಮಂದಿ ಬೆಂಗಳೂರಿನವರಾಗಿದ್ದಾರೆ.

ಆರೋಪಿಗಳು ಗೃಹಿಣಿಯರು ಮತ್ತು ಇತರರಿಗೆ ಮನೆಯಿಂದ ಕೆಲಸ ನೀಡುವ ಮೂಲಕ ಟಾರ್ಗೆಟ್ ಮಾಡುತ್ತಿದ್ದರು. ಅವರು ಆರಂಭದಲ್ಲಿ ತಾವು ಮಾಡುವ ಸಣ್ಣ ಹೂಡಿಕೆಗಳಿಗೆ ಹೆಚ್ಚಿನ–ಬಡ್ಡಿದರಗಳನ್ನು ನೀಡುತ್ತಿದ್ದರು. ಸಂತ್ರಸ್ತರು ಬಲೆಗೆ ಬಿದ್ದು ಹೆಚ್ಚು ಹೂಡಿಕೆ ಮಾಡಲು ಪ್ರಾರಂಭಿಸಿದ ನಂತರ, ಆರೋಪಿಗಳು ಬ್ಯಾಂಕ್‌ಗಳಿಂದ ಹಣವನ್ನು ಪಡೆದು ಪರಾರಿಯಾಗುತ್ತಿದ್ದರು. ಆರೋಪಿಗಳಲ್ಲಿ ನಾಲ್ವರು ಮಹಾರಾಷ್ಟ್ರದವರು, ಐವರು ತೆಲಂಗಾಣ ಮತ್ತು ಇಬ್ಬರು ಕರ್ನಾ



ಟಕದವರು. ಈ ಆರೋಪಿಗಳು 28 ರಾಜ್ಯಗಳ ಸಂತ್ರಸ್ತರಿಗೆ ವಂಚಿಸಿದ್ದಾರೆ. ಈ ರೀತಿ ವಂಚಿಸಲು ಬಳಸಿದ ಅದೇ 30 ಬ್ಯಾಂಕ್ ಖಾತೆ ಸಂಖ್ಯೆಗಳ ಆಧಾರದ ಮೇಲೆ 2,143 ಪ್ರಕರಣಗಳನ್ನು ದಾಖಲಿಸಲಾಗಿದೆ. ಎಲ್ಲಾ 30 ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲಾಗಿದೆ. ಉಳಿದ ಹಣವನ್ನು ಗ್ಯಾಂಗ್ ಹಿಂಪಡೆದಿದ್ದರಿಂದ ಪೊಲೀಸರು ಕೇವಲ 62 ಲಕ್ಷ ರೂ. ಮಾತ್ರ ವಶಕ್ಕೆ ಪಡೆಯಲಾಗಿದೆ.

ಹನ್ನೊಂದು ಮೊಬೈಲ್ ಫೋನ್‌ಗಳು, ಎರಡು ಲ್ಯಾಪ್‌ಟಾಪ್‌ಗಳು, ಸಿಮ್ ಕಾರ್ಡ್‌ಗಳು, ಚೆಕ್ ಬುಕ್‌ಗಳು ಮತ್ತು ಇತರ ಬೆಲೆಬಾಳುವ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಅಧಿಕಾರಿಗಳು 11 ಆರೋಪಿಗಳನ್ನು ವಶಕ್ಕೆ ಪಡೆದು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ. ಗ್ಯಾಂಗ್ ಒಂದು ವರ್ಷಕ್ಕೂ ಹೆಚ್ಚು ಕಾಲ ಸಕ್ರಿಯವಾಗಿದೆ. ಎನ್‌ಸಿಆರ್‌ಬಿ ಪೋರ್ಟಲ್‌ನಿಂದ 2,143 ಪ್ರಕರಣಗಳ ವಿವರಗಳನ್ನು ಪಡೆಯಲಾಗಿದೆ.

ಆರೋಪಿಗಳ ವಿರುದ್ಧ ಬೆಂಗಳೂರಿನ 14 ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳಿವೆ. 11 ಆರೋಪಿಗಳ ಪೈಕಿ ಕೆಲವರು ಖಾತೆದಾರರಾಗಿದ್ದಾರೆ. ವಿದೇಶದಿಂದ ಕಾರ್ಯಾಚರಣೆ ನಡೆಸುತ್ತಿರುವ ಹೆಚ್ಚಿನ ಗ್ಯಾಂಗ್‌ಗಳಿವೆ ಎಂದು ಪೊಲೀಸರು ಶಂಕಿಸಿದ್ದಾರೆ. ಎಲ್ಲಾ 11 ಆರೋಪಿಗಳನ್ನು ಬಂಧಿಸಿರುವುದು ಇದೇ ಮೊದಲು. ಗ್ಯಾಂಗ್‌ನ ವಿಧಾನ ಒಂದೇ ಆಗಿರುತಿತ್ತು. ಎಲ್ಲಾ 30 ಖಾತೆ ಸಂಖ್ಯೆಗಳು ಸಹ ಒಂದೇ ಆಗಿರುತ್ತವೆ. ಇದು ಬಹಳ ಸುಸಜ್ಜಿತವಾದ ಸಂಘಟಿತ ಅಪರಾಧ ಸಿಂಡಿಕೇಟ್ ಆಗಿದೆ. ಅವರು ವಿಭಿನ್ನ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ಹೊಂದಿದ್ದರು ಎಂದು ಬೆಂಗಳೂರು ಪೊಲೀಸ್ ಆಯುಕ್ತ ಬಿ.ದಯಾನಂದ ಹೇಳಿದ್ದಾರೆ.

ಇದೇ ಸೈಬರ್ ಕ್ರೈಂ ಪೊಲೀಸರು ಈ ಹಿಂದೆ ಸಾವಿರಾರು ಜನರಿಗೆ 854 ಕೋಟಿ ರೂಪಾಯಿ ವಂಚನೆ ಮಾಡಿದ್ದ ಮತ್ತೊಂದು ದಂಧೆಯನ್ನು ಬೇಧಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ವಂಚನೆಗೆ ಸಂಬಂಧಿಸಿದಂತೆ ಸುಮಾರು 5,000 ಪ್ರಕರಣಗಳು ದಾಖಲಾಗಿವೆ. ಬೆಂಗಳೂರಿನಲ್ಲಿ 17 ಪ್ರಕರಣಗಳು ದಾಖಲಾಗಿದ್ದು, 60 ಲಕ್ಷ ರೂ. ವಶಕ್ಕೆ ಪಡೆಯಲಾಗಿದೆ.



ಮೈಸೂರಿನ ಕನಕದಾಸನಗರದಲ್ಲಿರುವ ಸುಪ್ರೀಮ್ ಪಬ್ಲಿಕ್ ಸ್ಕೂಲ್ ಆವರಣದಲ್ಲಿ ಸುಪ್ರೀಮ್ ಸಂಭ್ರಮೋತ್ಸವ ಕಾರ್ಯಕ್ರಮ ನಡೆಯಿತು. ಖ್ಯಾತ ರಂಗಕರ್ಮಿ, ಚಲನಚಿತ್ರ ನಟ ಮಂಡ್ಯ ರಮೇಶ್ ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ವೇಳೆ ವಿನಯ ವಿಠಲ, ಜೈನಹಳ್ಳಿ ಸತ್ಯನಾರಾಯಣಗೌಡ, ಸೀನಿಯರ್ ಸಬ್ ರಿಜಿಸ್ಟ್ರಾರ್ ವಿವೇಕ್ ಇತರರು ಉಪಸ್ಥಿತರಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ನಂಜನಗೂಡು ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಸರಳ ಸಾಮೂಹಿಕ ವಿವಾಹ

ದಾಂಪತ್ಯ ಜೀವನಕ್ಕೆ ಕಾಲಿಟ್ಟ 8 ಜೋಡಿಗಳು



ದಾಂಪತ್ಯ ಜೀವನಕ್ಕೆ ಕಾಲಿಟ್ಟ ಜೋಡಿಗಳು. ವಿವಾಹ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಸಂಬಂಧಿಕರು.

ನಂಜನಗೂಡು, ಜ.31– ಧಾರ್ಮಿಕ ದತ್ತಿ ಇಲಾಖೆ, ಜಿಲ್ಲಾಡಳಿತ ಮತ್ತು ಶ್ರೀಕಂಠೇಶ್ವರಸ್ವಾಮಿ ದೇವಾಲಯದ ವತಿಯಿಂದ ಮಾಂಗಲ್ಯಭಾಗ್ಯ ಯೋಜನೆಯಡಿಯಲ್ಲಿ ದೇವಸ್ಥಾನದಲ್ಲಿ ನಡೆದ ಸರಳ ಸಾಮೂಹಿಕ ವಿವಾಹದಲ್ಲಿ ಮಂಡ್ಯ ತಾಲೂಕಿನ 1 ಜೋಡಿ, ಮೈಸೂರು ತಾಲೂಕಿನ 1 ಜೋಡಿ, ನಂಜನಗೂಡು ತಾಲೂಕಿನ 3 ಜೋಡಿ, ನರಸೀಪುರ ತಾಲೂಕಿನ 2 ಜೋಡಿ ಸೇರಿದಂತೆ 8 ಜೋಡಿಗಳು ಸತಿ–ಪತಿಗಳಾಗುವ ಮೂಲಕ ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ದೇವಾಲಯದ ವತಿಯಿಂದ ವರನಿಗೆ ಶರ್ಟು, ಪಂಚೆ ಕೊಂಡುಕೊಳ್ಳಲು 5 ಸಾವಿರ, ವಧುವಿಗೆ ಸೀರೆ, ಕುಪ್ಪಸ ಕೊಂಡುಕೊಳ್ಳಲು 10 ಸಾವಿರ ರೂಗಳನ್ನು ಮತ್ತು 8 ಗ್ರಾಂ ತೂಕದ ಚಿನ್ನದ ತಾಳಿ ಹಾಗೂ 2 ಚಿನ್ನದ ಗುಂಡುಗಳನ್ನು ಉಚಿತವಾಗಿ ವಿತರಿಸಲಾಯಿತು. ಶಾಸಕ ದರ್ಶನ್ ಧ್ರುವನಾರಾಯಣ್ ಅವರು ನೂತನ ದಂಪತಿಗಳಿಗೆ ಮಾಂಗಲ್ಯ ವಿತರಣೆ ಮಾಡಿದರು. ಚಾಮುಂಡೇಶ್ವರಿ ದೇವಾಲಯದ ಪ್ರಧಾನ ಅರ್ಚಕರಾದ ಶಶಿಶೇಖರ್ ದೀಕ್ಷಿತ್, ನೇತೃತ್ವ ವಹಿಸಿದ್ದರು. ಶ್ರೀಕಂಠ ಜೋಯಿಷ್ ರವರು ಮಂತ್ರಘೋಷ ನೆರವೇರಿಸಿದರು.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಶಿವಕುಮಾರ್, ಬಿ.ಎಸ್.ಸುಪ್ರಿತಾರನ್ನು ವರಿಸಿದರು, ಮೈಸೂರು ತಾಲೂಕಿನ ಮಾರ್ಬಳ್ಳಿ ಗ್ರಾಮದ ಚಂದ್ರ ಮತ್ತು ಶಾಂತಿ, ನರಸೀಪುರ ತಾಲೂಕಿನ ವಡೆಯಾಂಡಹಳ್ಳಿ ಗ್ರಾಮದ ಸುನೀಲ್ ಮತ್ತು ಮಮತಾ, ನರಸೀಪುರ ತಾಲೂಕಿನ ಬಾಬು ಜಗಜೀವನ ಗ್ರಾಮದ ಕೆ.ಮಹದೇವ ಮತ್ತು ಎಂ.ರಕ್ಷಿತಾ, ನಂಜನಗೂಡು ಪಟ್ಟಣದ ಶಂಕರಪುರ ಬಡಾವಣೆಯ ಗುರುಸಿದ್ದ ಮತ್ತು ಮಹದೇವಿ, ಎನ್.ಮಹದೇವಸ್ವಾಮಿ ಮತ್ತು ಮಂಜುಳಾ, ಕೆಂಪಿಸಿದ್ದನಹುಂಡಿ ಗ್ರಾಮದ ಎಂ.ಶಶಿಕುಮಾರ ಮತ್ತು ಶಕೀಲಾ, ಗುಂಡ್ಲುಪೇಟೆ ತಾಲೂಕಿನ ಬೆಳವಾಡಿ ಗ್ರಾಮದ ಆರ್.ಮಹದೇವಶೆಟ್ಟಿ ಮತ್ತು ಎಂ.ರಾಜೇಶ್ವರಿ ಸರಳ ಸಾಮೂಹಿಕ ಮದುವೆಯಾದರು.

ಇದೇ ಸಂಧರ್ಭದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ಶ್ರೀಕಂಠೇಶ್ವರನ ಸನ್ನಿಧಿಯಲ್ಲಿ ದೇವರ ಆಶೀರ್ವಾದದಿಂದ 8 ಜೋಡಿಗಳು ಸರಳ ಸಾಮೂಹಿಕ ವಿವಾಹದ ಮೂಲಕ ಮದುವೆಯಾಗಿ ಹೊಸ ಬದುಕಿಗೆ ಕಾಲಿಟ್ಟಿರುವುದು ಸಂತೋಷ, ನಿಮ್ಮ ವಿವಾಹ ಜೀವನ ಸುಖಕರವಾಗಿರಲಿ ಎಂದು ಶುಭಕೋರುತ್ತೇನೆ ಎಂದರಲ್ಲದೆ ಮದುವೆಗಳಲ್ಲಿ ದುಂದುವೆಚ್ಚವನ್ನು ತಪ್ಪಿಸಲು ಹಾಗೂ ಬಡವರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ಸರಳ ಸಾಮೂಹಿಕ ವಿವಾಹವನ್ನು ಏರ್ಪಡಿಸಲಾಗಿದ್ದು ಬಡವರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಲೋಕನಾಥ್ ಮಾತನಾಡಿ ಬಡವರಿಗೆ ನೆರವಾಗುವ ಸದುದ್ದೇಶದೊಂದಿಗೆ ಸರ್ಕಾರ 2020ರಲ್ಲಿ ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ಸರಳ ಸಾಮೂಹಿಕ ವಿವಾಹ ನಡೆಸಲು ಮುಂದಾಯಿತು. ಕೊರೊನಾ ಕಾರಣದಿಂದ 2022ರಲ್ಲಿ ರಾಜ್ಯದಲ್ಲೇ ಪ್ರಥಮ ಬಾರಿಗೆ ನಂಜನಗೂಡಿನ ಶ್ರೀಕಂಠೇಶ್ವರನ ಸನ್ನಿಧಿಯಲ್ಲಿ ಸಾಮೂಹಿಕ ವಿವಾಹವನ್ನು ಏರ್ಪಡಿಸಲಾಗಿತ್ತು. ಈಗ 2ನೇ ಬಾರಿಗೆ ಸಾಮೂಹಿಕ ವಿವಾಹ ಏರ್ಪಡಿಸಿ ಕಳೆದ 2 ತಿಂಗಳಿಂದ ವಿವಿಧ ಜಿಲ್ಲೆಗಳಲ್ಲಿ ವ್ಯಾಪಕ ಪ್ರಚಾರವನ್ನು ನಡೆಸಲಾಗಿತ್ತು. ಅಂತಿಮವಾಗಿ 8 ಜೋಡಿಗಳು ಆಯ್ಕೆಯಾಗಿ ಸತಿಪತಿಗಳಾಗಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿಮಹೇಶ್, ಸಿ.ಎಂ.ಶಂಕರ್, ನಗರಸಭಾ ಸದಸ್ಯರಾದ ಪ್ರದೀಪ್, ಗಾಯತ್ರಿ, ಎಸ್.ಪಿ.ಮಹೇಶ್, ಎನ್.ಎಸ್.ಯೋಗೀಶ್, ಯೋಗೀಶ್, ಸಿದ್ದಿಖ್, ದೇವಾಲಯದ ಇಓ ಜಗದೀಶ್, ಚಾಮುಂಡೇಶ್ವರಿ ದೇವಾಲಯದ ಇಓ ಕೃಷ್ಣ ಇತರರು ಇದ್ದರು.

ಹೆಚ್.ಪಿ.ಮಂಜುನಾಥ್‌ಗೆ ಎಂಎಲ್‌ಸಿ ಸ್ಥಾನ ನೀಡಿ

ಹುಣಸೂರು: ತಾಲೂಕಿನಲ್ಲಿ ಒಳ್ಳೆಯ ಕೆಲಸ ಮಾಡಿ, ಅಲ್ಪ ಮತದಲ್ಲಿ ಸೋತಿರುವ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರಿಗೆ ವಿಧಾನಪರಿಷತ್ ಸದಸ್ಯ ಸ್ಥಾನ ನೀಡಬೇಕು ಎಂದು ಕಾಂಗ್ರೆಸ್ ಪಕ್ಷದ ತಾಲೂಕು ವಕ್ತಾರ ಹಾಗೂ ವಕೀಲ ಪುಟ್ಟರಾಜ್ ಒತ್ತಾಯಿಸಿದ್ದಾರೆ.

ನಗರದ ಪತ್ರಕರ್ತರ ಸಂಘದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನಸಭೆ ಚುನಾವಣೆಯಲ್ಲಿ ಸೋತರು ಧೃತಿಗೆಡದೆ, ಮನೆಯಲ್ಲಿ ಕೂರದೆ, ತಾಲೂಕಿನ ನೊಂದವರ ಪರ ಕೆಲಸ ಮಾಡುತ್ತಿರುವ ಅವರಿಗೆ ವಿಧಾನಪರಿಷತ್ ಸ್ಥಾನ ನೀಡಿದರೆ ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೆ ಶಕ್ತಿ ನೀಡಿದಂತಾಗುತ್ತದೆ ಎಂದರು.

ಕಾಂಗ್ರೆಸ್ ಪಕ್ಷದ ಯುವ ಮುಖಂಡ ಚಿಕ್ಕಸ್ವಾಮಿ ಮಾತನಾಡಿ, ಇವರಿಗೆ ವಿಧಾನ ಪರಿಷತ್ ಸದಸ್ಯ ಸ್ಥಾನ ನೀಡಬೇಕು ಎಂದು ಪಕ್ಷದ ವರಿಷ್ಠರಲ್ಲಿ ಮನವಿ ಮಾಡಿದರು.

ಅಂಬೇಡ್ಕರ್ ಸಂವಿಧಾನದಿಂದ ಎಲ್ಲರ ಬದುಕು ಹಸನು

ಮಾವತ್ತೂರಿನಲ್ಲಿ ಸಂವಿಧಾನ ಜಾಗೃತಿ ಜಾಥಾಕ್ಕೆ ಭವ್ಯ ಸ್ವಾಗತ



ಕೆ.ಆರ್.ನಗರ ತಾಲೂಕಿನ ಮಾವತ್ತೂರು ಗ್ರಾಮದಲ್ಲಿ ಸಂವಿಧಾನ ಜಾಗೃತಿ ಜಾಥಾ ರಥವನ್ನು ಗ್ರಾ.ಪಂ ಅಧ್ಯಕ್ಷೆ ಸುಕನ್ಯ ಕೃಷ್ಣನಾಯಕ, ಉಪಾಧ್ಯಕ್ಷೆ ರತ್ನಮ್ಮ ಮಲ್ಲೇಶ್, ಪಿಡಿಒ ಕೆ.ಎಂ.ಉಮೇಶ್ ಮತ್ತಿತರರು ಬರಮಾಡಿಕೊಂಡರು.

ಕೆ.ಆರ್.ನಗರ, ಜ.31– ಡಾ.ಬಿ.ಆರ್. ಅಂಬೇಡ್ಕರ್ ಅವರು ದೇಶಕ್ಕೆ ಅವಶ್ಯಕ ಮತ್ತು ಅದ್ಭುತವಾದ ಸಂವಿಧಾನ ರಚಿಸಿಕೊಟ್ಟಿದ್ದರಿಂದ ಎಲ್ಲರ ಬದುಕು ಹಸನಾಗಿ ನೆಮ್ಮದಿಯ ಜೀವನ ನಡೆಸುವಂತಾಗಿದೆ ಎಂದು ಮೈಸೂರಿನ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕಿ ಡಾ.ಪದ್ಮಶ್ರೀ ಹೇಳಿದರು.

ತಾಲೂಕಿನ ಮಾವತ್ತೂರು ಗ್ರಾಮದಲ್ಲಿ ನಡೆದ ಸಂವಿಧಾನ ಜಾಗೃತಿ ಜಾಥಾ ಮೆರವಣಿಗೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಜಗತ್ತಿನಲ್ಲಿಯೇ ವಿಶಿಷ್ಟವಾದ ಸಂವಿಧಾನ ನಮ್ಮ ದೇಶದಲ್ಲಿ ಇದ್ದು, ಅದರ ರಚನಾಕಾರರಾಗಿರುವ ಬಾಬಾ ಸಾಹೇಬರು ವಿಶ್ವವೇ ನಿಬ್ಬೆರಗಾಗುವಂತಹ ಅನುಕೂಲ ಮತ್ತು ಅವಕಾಶಗಳನ್ನು ಅದರಲ್ಲಿ ಅಡಗಿಸಿದ್ದಾರೆ ಎಂದರು. ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಕೆ.ಎಂ. ಉಮೇಶ್ ಮಾತನಾಡಿ, ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಪ್ರತಿಯೊಬ್ಬರು ಸ್ವಾತಂತ್ರ್ಯದಿಂದ ಬದುಕಿ ಸಮಾನತೆಯ ಅಧಿಕಾರ ಪಡೆಯಲು ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನ ಕಾರಣವಾಗಿದ್ದು, ಅದನ್ನು ರಚಿಸಿದ ಮಹಾನುಬಾವ ಮತ್ತು ಸಂವಿಧಾನವನ್ನು ನಾವು ಸದಾ ಅತ್ಯಂತ ಎತ್ತರದ ಸ್ಥಾನದಲ್ಲಿಟ್ಟು ಪೂಜಿಸಬೇಕೆಂದರು.

ಗ್ರಾಮಕ್ಕೆ ಆಗಮಿಸಿದ ಜಾಗೃತಿ ಜಾಥಾವನ್ನು ಪಂಚಾಯಿತಿ ಅಧ್ಯಕ್ಷೆ ಸುಕನ್ಯ ಕೃಷ್ಣನಾಯಕ, ಉಪಾಧ್ಯಕ್ಷೆ ರತ್ನಮ್ಮ ಮಲ್ಲೇಶ್ ಮತ್ತು ಸದಸ್ಯರಾದ ದೇವಯ್ಯ, ನಟರಾಜು, ತ್ಯಾಗರಾಜು, ಲೋಹಿತ್, ಸ್ಮಿತಾ, ಜ್ಯೋತಿ ಚನ್ನಕೇಶವ ಮತ್ತು ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳು ಬೈಸಿಕಲ್ ಜಾಥಾದೊಂದಿಗೆ ವಿಜೃಂಭಣೆಯಿಂದ ಬರಮಾಡಿಕೊಂಡರು.

ತಾಲೂಕು ಸಮಾಜ ಕಲ್ಯಾಣಾಧಿಕಾರಿ ಎಸ್.ಎಂ.ಅಶೋಕ್, ಸಹಾಯಕ ಕೃಷಿ ನಿರ್ದೇಶಕ ಮಲ್ಲಿಕಾರ್ಜುನ, ಗ್ರಾಪಂ ಕಾರ್ಯದರ್ಶಿ ಗೋಪಾಲಸ್ವಾಮಿ, ಸಿಆರ್‌ಪಿ ಎಲ್.ಎಂ.ರವಿ, ಪ್ರೌಢಶಾಲಾ ಮುಖ್ಯೋಪಾಧ್ಯಾಯ ಮುರುಳೀಧರ, ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕ ರಾಮೇಗೌಡ, ಗ್ರಂಥಾಲಯ ಮೇಲ್ವಿಚಾರಕ ರಂಗೇಶ್, ಪಂಚಾಯಿತಿ ಸಿಬ್ಬಂದಿಗಳು ಹಾಜರಿದ್ದರು.

ಕೇರಳ ವಾಹನ ತಡೆದು ಸುಲಿಗೆ: ಇಬ್ಬರ ಬಂಧನ, ಮತ್ತಿಬ್ಬರು ಪರಾರಿ

ಬಂಧಿತರು ಹೆಚ್.ಡಿ. ಕೋಟೆ ಬಳಿಯ ಕೋಳಗಾಲದವರು

ಹೆಚ್.ಡಿ.ಕೋಟೆ: ರಾತ್ರಿ ಹೊತ್ತಿನಲ್ಲಿ ಕೇರಳದ ವಾಹನಗಳನ್ನು ಅಡ್ಡಗಟ್ಟಿ ಬೆದರಿಕೆವೊಡ್ಡಿ ಹಣ ವಸೂಲಿ ಮಾಡುತ್ತಿದ್ದ ಇಬ್ಬರು ಯುವಕರನ್ನು ಹೆಚ್.ಡಿ.ಕೋಟೆ ಪಟ್ಟಣ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮೈಸೂರು ಮಾನಂದವಾಡಿ ಮುಖ್ಯ ರಸ್ತೆ ಕೋಳಗಾಲ ಗ್ರಾಮದ ಸಮೀಪ ಸರಗೂರು ತಾಲೂಕಿನ ಹಾದನೂರು ಗ್ರಾಮದ ಜಮೀನಿನಲ್ಲಿ ಶುಂಠಿ ಹಾಕಿದ್ದ ಕೇರಳ ರಾಜ್ಯದ ಪುಲ್‌ಪಳ್ಳಿ ಗ್ರಾಮದ ನಿವಾಸಿಗಳಾದ ವಿನೋದ್ ಹಾಗೂ ರಶೀದ್ ಅವರು ಜ.25ರಂದು ಮೈಸೂರು ಕಡೆಯಿಂದ ಹೆಚ್.ಡಿ.ಕೋಟೆಗೆ ಬರುತ್ತಿದ್ದ ವೇಳೆ ನಾಲ್ವರು ಯುವಕರುಗಳು ವಾಹನವನ್ನು ಅಡ್ಡಗಟ್ಟಿ ಹಣ ಕೊಡುವಂತೆ ಬೆದರಿಕೆವೊಡ್ಡಿದ್ದಾರೆ.

ಚಾಲಕ ವಿನೋದ್ ಹಣ ಇಲ್ಲ ಎಂದು ಹೇಳಿದಾಗ ಯುವಕರುಗಳು ವಾಹನ ಚಾಲಕ ವಿನೋದ್ ಹಾಗೂ ರಶೀದ್ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿದ್ದಾರೆ. ಭಯಗೊಂಡ ಅವರು ಗೂಗಲ್ ಪೇ ಮುಖಾಂತರ ಹಣ ನೀಡಿದರು ಎನ್ನಲಾಗಿದೆ. ಈ ಸಂಬಂಧ ಹೆಚ್.ಡಿ.ಕೋಟೆ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಿಸಿದ ಹಿನ್ನೆಲೆಯಲ್ಲಿ ಪೊಲೀಸರು, ಗೂಗಲ್ ಪೇ ಮಾಡಿದ ಫೋನ್ ನಂಬರನ್ನು ಪತ್ತೆ ಹಚ್ಚಿ ಇಬ್ಬರು ಕೋಳಗಾಲ ಗ್ರಾಮದ ಯುವಕರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.


> ನಂಜನಗೂಡು ಬಳಿ ಮಧ್ಯರಾತ್ರಿ ತಮಿಳುನಾಡು ಲಾರಿ ಅಡ್ಡಗಟ್ಟಿ ಹಣ ವಸೂಲಿ ಮಾಡುತ್ತಿರುವ ವಿಡಿಯೋವನ್ನು ಲಾರಿಯಲ್ಲಿದ್ದ ವ್ಯಕ್ತಿ ವಿಡಿಯೋ ಮಾಡಿದ್ದಾನೆ. ಆ ವಿಡಿಯೋ ವೈರಲ್ ಆಗಿದ್ದು ನಂಜನಗೂಡು ಪೊಲೀಸ್ ಠಾಣೆಗೆ, ವಿಡಿಯೋವನ್ನು ರವಾನಿಸಲಾಗಿದ್ದು ಅಪರಾಧಿಗಳನ್ನು ಪತ್ತೆಹಚ್ಚಲು ಮುಂದಾಗಿದ್ದೇವೆ. –ಶಬೀರ್ ಹುಸೇನ್, ಸರ್ಕಲ್ ಇನ್ಸ್‌ಪೆಕ್ಟರ್.

ತಲೆಮರೆಸಿಕೊಂಡಿರುವ ಮತ್ತಿಬ್ಬರು ಯುವಕರನ್ನು ಪತ್ತೆಹಚ್ಚಲು ಸರ್ಕಲ್ ಇನ್ಸ್‌ಪೆಕ್ಟರ್ ಶಬೀರ್ ಹುಸೇನ್ ಅವರ ನೇತೃತ್ವದಲ್ಲಿ ಎಸ್‌ಐ ಸುರೇಶ್‌ನಾಯಕ್, ದಫೆದಾರ್ ಜಗದೀಶ್, ಸಿಬ್ಬಂದಿಗಳಾದ ಮಹದೇವ್ ಸ್ವಾಮಿ, ಸೈಯದ್ ಕಬೀರ್ ಉದ್ದಿನ್, ಮೋಹನ್, ಯೋಗೇಶ್, ರಿತೀಶ್ ತಂಡ ರಚನೆ ಮಾಡಿ ಕಾರ್ಯಾಚರಣೆ ಕೈಗೊಂಡಿದ್ದಾರೆ. ನಂಜನಗೂಡು ಬಳಿ ಇತ್ತೀಚೆಗೆ ಮಧ್ಯರಾತ್ರಿ ತಮಿಳುನಾಡಿನ ಲಾರಿಯನ್ನು ತಡೆದು ಇದೇ ರೀತಿ ಧಮ್ಕಿ ಹಾಕಿ ಹಣ ವಸೂಲಿ ಮಾಡುತ್ತಿರುವ ವಿಡಿಯೋ ವೈರಲ್ ಆಗಿದ್ದು, ಆ ಭಾಗದಲ್ಲೂ ಇದೇ ಯುವಕರು ಮಾಡಿದ್ದಾರೆ ಎಂಬ ಸಂಶಯ ವ್ಯಕ್ತಪಡಿಸಿದ್ದಾರೆ.

ಹುಲಿ ದಾಳಿಯಿಂದ ಗಾಯಗೊಂಡ ವ್ಯಕ್ತಿ ಭೇಟಿ ಮಾಡಿ ಧೈರ್ಯ ತುಂಬಿದ ಶಾಸಕರು


ಮಲ್ಕುಂಡಿ, ಜ.31– ಹುಲಿ ದಾಳಿಯಿಂದ ಗಾಯಗೊಂಡು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ನಂಜನಗೂಡು ತಾಲೂಕಿನ ನಾಗಣಾಪುರ ಗ್ರಾಮದ ನಿವಾಸಿ ನಂಜುಂಡಸ್ವಾಮಿ ಅವರನ್ನು, ಶಾಸಕ ದರ್ಶನ್ ಧ್ರುವನಾರಾಯಣ್ ಭೇಟಿ ಮಾಡಿ ಗಾಯಾಳುಗೆ ಧೈರ್ಯ ತುಂಬಿದರು.

ಬಳಿಕ ಮಾತನಾಡಿದ ಅವರು, ಕಾಡಂಚಿನ ಗ್ರಾಮವಾದ ನಾಗಣಾಪುರ ಗ್ರಾಮದಲ್ಲಿ ಹುಲಿ ರೈತ ನಂಜುಂಡಸ್ವಾಮಿ ಅವರ ಮೇಲೆ ದಾಳಿ ಮಾಡಿದ್ದು ತಕ್ಷಣ ಹುಲಿಯನ್ನು ಸೆರೆ ಹಿಡಿಯಲಾಗಿದೆ. ರೈತರು ಭಯಪಡುವ ಅಗತ್ಯವಿಲ್ಲ, ಗಾಯಾಳುಗೆ ಸರ್ಕಾರದಿಂದ ಉತ್ತಮ ಚಿಕಿತ್ಸೆ ನೀಡಲಾಗುವುದು ಎಂದು ತಿಳಿಸಿದರು.



ನಂಜನಗೂಡು ತಾಲೂಕು ಹದಿನಾರುಮೋಳೆ ಗ್ರಾಮದ ಮೀನುಗಾರರ ಸಹಕಾರ ಸಂಘದ ಅಧ್ಯಕ್ಷರಾಗಿ ಸಿದ್ದಶೆಟ್ಟಿ ಉಪಾಧ್ಯಕ್ಷರಾಗಿ ಬಸವರಾಜು ಅವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನಿರ್ದೇಶಕರಾಗಿ ಗೋವಿಂದಶೆಟ್ಟಿ ಎ. ಮಹೇಶ್, ಆರ್. ರಂಗಸ್ವಾಮಿ, ಅಂಕಶೆಟ್ಟಿ ಮಹೇಶ್‌ನಾಯಕ, ಮಂಜುಳ, ತಾಯಮ್ಮ, ಜಯರಾಂ ಅವರುಗಳು ಉಪಸ್ಥಿತರಿದ್ದರು.

ಬುದ್ಧನ ಕಂಚಿನ ವಿಗ್ರಹ ಪ್ರತಿಷ್ಠಾಪನೆ



ಸರಗೂರು, ಜ.31– ತಾಲೂಕಿನ ಕಾಡಂಚಿನ ಗಡಿ ಗ್ರಾಮವಾದ ಯಶವಂತಪುರ ಗ್ರಾಮದಲ್ಲಿ ಬುದ್ಧನ ಕಂಚಿನ ವಿಗ್ರಹ ಪ್ರತಿಷ್ಠಾಪನೆ ಮಾಡಲಾಯಿತು.

ಗ್ರಾಪಂ ಸದಸ್ಯ ಶಿವಲಿಂಗಯ್ಯ ಯಶವಂತಪುರ ಅವರು ಮಾತನಾಡಿ, ತಾಲೂಕಿನಲ್ಲೆ ಮೊಟ್ಟ ಮೊದಲ ಬಾರಿಗೆ ನಮ್ಮ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಬುದ್ಧ ವಿಗ್ರಹ ಪ್ರತಿಷ್ಠಾಪನೆ ಮಾಡಿರುವುದು ನಮ್ಮೆಲ್ಲರಿಗೂ ಹೆಮ್ಮೆಯಿದೆ. ತಾಲೂಕಿನಲ್ಲೇ ಇದು ಮಾದರಿಯಾಗಿದೆ. ಇದರಿಂದ ಪ್ರೇರಣೆಗೊಂಡು ಮುಂದಿನ ದಿನಗಳಲ್ಲಿ ತಾಲೂಕಿನಾದ್ಯಂತ ಇಂತಹ ಕಾರ್ಯಕ್ರಮಗಳು ಜರುಗಲಿವೆ ಎಂದರು.

ಬುದ್ಧ–ಬಸವ–ಅಂಬೇಡ್ಕರವರ ಅಭಿಮಾನಿಗಳಾದರೆ ಸಾಲದು, ಜೊತೆಗೆ ಅವರುಗಳ ಅನುಯಾಯಿಗಳಾಗಬೇಕು. ಅವರ ವಿಚಾರ ಧಾರೆಗಳು ಮನೆಮನೆಗೆ ತಲುಪುವ ಮೂಲಕ ಅಸೂಯೆ, ಹೊಟ್ಟೆಕಿಚ್ಚು, ದುರಹಂಕಾರದಂತಹ ಮನಸ್ಥಿತಿಯಿಂದ ಹೊರಬರಬೇಕು. ದುಶ್ಚಟಗಳಿಂದ ದೂರವಿದ್ದು ಒಗ್ಗಟ್ಟಿನಿಂದ ಶಾಂತಿ ನೆಮ್ಮದಿ ಸಮಾನತೆಯ ಕಡೆಗೆ ಹೆಜ್ಜೆ ಹಾಕಬೇಕು ಎಂದು ಅವರು ಹೇಳಿದರು.

ಹೈರಿಗೆ ಶಿವರಾಜು ಮಾತನಾಡಿದರು. ಇದಕ್ಕೂ ಮುನ್ನ ಬುದ್ಧನ ಕಂಚಿನ ಮೂರ್ತಿಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ಮೆರವಣಿಗೆ ಮಾಡಿ ನಂತರ ಡಾ. ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಬುದ್ಧ ಪ್ರತಿಷ್ಠಾಪನೆಯನ್ನು ಮಾಡಲಾಯಿತು. ಪುಷ್ಪಾರ್ಚನೆ ಮಾಡಿದ ನಂತರ ನಳಂದ ವಿಶ್ವವಿದ್ಯಾನಿಲಯದ ಪ್ರಧಾನ ಕಾರ್ಯದರ್ಶಿಗಳಾದ ಪೂಜ್ಯ ಮಹಾತೇರಾ ಬೋದಿದತ್ತ ಬಂತೇಜಿ, ಸಾರನಾಥ ಬುದ್ಧ ವಿಹಾರದ ಮಾತೆ ಗೌತಮಿ ಬಂತೇಜಿರವರು ಪ್ರವಚನ ನೀಡಿದರು. ಕಂಚಿನ ವಿಗ್ರಹ ದಾನಿಗಳಾದ ಹುಣಸೂರು ತಾಲೂಕಿನ ಕುಡಿನೀರು ಮುದ್ದನಹಳ್ಳಿ ಗ್ರಾಮದ ಶೈಲಜಾ ಮಹದೇವಸ್ವಾಮಿ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ಶ್ರೀನಿವಾಸ್ ಸ್ವಾಗತಿಸಿ, ನಿರೂಪಿಸಿದರು.

ನೀರಿನ ಸಮಸ್ಯೆ ಬಗೆಹರಿಸಿದ ಶಾಸಕರು

ಹುಣಸೂರು ಕಾಲೇಜಿನಲ್ಲಿ ಪ್ರತ್ಯೇಕ ಕೊಳವೆ ಬಾವಿ ಕೊರೆಸಿದ ಹರೀಶ್‌ಗೌಡ



ಹುಣಸೂರು, ಜ.31– ನಗರದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ತಲೆದೋರಿದ್ದ ಕುಡಿಯುವ ನೀರಿನ ಸಮಸ್ಯೆಯನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಬಗೆಹರಿಸಿದ್ದು, ವಿದ್ಯಾರ್ಥಿನಿಯರು ಮತ್ತು ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

ಶಾಸಕ ಜಿ.ಡಿ.ಹರೀಶ್‌ಗೌಡರು ಈ ವಿಷಯ ಗಮನಕ್ಕೆ ಬರುತ್ತಿದ್ದಂತೆ ಪ್ರೌಢಶಾಲಾ ಆವರಣದಲ್ಲಿ ಬೋರ್‌ವೆಲ್ ಕೊರೆಸುವ ಮೂಲಕ ಶಾಲೆಯಲ್ಲಿ ನೀರಿನ ಸಮಸ್ಯೆಯನ್ನು ನಿವಾರಿಸಿದ್ದಾರೆ. ಈ ಶಾಲೆಗೆ ಪಕ್ಕದ ಕಾಲೇಜಿನಿಂದ ನೀರು ಸರಬರಾಜಾಗುತ್ತಿದ್ದು, ಕಾಲೇಜಿಗೆ ರಜೆ ಇದ್ದರೆ ಪ್ರೌಢಶಾಲೆಯಲ್ಲಿ ನೀರೂ ಬರುತ್ತಿರಲಿಲ್ಲ. ಈ ಬಗ್ಗೆ ಮಕ್ಕಳ ಪೋಷಕರು ಸತ್ಯ ಎಂಎಎಸ್ ಫೌಂಡೇಷನ್ ಗಮನಕ್ಕೆ ತಂದಿದ್ದರು. ಈ ಬಗ್ಗೆ ಸತ್ಯ ಫೌಂಡೇಷನ್‌ನವರು ಜನಸಂಪರ್ಕ ಸಭೆಯಲ್ಲಿ ಖುದ್ದು ಶಾಸಕರ ಗಮನಕ್ಕೆ ತಂದರು. ತಕ್ಷಣವೇ ಸ್ಪಂದಿಸಿ ಇಂದು ಪ್ರತ್ಯೇಕವಾಗಿ ಕೊಳವೆ ಬಾವಿ ಕೊರೆಸಿದ್ದಾರೆ.

ಗುರಿ, ಛಲ ಕಠಿಣ ಪರಿಶ್ರಮದಿಂದ ಸಾಧನೆ ಸಾಧ್ಯ

ಕಾಲೇಜು ವಾರ್ಷಿಕೋತ್ಸವದಲ್ಲಿ ತಹಶೀಲ್ದಾರ್ ಸುರೇಶ್ ಆಚಾರ್ ಅಭಿಪ್ರಾಯ



ತಿ.ನರಸೀಪುರ ಪಟ್ಟಣದ ವಿದ್ಯೋದಯ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಕಾಲೇಜು ವಾರ್ಷಿಕೋತ್ಸವ ಸಮಾರಂಭವನ್ನು ತಹಶೀಲ್ದಾರ್ ಸುರೇಶ್ ಆಚಾರ್ ಉದ್ಘಾಟಿಸಿದರು.

ತಿ.ನರಸೀಪುರ, ಜ.31– ವಿದ್ಯಾರ್ಥಿಗಳು ಜೀವನದಲ್ಲಿ ಗುರಿ ಮತ್ತು ಛಲ ಬೆಳೆಸಿಕೊಳ್ಳುವುದರ ಜೊತೆಗೆ ಕಠಿಣ ಪರಿಶ್ರಮದ ಮೂಲಕ ಸಾಧನೆಯ ಹಾದಿಯಲ್ಲಿ ನಡೆಯಬೇಕು ಎಂದು ತಹಶೀಲ್ದಾರ್ ಟಿ.ಜೆ.ಸುರೇಶ್ ಆಚಾರ್ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಪಟ್ಟಣದ ವಿದ್ಯೋದಯ ಪದವಿ ಪೂರ್ವ ಕಾಲೇಜಿನಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ ಕಾಲೇಜು ವಾರ್ಷಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಬದುಕಿನಲ್ಲಿ ಬರುವ ಕಷ್ಟ ಮತ್ತು ಸಾಧಿಸಬೇಕೆಂಬ ಛಲ ಹೊಂದಿದಾಗ ಮಾತ್ರವೇ ನಾವು ಗುರಿ ತಲುಪಲು ಸಾಧ್ಯ.ಹಾಗಾಗಿ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಗುರಿಯನ್ನು ನಿಗದಿಪಡಿಸಿಕೊಂಡು ಯಶಸ್ಸು ಸಾಧಿಸುವ ಕಡೆ ತಮ್ಮ ಗಮನ ಕೇಂದ್ರೀಕರಿಸಬೇಕೆಂದು ಕಿವಿಮಾತು ಹೇಳಿದರು.

ತಾ.ಪಂ ಇಒ ಕೃಷ್ಣ ಮಾತನಾಡಿ, ಉತ್ತಮ ಶಿಕ್ಷಣ ವಿದ್ಯಾರ್ಥಿಗಳಿಗೆ ಮಾತ್ರವಲ್ಲ ಸಮಾಜ ಹಾಗೂ ದೇಶಕ್ಕೆ ಕೊಡುಗೆಯನ್ನು ನೀಡುತ್ತದೆ. ಶಿಕ್ಷಕರು ವಿದ್ಯಾರ್ಥಿಗಳ ಬದುಕಿನ ನಾಯಕರು. ಅವರು ವಿದ್ಯಾರ್ಥಿಗಳ ತಪ್ಪನ್ನು ತಿದ್ದಿ, ಉತ್ತಮ ಕೆಲಸಗಳಿಗೆ ಪ್ರೋತ್ಸಾಹಿಸಿ ಸರಿದಾರಿಯತ್ತ ಕೊಂಡೊಯ್ಯುವರು. ಇಂತಹ ನಾಯಕರನ್ನು ಗೌರವಿಸುವುದು ವಿದ್ಯಾರ್ಥಿಗಳ ಆದ್ಯ ಕರ್ತವ್ಯವೂ ಹೌದು. ವಿದ್ಯಾರ್ಥಿಗಳು ತಮ್ಮ ಬದುಕಿನಲ್ಲಿ ಛಲ, ಆತ್ಮವಿಶ್ವಾಸ ಹಾಗೂ ಸಮಯ ಪರಿಪಾಲನೆಗೆ ಮಹತ್ವವನ್ನು ನೀಡಬೇಕು ಎಂದರು.

ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ ಮಾತನಾಡಿ ವಿದ್ಯಾರ್ಥಿಗಳು ತಮ್ಮ ಭವಿಷ್ಯ ರೂಪಿಸಿಕೊಳ್ಳಲು ಉತ್ತಮ ಮನಸ್ಥಿತಿ ಹೊಂದಿರಬೇಕು. ಉತ್ತಮ ವಾತಾವರಣದಲ್ಲಿ ವ್ಯಾಸಂಗ ಮಾಡುತ್ತಿರುವ ನೀವು ಕಾಲಹರಣ ಮಾಡದೇ ಯಾವ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದೀರೋ ಅದರ ಬಗ್ಗೆ ಪರಿಪೂರ್ಣತೆ ಗಳಿಸಿಕೊಳ್ಳಿ ಎಂದು ಸಲಹೆ ನೀಡಿದರು. ಇದೇ ವೇಳೆ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ ವಿಜೇತರಾದ ಕ್ರೀಡಾಪಟುಗಳಿಗೆ ಬಹುಮಾನ ವಿತರಿಸಲಾಯಿತು.

ಆಡಳಿತಾಧಿಕಾರಿ ಕೆ.ಪಿ.ಉದಯ ಕುಮಾರ್, ಪ್ರಾಂಶುಪಾಲರಾದ ಬಸವಣ್ಣಸ್ವಾಮಿ, ವಾನಸ, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ರವೀಶ್.ಪಿ ಎ.ರಾಮನಾಥನ್, ಡಾ.ಸಿ.ಕೆ. ಚಂದ್ರಪ್ಪ, ಎಂ.ಬಿ. ರವಿ, ನಾಗೇಂದ್ರ ಮೂರ್ತಿ, ಸವಿತ, ಕಾವ್ಯ, ಮಹದೇವಮ್ಮ, ತೇಜಸ್ವಿನಿ, ಮುಖ್ಯೋಪಾಧ್ಯಾಯ ಸುರೇಶ್, ಸುನೀತ, ಹರ್ಷಿತಾ, ಗಂಗಮಣಿ ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ಬ್ಲ್ಯೂ ಸ್ಟಾರ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಫೈಟರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಂಗಸಮುದ್ರ (ಕ)	4 ಪ್ರದರ್ಶನಗಳು
ರಾಜಕಮಲ್	
ಫೈಟರ್ (ಹಿಂ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಅಲೆಕ್ಸ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕಾಟೇರ (ಕ)	4 ಪ್ರದರ್ಶನಗಳು
ಪ್ರಭಾ	
ಗುಂಟೂರು ಖಾರಂ(ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಬ್ಯಾಚುಲರ್ ಪಾರ್ಟಿ (ಕ): ಬೆ.10.10ಕ್ಕೆ, ಮ.1ಕ್ಕೆ, ರಾ.7.10ಕ್ಕೆ, ಕಾಟೇರ (ಕ): ಮ.3.50ಕ್ಕೆ, ಮಲೈಕೊಟ್ಟೈ ವಾಲಿಬನ್ (ಮ): ರಾ.10.05ಕ್ಕೆ.
ಸ್ಕ್ರೀನ್ 2	ಅಲೆಕ್ಸಾ (ಕ): ಬೆ.10.15ಕ್ಕೆ, ಕೇಸ್ ಆಫ್ ಕೊಂಡಾಣ (ಕ): ಮ.1ಕ್ಕೆ, ಹನುಮಾನ್ (ಕ): ಮ.3.50ಕ್ಕೆ, ಫೈಟರ್ (3ಡಿ)(ಹಿಂ): ಸಂ.6.55ಕ್ಕೆ, ಫೈಟರ್ (ಹಿಂ): ರಾ.10.05ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.10.10ಕ್ಕೆ, ಮ.1.05ಕ್ಕೆ, ಸಂ.4ಕ್ಕೆ, ರಾ.7.05ಕ್ಕೆ, ಕಾಟೇರ (ಕ): ರಾ.10ಕ್ಕೆ.
ಸ್ಕ್ರೀನ್ 4	ಫೈಟರ್ (3ಡಿ)(ಹಿಂ): ಬೆ.9.40ಕ್ಕೆ, ಮ.12.50ಕ್ಕೆ, ಸಂ.4ಕ್ಕೆ, ರಾ.10.25ಕ್ಕೆ, ಫೈಟರ್ (ಹಿಂ): ರಾ.7.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಫೈಟರ್ (3ಡಿ)(ಹಿಂ): ಬೆ.7.40ಕ್ಕೆ, ಬೆ.11.15ಕ್ಕೆ, ಮ.2.50ಕ್ಕೆ, ಸಂ.6.25ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬ್ಯಾಚುಲರ್ ಪಾರ್ಟಿ (ಕ): ಬೆ.9.20ಕ್ಕೆ, ಸಂ.4ಕ್ಕೆ, 10.20ಕ್ಕೆ, ಫೈಟರ್ (ಹಿಂ): ಮ.12.25ಕ್ಕೆ, ಉಪಾಧ್ಯಕ್ಷ (ಕ): ರಾ.7.05ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.9ಕ್ಕೆ, ಹನುಮಾನ್ (ಕ): ಮ.12.05ಕ್ಕೆ, ಕಾಟೇರ (ಕ): ಮ.3.25ಕ್ಕೆ, ಕೇಸ್ ಆಫ್ ಕೊಂಡಾಣ (ಕ): ರಾ.10.30ಕ್ಕೆ ಮಲೈಕೊಟ್ಟೈ ವಾಲಿಬನ್ (ಮ): ರಾ.7.05ಕ್ಕೆ.
ಸ್ಕ್ರೀನ್ 4	ಫೈಟರ್ (3ಡಿ)(ಹಿಂ): ಬೆ.10.30ಕ್ಕೆ, ಮ.2.05ಕ್ಕೆ, ಸಂ.5.40ಕ್ಕೆ, ರಾ.9.15ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅನಿಮಲ್ (ಹಿಂ): ಬೆ.8.10ಕ್ಕೆ, ಬೆ.9.15ಕ್ಕೆ, ಬೆ.9.45ಕ್ಕೆ, ಬೆ.10.15ಕ್ಕೆ, ಮ.1.20ಕ್ಕೆ, ಮ.2.20ಕ್ಕೆ, ಸಂ.5.25ಕ್ಕೆ, ಸಂ.5.55ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ರಾ.10ಕ್ಕೆ, ರಾ.10.30ಕ್ಕೆ, ಅನಿಮಲ್ (ಕ): ಮ.1.50ಕ್ಕೆ, ಅನ್ನಪೂರ್ಣಿ (ತ): ಸಂ.4.15ಕ್ಕೆ, ಕಾಥರ್ ದಿ ಕೋರ್ (ಮ): ರಾ.10.15ಕ್ಕೆ, ಪಾರ್ಕಿಂಗ್ (ತ): ಮ.1.25ಕ್ಕೆ, ರಾ.7.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಬೆ.9.20ಕ್ಕೆ, ಮ.12.15ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.12.35ಕ್ಕೆ, ರಾ.7.05ಕ್ಕೆ, ಶೋಶಿತೆ (ಕ): ಬೆ.11ಕ್ಕೆ, ಟೈಗರ್ 3 (ಹಿಂ): ಮ.3.45ಕ್ಕೆ, ರಾ.10.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕ್ರೀಡೆಯಿಂದ ಮಾನಸಿಕ, ದೈಹಿಕ ಆರೋಗ್ಯ ವೃದ್ಧಿ



ವಿದ್ಯೋದಯ ಕಾಲೇಜಿನಲ್ಲಿ ನಡೆದ ಕ್ರಿಕೆಟ್ ಸ್ನೇಹ ಕ್ರೀಡಾಕೂಟದಲ್ಲಿ ಹಿರಿಯ ಶ್ರೇಣಿ ನ್ಯಾಯಾಧೀಶ ಜಿ.ಎಚ್.ಹನುಮಂತ ಮಾತನಾಡಿದರು.

ತಿ.ನರಸೀಪುರ: ಕ್ರೀಡಾ ಚಟುವಟಿಕೆಗಳಿಂದ ಮಾನಸಿಕ, ದೈಹಿಕ ಆರೋಗ್ಯ ವೃದ್ಧಿ ಜೊತೆಗೆ ಕ್ರೀಡಾಪಟುಗಳಲ್ಲಿ ಉತ್ತಮ ಬಾಂಧವ್ಯ ಬೆಳೆಯಲಿದೆ ಎಂದು ಪಟ್ಟಣದ ಹಿರಿಯ ಶ್ರೇಣಿ ನ್ಯಾಯಾಧೀಶ ಜಿ.ಹೆಚ್.ಹನುಮಂತ ತಿಳಿಸಿದರು.

ಪಟ್ಟಣದ ವಿದ್ಯೋದಯ ಕಾಲೇಜು ಕ್ರೀಡಾಂಗಣದಲ್ಲಿ ನ್ಯಾಯಾಂಗ ಇಲಾಖೆ, ವಕೀಲರ ಸಂಘ, ಅಬಕಾರಿ ಇಲಾಖೆ ಹಾಗೂ ಪೊಲೀಸ್ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ಸ್ನೇಹ ಕ್ರೀಡಾಕೂಟದಲ್ಲಿ ಮಾತನಾಡಿದ ಅವರು, ಪ್ರತಿನಿತ್ಯ ನಾವು, ವಕೀಲರು ಒತ್ತಡದಲ್ಲಿ ಕಾರ್ಯ ನಿರ್ವಹಿಸುತ್ತೇವೆ. ನ್ಯಾಯಾಧೀಶರು ಎಲ್ಲರೊಂದಿಗೆ ಬೆರೆಯಲು ಅವಕಾಶವಿಲ್ಲ. ಇಂತಹ ಸಮಯದಲ್ಲಿ ಎಲ್ಲರೊಂದಿಗೆ ನಗುತ್ತಾ, ಜೊತೆಯಾಗಿ ಕಾಲ ಕಳೆಯುತ್ತಿರುವುದು ಸಂತಸ ತಂದಿದೆ. ನಗು ಮನುಷ್ಯನ ಆರೋಗ್ಯದ ಟಾನಿಕ್ ಇದ್ದಂತೆ. ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ನಮ್ಮ ಒತ್ತಡ ಕಡಿಮೆಯಾಗಿ ಕ್ರಿಯಾಶೀಲರಾಗಿ ಕಾರ್ಯ ನಿರ್ವಹಿಸಬಹುದಾಗಿದೆ ಎಂದರು.

ಹಿರಿಯ ವಕೀಲ ಮಾದಪ್ಪ ಮಾತನಾಡಿ, ಕ್ರೀಡೆಯಲ್ಲಿ ಸೋಲು, ಗೆಲುವು ಮುಖ್ಯವಲ್ಲ. ಕ್ರೀಡಾಕೂಟದಲ್ಲಿ ಭಾಗವಹಿಸುವುದು ಮುಖ್ಯ ಎಂದರು. ಇದೇ ವೇಳೆ ನಡೆದ ಕ್ರೀಡಾಕೂಟದಲ್ಲಿ ನ್ಯಾಯಾಂಗ ಇಲಾಖೆ, ಎಂಎಂಎಸ್ ಹಾಗೂ ಟಿಎಸ್‌ಎಸ್ ತಂಡಗಳು ಭಾಗವಹಿಸಿದ್ದವು. ಅಂತಿಮವಾಗಿ ನ್ಯಾಯಾಂಗ ಇಲಾಖೆ ಗೆಲುವು ಸಾಧಿಸುವ ಮೂಲಕ ಟ್ರೋಫಿ ತನ್ನದಾಗಿಸಿಕೊಂಡಿತು.

ಎಂಎಂಎಸ್ ತಂಡದ ಮುಖ್ಯಸ್ಥ ಸೊಸ್ಲೆ ಮಹದೇವಸ್ವಾಮಿ ಕ್ರೀಡಾಕೂಟದಲ್ಲಿ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಿದ್ದರು. ಈ ವೇಳೆ ನ್ಯಾಯಾಧೀಶರಾದ ಚೇತನ್, ಅನ್ನದಾನಿ, ಮಂಜುನಾಥ್, ಕೆ.ಎನ್.ವೆಂಕಟೇಶ್, ಪುರಸಭಾ ಸದಸ್ಯ ತುಂಬಲ ಪ್ರಕಾಶ್, ವಕೀಲರ ಸಂಘದ ಮಾಜಿ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ, ವಕೀಲರಾದ ಜ್ಞಾನೇಂದ್ರಮೂರ್ತಿ, ಬಸವಣ್ಣ ಸಿದ್ದರಾಜು, ಉಮೇಶ್, ಉದಯ ಕುಮಾರ್, ತುಂಬಲ ಸಿದ್ದರಾಜು, ಶಿವಕುಮಾರ್, ನ್ಯಾಯಾಂಗ ಇಲಾಖೆ ತಂಡದ ಮಧುಸೂದನ್, ಬಸವನಾಯಕ, ವೆಂಕಟೇಶ್, ರಾಜಶೇಖರ್ ಮತ್ತಿತರರಿದ್ದರು.

ಫೆ.7, ಬಜೆಟ್ ಪೂರ್ವಭಾವಿ ಸಭೆ


ತಿ.ನರಸೀಪುರ,ಜ.31– ಪ್ರಸಕ್ತ ಸಾಲಿನ ಪಟ್ಟಣದ ಪುರಸಭೆಯ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ಬಜೆಟ್‌ನಲ್ಲಿ ಕ್ರಿಯಾಯೋಜನೆ ರೂಪಿಸಲು ಫೆ.7 ಬೆಳಗ್ಗೆ 11 ಗಂಟೆಗೆ ಬಜೆಟ್ ಪೂರ್ವಭಾವಿ ಸಭೆ ಆಯೋಜಿಸಲಾಗಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪಟ್ಟಣದ ಅಭಿವೃದ್ಧಿ ಸಲಹೆ ಸೂಚನೆ ನೀಡಬೇಕು ಎಂದು ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಹಸಿರು ನಮ್ಮ ಉಸಿರು

ಸವಿನೆನಪು



ಡಾ.ಬಿ.ಎಸ್.ಪ್ರಭಾಕರ್
1948-2008 ಮೈಸೂರು
ನಿಮ್ಮ ನೆನಪಿನಲ್ಲಿರುವ: ಪ್ರೀತಿ ಪಾತ್ರರು

STAR OF MYSORE
SPECIAL ISSUE

Star of Mysore is completing 46 years of service on 16th February 2024 and entering 47th year of publication. As in the past, this year too we will be publishing a Special Issue.

We request our advertisers and patrons to release their advertisements before 12th February to facilitate printing as per schedule.

HEAD OFFICE
0821-2496520 (5-LINES)
Ad Dept. - 0821-2496522 / 23
Email : ad@starofmysore.com

Maria G. Fernandes
Advt. Manager: 94485-25060
Joy Anthony Dove
Sr. Executive-Ad Sales
89516-68960
Prema
Sr. Executive Advertising
98805-49879

K.R. Circle Office : 0821-2431774
D.D. Urs Road Office : 0821-2428695
Kodagu Office : 97314-69871
Mandya Office : 87629-60325
Chamarajanagar : 92422-65657
Nanjangud :
98805-09200 / 99016-02226
T.N. Pura : 94483-05750
Hassan : 94484-01175
Bengaluru : 98440-46761

10ನೇ ವರ್ಷದ ಸವಿನೆನಪು



ಶ್ರೀ ಬರಕ್ಕಿ ಪಿ.ಮಂಜುನಾಥ್

ಸೂರ್ಯನಂತೆ ಮಿಂಚಿ ಹೋದ ನೀವು ಇಂದಿಗೆ ನಮ್ಮನ್ನಗಲಿ
10 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಪತ್ನಿ ಸುಚಿತ್ರ, ತಂದೆ ಬರಕ್ಕಿ ಪುಟ್ಟಸ್ವಾಮಿಗೌಡರು
ತಾಯಿ: ಜವರಮ್ಮ, ಅಣ್ಣಂದಿರು, ತಮ್ಮಂದಿರು, ಅಕ್ಕಂದಿರು, ತಂಗಿಯರು
ಮಕ್ಕಳು, ಮೊಮ್ಮಕ್ಕಳು ಹಾಗೂ ಬರಕ್ಕಿ ಕುಟುಂಬವರ್ಗದವರು, ಕೆ.ಜಿ.ಕೊಪ್ಪಲು, ಮೈಸೂರು